
# ಅಖಿಲ ಭಾರತ ಪತ್ರಿಕೆ

## ಜನವರಿ 2024



# ವಿಶ್ವಾಸ

ಬೆಲೆ : 15/-



ಫೋಟೋ: ಇಮೇಜಿಂಗ್ ಸಾವಿತ್ರಿ

ಸುಪ್ರಭೆಯ ಪಥದಿ ಸುಮನಸದ ಯಾತ್ರೆ ಸರಣಿಯೊಳು ಮೇಳವಾಗಿ

**– ಪುಟ್ಟು ಕುಲಕರ್ಣಿ**

**(ಪುಟ 62)**

**ಅಖಿಲ ಭಾರತ ಪತ್ರಿಕೆ**
**ಜನವರಿ 2024**

ಸಂಪುಟ: 34 ಸಂಚಿಕೆ: 01


**ಪರಿವಿಡಿ**


**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com



**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


# ವಿಶ್ವಾಸ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಭವಿಷ್ಯದ ಬಗೆಗೆ ವಿಶ್ವಾಸ** 5
ಅನು: ವಿಶಾಲಾಕ್ಷೀ ಸತ್ಯನ್
ಅನು: ಕಿಶೋರಕುಮಾರ
ಅನು: ನಾಗಜ್ಯೋತಿ ಮಾನ್ವಿ
ಅನು: ಡಾ. ಮಹಾದೇವ ಸಕ್ರಿ

**ಶ್ರೀ ಅರವಿಂದರ ‘ಗೀತಾ ಪ್ರಬಂಧಗಳು’** 33
ಅನು: ಜಾನ್ವಿ

**ಶ್ರೀ ಅರವಿಂದರ ‘ಪ್ರೇಮ ಮತ್ತು ಮೃತ್ಯು’** 44
ಅನು: ಸಮಷ್ಠಿ

**ತ್ರಾಟಕ ಸೂರ್ಯ** 57
– ಪುಟ್ಟು ಕುಲಕರ್ಣಿ

**ಕಾವ್ಯ (ಮುಖಪುಟಗಳು)** 62–64
ಅನು: ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 67

## ಪ್ರಾರ್ಥನೆ

ಓ ದೇವರೆ, ಇಡೀ ಜಗತ್ತು ಪರಸ್ಪರರಲ್ಲಿಯೇ ವಿರೋಧವನ್ನು ಹೊಂದಿಕೊಂಡಿರುವ ಎರಡು ವಿರುದ್ಧ ಶಕ್ತಿಗಳ ಮಧ್ಯದಲ್ಲಿ ವಿಂಗಡಿಸಲ್ಪಟ್ಟಿದೆ. ಶ್ರೇಷ್ಠತೆಗಾಗಿ ಮತ್ತು ಸಮಾನತೆಗಾಗಿ ಇವುಗಳ ಮಧ್ಯ ಹೋರಾಟವಿದ್ದರೂ ಅವೆರಡೂ ನಿನ್ನ ನಿಯತಿಗೆ ಯಾವಾಗಲೂ ವಿರೋಧವಾಗಿಯೇ ಇರುತ್ತವೆ. ಇದಕ್ಕೆ ಕಾರಣವೆಂದರೆ ನೀನು ಎಂದಿಗೂ ಪ್ರಳಯ ಸ್ವರೂಪದ ಮಾರಣಾಂತಿಕವಾದ ಸ್ಥಗಿತತೆಯನ್ನು ಮತ್ತು ಸಂಪೂರ್ಣ ವಿನಾಶವನ್ನು ಅಪೇಕ್ಷಿಸುವದಿಲ್ಲ. ನೀನು ನಿನ್ನನ್ನು ನಿತ್ಯ ನಿರಂತರವಾಗಿ, ಪ್ರಗತಿಯತ್ತಲೇ ವಿಕಾಸಗೊಳ್ಳುತ್ತಿರುವ ಮತ್ತು ಸದಾ ಜ್ಯೋತಿ ಪ್ರಕಾಶದಿಂದ ಕೂಡಿರುವ ರೂಪಾಂತರಣದ ಹಂತದಲ್ಲಿಯೇ ನಿನ್ನನ್ನು ಪ್ರಕಟಗೊಳಿಸುತ್ತೀಯ. ಅದೇ ರೀತಿಯಲ್ಲಿ ಅಭಿವ್ಯಕ್ತಗೊಳಿಸುತ್ತಿರುವೆ. ನಾವು ನಿನ್ನ ಚಿತ್ತವನ್ನು ನಮ್ಮ ಚಿತ್ತದಲ್ಲಿ ಅನುಷ್ಠಾನಿಸಲು ಅಪೇಕ್ಷಿಸಿದಲ್ಲಿ, ಅದು ಈ ಭೂಮಿಯ ಮೇಲೆಯೇ ಸ್ಥಾಪಿಸಲ್ಪಡಬೇಕು. ಆದರೆ ನಮಗಿರುವ ಅಸಹನೆಯು, ಈ ನಿನ್ನ ಅಭಿವ್ಯಕ್ತಿಯ ವಿಧಾನಗಳು, ಎಲ್ಲವೂ ಶೀಘ್ರಾತಿಶೀಘ್ರವಾಗಿ ಈಡೇರಬೇಕೆಂದು ಒತ್ತಾಯಿಸುತ್ತಿರುತ್ತದೆ.

ಆದರೆ ಈ ರೀತಿಯ ನಮ್ಮ ಅಪೇಕ್ಷೆಯು ನಿಷ್ಪ್ರಯೋಜಕವಾಗಿದೆ, ಹೀಗಾಗಿ ಇದಕ್ಕೆ ಪರಿಹಾರವೂ ದೊರಕುವದಿಲ್ಲ. ಮುಖ್ಯ ಕಾರಣವೆಂದರೆ ಜ್ಞಾನವು ಸೂಕ್ತವಾದ ಕ್ಷಣದಲ್ಲಿ, ಅದರಲ್ಲೂ ಕ್ರಿಯಾತ್ಮಕವಾಗಿದ್ದಲ್ಲಿ ಮಾತ್ರ ಆಗಮಿಸುತ್ತದೆ. ಹೀಗಾಗಿ ನಾವು ಸಂಪೂರ್ಣವಾಗಿ ಚಿಂತನಾ ಸಾಮರ್ಥ್ಯದಿಂದ ಮತ್ತು ಆತ್ಮೇಚ್ಛೆಯೊಂದಿಗೆ ಮತ್ತು ಶಾಂತ ಚಿತ್ತತೆಯಿಂದ ಕೂಡಿದವರಾಗಿ, ನೀನು ಪ್ರಶಾಂತ ಮತ್ತು ಸಾಮರ್ಥ್ಯ–ಪೂರ್ಣವಾದ ಸಾಕ್ಷಾತ್ಕಾರದ ಮೂಲಕ ದಯಪಾಲಿಸಲಿರುವ ಆ ಶಾಂತತೆಯ ಜೊತೆಗೆ ಸ್ಪಂದಿಸಲು ಸದಾ ಕಾತರಿಸುತ್ತಿದ್ದೇವೆ.


**– ಸೆಪ್ಟೆಂಬರ್ 9, 1914**

---

**ಸಂಪಾದಕರ ಟಿಪ್ಪಣಿ:** ಮಾನವ ಕುಲವು ಇದೀಗ ನವೀನ ಉತ್ಸಾಹವನ್ನು ಭರಣ ಮಾಡಿಕೊಳ್ಳಲು ಮತ್ತು ಅದು ಸದಾ ಜೀವನದೊಂದಿಗೆ ಮುಂದುವರೆಯುತ್ತ ಇರಬೇಕೆನ್ನುವ **ವಿಶ್ವಾಸವನ್ನು** ಹೊಂದಿ ಪ್ರಗತಿಗೊಳ್ಳಲು ಹಂಬಲಿಸುತ್ತಿದೆ. ನಮ್ಮ ಅಂತರಂಗದಲ್ಲಿ ಇರುವ ಈ **ವಿಶ್ವಾಸದ ಮೂಲ**ವಾಗಿ ಈ ಸಂಚಿಕೆಯನ್ನು ರೂಪಿಸಲಾಗಿದೆ.



Bonne Année
blessings



ನಿನ್ನೆ ಈ ಭೂಮಿಯ ಮೇಲೆ ದರ್ಶನಗೊಂಡಿರುವ ಸಂದರ್ಭದ ಎದುರು, ಈ ಭೂಮಿಯ ಮೇಲೆ ಸಾವಿರಾರು ಸಾವಿರಾರು ಜೀವಿಗಳು ದಟ್ಟೈಸಿ ನಿಂತಿರುವ ಅಜ್ಞಾನದ ಘೋರಾಂಧಕಾರದಲ್ಲಿ ಸಿಲುಕಿರುವ ಘಟನೆಯೊಂದು ಕೇವಲ ಕ್ಷೀಣ ಸಂಗತಿಯಾಗಿದೆ; ಇಲ್ಲಿ ದರ್ಶನಗೊಂಡು ಅಸ್ತಿತ್ವ ತೋರುತ್ತಿರುವದೇ 'ಒಂದು ದಿನ ಎಲ್ಲ ತಮವೂ ಕರಗಿ ಎಲ್ಲವೂ ಪ್ರಕಾಶದಲ್ಲಿ ರೂಪಾಂತರಣ' ಹೊಂದುತ್ತದೆ ಎನ್ನುವದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದೆ. ಈ ಮೂಲಕ ಈ ಪ್ರಕಾಶದ ಸಾಮ್ರಾಜ್ಯವೇ ಈ ಭೂಮಿಯಲ್ಲೆಲ್ಲ ಸ್ಥಾಪಿಸಲ್ಪಡುತ್ತದೆ ಎನ್ನುವದು ಖಚಿತವಾಗಿದೆ.

ಓ ದೇವರೇ, ಈ ರೀತಿಯಲ್ಲಿ ಚಿತ್ತಾಕರ್ಷಕವಾದ ದಿವ್ಯತ್ವವನ್ನು ರಚಿಸುತ್ತಿರುವ ಶಿಲ್ಪಿ ನೀನು. ನಾನು ಈ ಚಿಂತನಕ್ಕೆ ತೊಡಗುತ್ತಲೇ ಇದಕ್ಕೆ ಸ್ಪಂದಗೊಂಡ ನನ್ನ ಹೃದಯವು ತೋಷದಿಂದ ಪ್ರಫುಲ್ಲಿತವಾಗಿ ತುಂಬಿಕೊಂಡು ಸಲಿಲಗೊಳ್ಳಲು ಪ್ರಾರಂಭಿಸಿದೆ. ಅದಕ್ಕಾಗಿ ನನ್ನ ವಿಶ್ವಾಸವು ಸಹಿತ ಯಾವುದೇ ಗಡಿಗಳಿಲ್ಲದೆ ಅನಂತಾನಂತವಾಗುತ್ತಿದೆ.

ನನ್ನ ಈ ಗೌರವಾದರವು ಎಲ್ಲ ಶಬ್ದಗಳಿಗೂ ಅತೀತವಾಗಿದೆ, ನನ್ನ ಶ್ರದ್ಧೆಯು ಸಹಿತ ಪ್ರಶಾಂತ ಸ್ವರೂಪವನ್ನು ಹೊಂದಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/313** **– ಶ್ರೀಮಾತೆ**

# ಭವಿಷ್ಯದ ಬಗೆಗೆ ವಿಶ್ವಾಸ

**– ಅನು: ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

ಭೂಮಿಯ ಆಧ್ಯಾತ್ಮಿಕ ಪ್ರಗತಿಯ ಚರಿತ್ರೆಯಲ್ಲಿ ಶ್ರೀ ಅರೋಬಿಂದೊರವರು ಪ್ರತಿನಿಧಿಸುವ ಅಂಶಗಳು ಒಂದು ಬೋಧನೆಯಲ್ಲ, ಒಂದು ದರ್ಶನವೂ ಅಲ್ಲ, ಅದು ಪರಮೋತ್ತಮನಿಂದ ನೇರವಾಗಿ ಬಂದ ಒಂದು ಬಲಿಷ್ಠ ಕ್ರಿಯೆ.

*

ಅದರ ಪ್ರಕಾಶಮಾನವಾದ ಭವಿಷ್ಯಕ್ಕೆ ಸಿದ್ಧಗೊಳ್ಳಲು ಭೂಮಿಯನ್ನು ಆಶೀರ್ವದಿಸಲು ಆತನು ಬಂದಿರುವನು.

*

ದೈವೀ ಭವಿಷ್ಯತ್ತಿನ ಭರವಸೆಯನ್ನು ಪ್ರಪಂಚಕ್ಕೆ ಶ್ರೀ ಅರೋಬಿಂದೊ ತಂದಿರುವರು.

*

ಹಿಂದಿನ ಮತಗಳು ಅಥವಾ ಬೋಧನೆಗಳೊಂದಿಗೆ ಸ್ಪರ್ಧಿಸುವ ಬೋಧನೆಯನ್ನು ತರಲು ಭೂಮಿಗೆ ಶ್ರೀ ಅರೋಬಿಂದೊರವರು ಬಂದಿಲ್ಲ. ಆದರೆ ಗತಕಾಲವನ್ನು ದಾಟಿ ಮುನ್ನಡೆಯುವ ಹಾದಿಯನ್ನು ತೋರಿಸಲು ಬಂದಿರುವರು. ಜೊತೆಗೆ ಸನ್ನಿಹಿತವಾಗಿರುವ ಮತ್ತು ಅನಿವಾರ್ಯವಾದ ಮುಂದಿನ ಜೀವನದ ಪಥವನ್ನು ವಾಸ್ತವವಾಗಿ ತೆರೆಯಲು ಆಗಮಿಸಿದ್ದಾರೆ.

*

ಭವಗಂತನೇ, ನಿನ್ನ ಕಾರ್ಯದ ಸಾಧನೆಯಾಗುವವರೆಗೂ ನೀನು ನಮ್ಮೊಂದಿಗೆ ಇರುವೆ ಎಂಬ ಭರವಸೆಯನ್ನು ನನಗೆ ಇಂದು ಬೆಳಿಗ್ಗೆ ನೀಡಿರುವೆ. ಮಾರ್ಗದರ್ಶನ ಮತ್ತು ಹಾದಿಯನ್ನು ಪ್ರಕಾಶಮಾನಗೊಳಿಸುವ ಪ್ರಜ್ಞೆಯಾಗಿ ಮಾತ್ರವಲ್ಲ ಆದರೆ ಕಾರ್ಯಗತವಾದ ಕ್ರಿಯಾತ್ಮಕ ಸನ್ನಿಧಿಯಾಗಿಯೂ ನೀನು ನಮ್ಮಲ್ಲಿ ನೆಲೆಸುವೆ ಎಂದೂ ಸಹ ಹೇಳಿರುವೆ. ಭೂಮಿಯು ಪರಿವರ್ತನೆಯಾಗುವವರೆಗೂ ಭೂಮಿಯ ವಾತಾವರಣವನ್ನು ತೊರೆಯುವುದಿಲ್ಲ ಸಂಪೂರ್ಣವಾಗಿ ಇಲ್ಲಿಯೇ ಇರುವೆ ಎಂಬ ಭರವಸೆಯನ್ನು ಸಹ ಕೊಟ್ಟಿರುವೆ. ಈ ಅಮೋಘ ಸನ್ನಿಧಿಗೆ ಪಾತ್ರರಾಗಲು ಅವಶ್ಯಕವಾದ ಅರ್ಹತೆಯನ್ನು ನಮಗೆ ಅನುಗ್ರಹಿಸು. ಇನ್ನು ಮುಂದೆ ಒಂದು ದೈವೀ ಸಂಕಲ್ಪದಲ್ಲಿ

ಕೇಂದ್ರೀಕೃತವಾಗಲಿ ನಮ್ಮೊಳಗಿನ ಸಮಸ್ತವು. ನಿನ್ನ ಸೂಕ್ಷ್ಮಾತಿ ಸೂಕ್ಷ್ಮ ಕಾರ್ಯವನ್ನು ಪೂರ್ಣಗೊಳಿಸಲು ಹೆಚ್ಚು ಹೆಚ್ಚಾಗಿ ಸಮರ್ಪಿತವಾಗುವದೇ ಆ ಸಂಕಲ್ಪ.

*


ಶ್ರೀ ಅರೋಬಿಂದೊರವರ ನೆರವು ನಿರಂತರವಾಗಿ ಇದೆ. ಅದನ್ನು ಹೇಗೆ ಸ್ವೀಕರಿಸಬೇಕು ಎಂಬುದನ್ನು ನಾವು ನಿರ್ಧರಿಸಬೇಕಾಗಿದೆ.

*

ನಮ್ಮನ್ನು ರಕ್ಷಿಸುತ್ತಾ, ಮಾರ್ಗದರ್ಶನ ಮಾಡುತ್ತಾ, ಜ್ಞಾನವನ್ನು ನೀಡುತ್ತಾ ಶ್ರೀ ಅರೋಬಿಂದೊರವರು ಸದಾಕಾಲ ನಮ್ಮೊಡನಿರುವರು.

ಪರಿಪೂರ್ಣವಾದ ಶ್ರದ್ಧೆಯೊಂದಿಗೆ ನಾವು ಅವರ ಅನುಗ್ರಹಕ್ಕೆ ಉತ್ತರಿಸಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/4–6, 13 – ಶ್ರೀಮಾತೆ**



ದೈವತ್ವವಿಲ್ಲದಿದ್ದರೆ ನಾವು ಪರಿಮಿತ, ಅಸಮರ್ಥ ಮತ್ತು ಶಕ್ತಿರಹಿತ ಸತ್ತೆಗಳಾಗಿರುವೆವು; ದೈವತ್ವದೊಂದಿಗೆ ಆತನಿಗೆ ಸಂಪೂರ್ಣವಾಗಿ ನಮ್ಮನ್ನು ನೀಡಿದರೆ, ಎಲ್ಲವೂ ಸಾಧ್ಯವಾಗುವದು ಮತ್ತು ನಮ್ಮ ಪ್ರಗತಿಯು ಅಪರಿಮಿತ.

ಶ್ರೀ ಅರೋಬಿಂದೋರವರ ಜನ್ಮ ಶತಾಬ್ಧಿ ವರ್ಷಕ್ಕೆ ಭೂಮಿಯ ಮೇಲೆ ಒಂದು ವಿಶೇಷವಾದ ನೆರವು ಆಗಮಿಸಿದೆ; ನಮ್ಮ ಅಹಂಕಾರವನ್ನು ದಾಟಲು ನಾವು ಅದರ ಉಪಯೋಗವನ್ನು ಪಡೆದುಕೊಳ್ಳುವ ಮತ್ತು ಪ್ರಕಾಶದೊಳಗೆ ಪ್ರವೇಶಿಸುವ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/16 – ಶ್ರೀಮಾತೆ**

ಅರಿಯಬೇಕಾಗಿರುವ ಭವಿಷ್ಯತ್ಕಾಲದ ಸೌಂದರ್ಯವನ್ನು ಪ್ರಪಂಚಕ್ಕೆ ತಿಳಿಸಲು ಶ್ರೀ ಅರೋಬಿಂದೊರವರು ಆಗಮಿಸಿರುವರು.

ಜಗತ್ತು ವೈವಿಧ್ಯತೆಗಳ ಕಡೆ ಚಲಿಸುತ್ತಿದೆ. ಅದರ ಬಗ್ಗೆ ದೃಢ ನಂಬಿಕೆಯನ್ನು ಉಂಟು ಮಾಡಲು ಅವರು ಬಂದಿರುವರು. ಭರವಸೆಯನ್ನು ಮಾತ್ರ ನೀಡಲಿಕ್ಕಾಗಿ ಅಲ್ಲ. ಪ್ರಪಂಚವು ದುರದೃಷ್ಟವಶಾತ್ ಉಂಟಾದ ಆಕಸ್ಮಿಕವಲ್ಲ. ಆದರೆ ಅದು ಅದರ ಅಭಿವ್ಯಕ್ತತೆಯ ಕಡೆಗೆ ಚಲಿಸುತ್ತಿರುವ ಒಂದು ವಿಸ್ಮಯ.

ಭವಿಷ್ಯತ್ಕಾಲದ ಸೌಂದರ್ಯದ ಬಗ್ಗೆ ಪ್ರಪಂಚಕ್ಕೆ ಒಂದು ದೃಢ ನಂಬಿಕೆಯು ಅವಶ್ಯಕ.

ಮತ್ತು ಆ ಭರವಸೆಯನ್ನು ಶ್ರೀ ಅರೋಬಿಂದೊರವರು ನೀಡಿದ್ದಾರೆ.

ಒಂದು ಮಹತ್ವಪೂರ್ಣ ಮುಂದಿನ ಜೀವನದ ಹಾದಿಯನ್ನು ಶ್ರೀ ಅರೋಬಿಂದೊರವರು ನಮಗೆ ತೋರಿಸಿದ್ದಾರೆ.

ಮುಂದಿನ ಜೀವನದ ಮೇಲೆ ಹರಡಿರುವ ಅಮರ ಸೂರ್ಯ ಪ್ರಕಾಶವಾಗಿದೆ ಶ್ರೀ ಅರೋಬಿಂದೋರವರ ಸಂದೇಶ.

ಮಾನವನು ನಿನ್ನೆಯ ಸೃಷ್ಟಿಯಾಗಿರುವನು.

ನಾಳೆಯ ಸೃಷ್ಟಿಯನ್ನು ಘೋಷಿಸಲು ಶ್ರೀ ಅರೋಬಿಂದೊ ಬಂದಿರುವರು! ಸುಪ್ರಮಾನಸ ಸತ್ತೆಯ ಆಗಮನ.

ಶ್ರೀ ಅರೋಬಿಂದೊರವರು ವಹಿಸಿಕೊಂಡಿರುವ ಬದಲಾವಣೆಯ ಶ್ರೇಷ್ಠ ಕಾಯಕವು ಸಫಲವಾಗುವದರ ಬಗ್ಗೆ ಎಂದೂ ಒಂದು ಕ್ಷಣವೂ ಅನುಮಾನಿಸದಿರು. ಏಕೆಂದರೆ ಅದು ನಿಜಕ್ಕೂ ಒಂದು ವಾಸ್ತವ ಸತ್ಯ. ನಮ್ಮ ಕೈಯಲ್ಲಿರುವ ಕಾರ್ಯದ ಬಗ್ಗೆ ಒಂದೇ ಒಂದು ಅನುಮಾನದ ಛಾಯೆಯೂ ಇಲ್ಲ.... ಪರಿವರ್ತನೆಯು ಖಂಡಿತವಾಗಿ ಸಂಭವಿಸುವದು. ಯಾವುದೂ ಅದನ್ನು ಎಂದಿಗೂ ನಿಲ್ಲಿಸಲಾಗದು. ಸರ್ವಶಕ್ತನ ಶಾಸನಕ್ಕೆ ಯಾವುದೂ ಆಶಾಭಂಗವನ್ನು ಉಂಟುಮಾಡುವದಿಲ್ಲ. ಎಲ್ಲಾ ಸಂಕೋಚ ಮತ್ತು ದುರ್ಬಲತೆಯನ್ನು ದೂರ ತಳ್ಳಿ. ಧೈರ್ಯವಾಗಿ ಕೆಲ ಕಾಲ ಸಹಿಸಲೂ ನಿರ್ಧರಿಸಿ. ಶ್ರೇಷ್ಠ ದಿನವು ನಿಶ್ಚಿತವಾಗಿ ಆಗಮಿಸುವದು. ಆಗ ನಿರಂತರವಾದ ವಿಜಯವಾಗಿ ದೀರ್ಘಕಾಳಗವು ಬದಲಾಗುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/15, 19, 21 – ಶ್ರೀಮಾತೆ**

## ಫೆಬ್ರವರಿ 5ನೇ ತಾರೀಖು 1913

ನನ್ನ ಹೃದಯದ ನಿಶ್ಶಬ್ದತೆಯಲ್ಲಿ ಸುಮಧುರ ಪತಣವಾಗಿ ನಿನ್ನ ಧ್ವನಿಯು ಕೇಳಿಸುವದು. ಅಸಮರ್ಪಕವಾದ ಪದಗಳ ರೂಪದಲ್ಲಿ ಅದು ನನ್ನ ತಲೆಯೊಳಗಡೆ ಅನುರಣವಾಯಿತು. ಆದರೂ ಅದು ನಿನ್ನಿಂದ ಸಂಪೂರ್ಣವಾಗಿ ತುಂಬಿತ್ತು. ಭೂಮಿಯನ್ನು ಉದ್ದೇಶಿಸಿವೆ ಈ ಪದಗಳು. ಆಕೆಗೆ ಹೀಗೆ ಅವು ಹೇಳುತ್ತವೆ. ದುಃಖದಿಂದ ತುಂಬಿದ ಓ ಭೂಮಿಯೇ, ನಾನು ನಿನ್ನೊಳಗಿರುವೆನೆಂಬುದನ್ನು ಜ್ಞಾಪಿಸಿಕೋ. ನಂಬಿಕೆಯನ್ನು ಕಳೆದುಕೊಳ್ಳಬೇಡ; ಪ್ರತಿಯೊಂದು ಪ್ರಯತ್ನ, ಪ್ರತಿಯೊಂದು ನೋವು, ಪ್ರತಿಯೊಂದು ಸಂತಸ, ಪ್ರತಿಯೊಂದು ತೀಕ್ಷ್ಣ ವೇದನೆ, ನಿನ್ನ ಹೃದಯದ ಪ್ರತಿಯೊಂದು ಕರೆ, ನಿನ್ನ ಆತ್ಮದ ಪ್ರತಿಯೊಂದು ಅಭೀಪ್ಸೆ, ನಿನ್ನ ಋತುಗಳ ಪ್ರತಿಯೊಂದು ಪುನರಾಗಮನ, ಸಮಸ್ತವೂ, ಒಂದೂ ಬಿಡದೆ ಪ್ರತಿಯೊಂದೂ, ನಿನಗೆ ದುಃಖಕರವೆಂದು ತೋರುವಂತಹವು, ನಿನಗೆ ಸಂತಸ ನೀಡುತ್ತಿರುವಂತೆ ತೋರುವಂತಹವು, ನಿನಗೆ ಕುರೂಪಿ ಎನಿಸುವಂತಹವು, ನಿನಗೆ ಸುಂದರ ಎನಿಸುವಂತಹವು, ಎಲ್ಲವೂ ನನ್ನ ಕಡೆಗೆ ನಿನ್ನನ್ನು ನಿಸ್ಸಂದೇಹವಾಗಿ ಮುನ್ನಡೆಸುವವು. ನಾನು ಅಂತ್ಯರಹಿತ ಶಾಂತಿ, ನೆರಳಿಲ್ಲದ ಬೆಳಕು, ಪರಿಪೂರ್ಣ ಸಾಮರಸ್ಯ, ದೃಢ ನಂಬಿಕೆ, ವಿಶ್ರಾಂತಿ ಮತ್ತು ಪರಮೋತ್ತಮ ದೈವಕೃಪೆಯಾಗಿರುವೆ.

ಆಲಿಸು, ಓ ಭೂಮಿ, ಮೇಲೇಳುವ ಸೂಕ್ಷ್ಮ ಧ್ವನಿಗೆ, ಕಿವಿಗೊಡು ಮತ್ತು ನವ ಧೈರ್ಯವನ್ನು ಪಡೆದುಕೋ.

## ಫೆಬ್ರವರಿ 29ನೇ ತಾರೀಖು 1914

ಓ ಪ್ರೇಮದ ದೈವೀ ಅರಸನೇ ಪ್ರತಿಯೊಂದು ಸತ್ತೆಯಲ್ಲಿ ನೀನು ನೆಲೆಸಿರುವದರಿಂದಲೇ, ಪ್ರತಿಯೊಬ್ಬ ಮಾನವನು, ಅತ್ಯಂತ ಕ್ರೂರಿಯಾದವನು ಸಹ ಕರುಣೆಗೆ ತನ್ನನ್ನು ತಾನು ತೆರೆದುಕೊಳ್ಳಲು ಸಾಧ್ಯವಾಗಿದೆ. ಅತ್ಯಂತ ದುಷ್ಟನನ್ನು ಸಹ ಗೌರವಿಸಲು ಸಾಧ್ಯವಾಗಿದೆ. ಆತನು ಹಾಗಿದ್ದರೂ ಸಹ, ಮರ್ಯಾದಿಸಿ, ನ್ಯಾಯವಾದ ನಡವಳಿಕೆಯನ್ನು ತೋರಲು ಸಾಧ್ಯವಾಗಿದೆ. ಎಲ್ಲಾ ಸಂಪ್ರದಾಯಗಳನ್ನು ಮತ್ತು ಪೂರ್ವಾಗ್ರಹಗಳನ್ನು ಮೀರಿದವನಾಗಿರುವ ನೀನು ಒಂದು ಅಪೂರ್ವ ಬೆಳಕಿನಿಂದ ಪ್ರಕಾಶಮಾನಗೊಳಿಸುವೆ. ಆ ಬೆಳಕು ದೈವತ್ವವನ್ನು ಹೊಂದಿದ್ದು ಪರಿಶುದ್ಧವಾಗಿದೆ. ನಾವು ಏನಾಗಿರುವೆವೋ ಅದೆಲ್ಲಾ, ನಾವು ಏನೇನು ಮಾಡುವೆವೋ ಅದೆಲ್ಲವನ್ನೂ ನೀನು ಪ್ರಕಾಶಮಾನಗೊಳಿಸಿ ನಾವು ಏನಾಗಲು ಸಾಧ್ಯ ಮತ್ತು ನಿಜಕ್ಕೂ ನಾವು

ಏನಾಗಿರುವೆವು ಎಂಬುದರ ನಡುವಿನ ವ್ಯತ್ಯಾಸವನ್ನು, ಸ್ಪಷ್ಟವಾಗಿ ಕಾಣುವಂತೆ ಮಾಡುವೆ. ಅತಿ ಹೆಚ್ಚಾದ ದುಷ್ಟತೆ, ಅಂಧಕಾರ ಮತ್ತು ಕೆಟ್ಟ ಸಂಕಲ್ಪದ ಎದುರಾಗಿ ಹೂಡಿರುವ ದುಸ್ತರ ತಡೆ ಬೇಲಿಯಾಗಿರುವೆ ನೀನು. ಸಾಧ್ಯವಾಗುವ ಎಲ್ಲಾ ಭವಿಷ್ಯತ್ಕಾಲದ ಪರಿಪೂರ್ಣತೆಗಳ ಪ್ರತಿಯೊಂದು ಹೃದಯದಲ್ಲಿನ ಜೀವಂತ ಭರವಸೆ ನೀನಾಗಿರುವೆ. ನನ್ನ ಆರಾಧನೆಯ ಎಲ್ಲಾ ತಪಸ್ಸು ನಿನಗಾಗಿ. ನಮ್ಮ ಕಲ್ಪನೆಯು ತಲುಪಬಹುದಾದ ಹೆಬ್ಬಾಗಿಲು ನೀನಾಗಿರುವೆ. ಸಂದೇಹಾಸ್ಪದವಲ್ಲದ, ಊಹನಾತೀತ ವೈವಿಧ್ಯತೆಗಳಿಗೆ ನೀನು ನಮ್ಮನ್ನು ಮುನ್ನಡೆಸುವೆ. ಹಂತ ಹಂತವಾಗಿ ನಾವು ಅವೈವಿಧ್ಯತೆಗಳನ್ನು ದರ್ಶಿಸುವೆವು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/14, 60 – ಶ್ರೀಮಾತೆ**

ಎಲ್ಲಾ ಭಯ, ಅಪಾಯ ಮತ್ತು ದುರಂತಗಳ ವಿರುದ್ಧ ಶಸ್ತ್ರ ಸಜ್ಜಿತರಾಗಿ ಜೀವನದಲ್ಲಿ ಮುನ್ನಡೆಯಲು ಎರಡು ಅಂಶಗಳು ಮಾತ್ರ ಅವಶ್ಯಕ. ಇವೆರಡು ಯಾವಾಗಲೂ ಜೊತೆಗೂಡಿ ಮುಂದೆ ಸಾಗುವವು. – ದೈವೀ ಮಾತೆಯ ಅನುಗ್ರಹ ಮತ್ತು ನಿನ್ನ ಕಡೆಯಿಂದ ಶ್ರದ್ಧೆ, ಪ್ರಾಮಾಣಿಕತೆ ಮತ್ತು ಶರಣಾಗತಿಯನ್ನು ಹೊಂದಿರುವ ಆಂತರಿಕ ಅವಸ್ಥೆ.

*

ನಿನ್ನ ಶ್ರದ್ಧೆ, ನಿಷ್ಕಪಟತೆ ಮತ್ತು ಶರಣಾಗತಿಯು ಹೆಚ್ಚಾದಷ್ಟೂ ಹೆಚ್ಚು ಅನುಗ್ರಹ ಮತ್ತು ರಕ್ಷಣೆಗಳು ನಿನ್ನೊಂದಿಗಿರುವವು. ದೈವೀ ಮಾತೆಯ ಅನುಗ್ರಹ ಮತ್ತು ರಕ್ಷಣೆಗಳು ನಿಮ್ಮೊಂದಿಗಿರುವಾಗ ಯಾವುದು ತಾನೇ ನಿನ್ನನ್ನು ಎದುರಿಸಬಲ್ಲದು? ಅಥವಾ ನೀನು ಯಾರಿಗೆ ಭಯಪಡಬೇಕಾಗಿದೆ? ಎಲ್ಲಾ ಕಷ್ಟಗಳು ಅಡ್ಡಿಗಳು ಮತ್ತು ಅಪಾಯಗಳ ನಡುವೆಯೂ ಅದರ ಅಲ್ಪ ಸ್ವಲ್ಪ ಭಾಗ ಸಹ ನಿನ್ನನ್ನು ಹೊತ್ತು ಮುಂದೆ ಸಾಗುವುದು.

ಅದರ ಸಂಪೂರ್ಣ ಸನ್ನಿಧಿಯಿಂದ ಅವೃತವಾಗಿ ನೀನು ನಿನ್ನ ಹಾದಿಯಲ್ಲಿ ಸುರಕ್ಷಿತವಾಗಿ ಮುನ್ನಡೆಯಬಹುದು. ಏಕೆಂದರೆ ಅದು ಆಕೆಯದು. ಎಲ್ಲಾ ವಿಪತ್ತುಗಳನ್ನು ನಿರ್ಲಕ್ಷಿಸಿ, ಅದು ಎಷ್ಟೇ ಶಕ್ತಿಯುತವಾಗಿದ್ದರೂ ಯಾವುದೇ ದುಷ್ಟತೆಯಿಂದ ತೊಂದರೆಗೀಡಾಗುವದಿಲ್ಲ. ಅದು ಈ ಲೋಕದ್ದೇ ಆಗಿರಬಹುದು ಅಥವಾ ಅಗೋಚರ ಲೋಕಗಳದ್ದಾಗಿರಬಹುದು. ಅದರ ಸ್ಪರ್ಶವು ತೊಂದರೆಗಳನ್ನು

ಅವಕಾಶಗಳನ್ನಾಗಿ ಮಾರ್ಪಡಿಸುವದು. ಸೋಲನ್ನು ಸಫಲತೆಯಾಗುವಂತೆ ಮಾಡುವುದು. ದುರ್ಬಲತೆಯನ್ನು ಎಡವದಿರುವ ಬಲಿಷ್ಠತೆಯಾಗಿಸುವುದು. ಏಕೆಂದರೆ ದೈವೀ ಮಾತೆಯ ಅನುಗ್ರಹವು ಪರಮೋತ್ತಮನ ದೃಢೀಕರಣವಾಗಿದೆ. ಈಗ ಅಥವಾ ನಾಳೆ ಅದರ ಪರಿಣಾಮವು ನಿಶ್ಚಿತವಾಗಿ ಸಂಭವಿಸುವದು. ಅದು ಕಟ್ಟಳೆ, ಅನಿವಾರ್ಯ ಮತ್ತು ತಡೆಯಲಾಗದಂತಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/8 – ಶ್ರೀ ಅರವಿಂದರು**

ನನ್ನ ಅಧಿಪತಿಯೇ, ನಾನು ಏನು ಮಾಡಬೇಕೆಂದು ನೀನು ಆಶಿಸಿದ್ದೆಯೊ ಅದನ್ನು ಮಾಡಿರುವೆನು. ಸುಪ್ರ ಮಾನಸದ ಬಾಗಿಲುಗಳನ್ನು ತೆರೆಯಲಾಗಿದೆ ಮತ್ತು ಸುಪ್ರ ಮಾನಸದ ಪ್ರಜ್ಞೆ, ಬೆಳಕು ಮತ್ತು ಶಕ್ತಿ ಭೂಮಿಯಲ್ಲಿ ಪ್ರವಹಿಸುತ್ತಿದೆ.

*

ನಿನ್ನ ಕಾರ್ಯ ಮತ್ತು ಪ್ರಗತಿಯಲ್ಲಿ ನೆರವಾಗಲು ನನ್ನ ಸಹಾಯವು ಸದಾ ನಿಮ್ಮೊಂದಿಗೆ ಇದೆ.

ಇಂದು ನೀನು ಎದುರಿಸಲಾಗದಿರುವ ಕಷ್ಟಗಳನ್ನು ನಾಳೆ ಅಥವಾ ಮುಂದೆ ಜಯಿಸುವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/56, 68 – ಶ್ರೀಮಾತೆ**

**– ಅನು: ಕಿಶೋರಕುಮಾರ ಕಾಸಾರ, ಕಲಬುರ್ಗಿ**

ವರ್ಧಿಸುತ್ತಿರುವ ಶಾಂತಿ ಮತ್ತು ಪ್ರಕಾಶದ ವಲಯದೊಳಗೆ ನಿನ್ನೊಡನೆ ನಾನು ಶಾಶ್ವತವಾಗಿ ಜೊತೆಯಾಗಿರುತ್ತೇನೆ.

ಪ್ರೇಮ, ಆನಂದ ಮತ್ತು ಶಾಂತಿಗಳು ವರ್ಧಿಸುತ್ತ ಸಾಗುತ್ತಿರುವಂತೆ ನಿನ್ನೊಡನೆ ನಾನೂ ಮುಂದುವರೆಯುತ್ತೇನೆ.

*

ನನ್ನೊಡನೆ ಪತ್ರ ವ್ಯವಹಾರ ಮಾಡುತ್ತಿರಲಿ, ಅಥವಾ ಮಾಡದೇ ಇರಲಿ, ನಾನು ಮಾತ್ರ ನನ್ನ ಎಲ್ಲಾ ಮಕ್ಕಳನ್ನು ಸಮಾನ ದೃಷ್ಟಿಯಲ್ಲಿ ಕಂಡು ಪ್ರೀತಿಸುತ್ತೇನೆ. ಕೆಲವೊಂದು ಬಾರಿ ನಾನು ಕೆಲವರ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು

ಬರೆಯದಿದ್ದರೂ ಸಹ ನನ್ನನ್ನು ಪ್ರಾರ್ಥಿಸುವ ಎಲ್ಲರೂ ನನಗೆ ನಿಷ್ಠರಾಗಿಯೇ ಇರುವವರು. ಹಾಗಾಗಿ ಇಲ್ಲಿ ಯಾರೂ ನೋವಿಗೊಳಗಾಗುವ ಪ್ರಮೇಯವೇ ಇಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/71**

ನಾನು ಸದಾ ಮೇಲ್ಮುಖವಾಗಿಯೇ ನೋಡುತ್ತಿರುತ್ತೇನೆ. ಏಕೆಂದರೆ ಸೌಂದರ್ಯ, ಶಾಂತಿ ಮತ್ತು ಪ್ರಕಾಶಗಳು ಅಲ್ಲಿ ವಿರಾಜಮಾನವಾಗಿದ್ದು, ಅವು ಮರ್ತ್ಯಕ್ಕೆ ಅವರೋಹಿಸಲು ಸದಾ ಸಿದ್ಧವಾಗಿರುತ್ತವೆ. ಹಾಗಾಗಿ ಅವುಗಳನ್ನು ಮರ್ತ್ಯಮಯದಲ್ಲಿ ಸ್ಥಾಪಿಸುವ ಆಕಾಂಕ್ಷೆಯಿಂದ ನಾನು ಯಾವಾಗಲೂ ಮೇಲ್ಮುಖವಾಗಿಯೇ ನೋಡುತ್ತಿರುತ್ತೇನೆ.

ಆದ್ದರಿಂದ ನೀವುಗಳೂ ಸಹ ಕತ್ತಲ ಕೂಪಗಳಿಂದ ತುಂಬಿದ ಕೆಳಹಂತದ ಅಸಹ್ಯ ನರಕಗಳೆಡೆ ದೃಷ್ಟಿಸದೇ ಸದಾ ಮೇಲ್ಮುಖವಾಗಿಯೇ ನೋಡುತ್ತಿರಿ. ಅದು ಕೆಲವೊಮ್ಮೆ ನೀವು ದುಃಖ–ದುಗುಡಗಳಿಂದ ತುಂಬಿದ ಸಮಯದಲ್ಲಿ ನಿಮಗೆ ಶಾಂತಿ–ಪ್ರಸನ್ನತೆಗಳನ್ನು ಕರುಣಿಸುತ್ತದೆ.

*

ದಿವ್ಯತೆಯು ಸದಾ ಮರ್ತ್ಯದ ಪ್ರತಿಯೋರ್ವ ಆತ್ಮಕ್ಕೆ ಬೇಕಿರುವ ಸಂಪದವನ್ನು ಕರುಣಿಸಲೆಂದೇ ಪ್ರಯತ್ನಿಸುತ್ತಿರುತ್ತದೆ. ಒಂದು ವೇಳೆ ನೀವು, 'ದಿವ್ಯತೆಯು ನಮ್ಮಿಂದ ಬಹು ದೂರದಲ್ಲಿದ್ದು ಅದು ಬಹು ಕ್ರೂರತಮವಾಗಿದೆ' ಎಂದು ಭಾವಿಸಿದರೆ, ಅದು ನಿಮ್ಮಿಂದ ದೂರವಾಗುತ್ತ ಕ್ರೂರತಮವಾಗುತ್ತಲೇ ಸಾಗುತ್ತದೆ. ಏಕೆಂದರೆ ನೀವು ನಿಮ್ಮ ಧ್ಯೇಯದಲ್ಲಿ ಸಂಪೂರ್ಣ ಫಲವನ್ನು ಪಡೆಯಬೇಕಿದ್ದಲ್ಲಿ ನಿಮಗೆ ಆ ದಿವ್ಯತೆಯ ಕೋಪವನ್ನು ಅನುಭವಿಸಲೇಬೇಕಾಗುತ್ತದೆ; ಆ ದಿವ್ಯತೆಯು ಕಾಳಿಯ ಆರಾಧಕರಿಗೆ ಕಾಳಿಯ ರೂಪದಲ್ಲಿ ಪ್ರಕಟಗೊಂಡು ಕೃಪಾಶೀರ್ವಾದವನ್ನು ಪ್ರಕಟಿಸುತ್ತದೆ, ಸಂಶೋಧನೆಯಲ್ಲಿ ತೊಡಗಿದ ಓರ್ವ ಜಿಜ್ಞಾಸುವಿಗೆ ಸರ್ವ ಜ್ಞಾನವಾಗಿ ದರ್ಶನವೀಯುತ್ತದೆ, ಮಾಯಾಜಾಲವನ್ನು ಸೃಷ್ಟಿಸುವ ತಂತ್ರಗಾರನಿಗೆ ಅತೀಂದ್ರಿಯ ಶಕ್ತಿಯಾಗಿ ತೊರುತ್ತದೆ, ನಾಸ್ತಿಕನಿಗೆ ನಾಸ್ತಿಕವಾದವಾಗಿಯೂ ಓರ್ವ ಪ್ರೇಮಿಗೆ ಪ್ರೇಮದ ಸತ್ಯವಾಗಿಯೂ ತೋರ್ಪಡಿಸುತ್ತದೆ, ಆ ದಿವ್ಯತೆಯನ್ನು ನಂಬಿ ತಮ್ಮ ಕಾರ್ಯದಲ್ಲಿ ಮುನ್ನುಗ್ಗುವ ಸಾಹಸಿಗಳಿಗೆ ಸಹಾಯಕ–ಸಹೋದರ–ಸ್ನೇಹಿತನಂತೆ ಬೆನ್ನೆಲುಬಾಗಿ ನಿಲ್ಲುತ್ತದೆ, ದಿವ್ಯತೆಯನ್ನು ತನ್ನ ಅಂತರಂಗದ ಮಾರ್ಗದರ್ಶಿಯೆಂದು

ತಿಳಿದವರಿಗೆ ಅದು ಆಂತರ್ಯದಿಂದಲೇ ಸಹಾಯಕ ಅಂಶವಾಗಿ ಅವನ ಸಾಧನೆಯಲ್ಲಿ ಜೊತೆಗಾರನಾಗುತ್ತದೆ, ಅದನ್ನು ತನ್ನ ದೋಷಗಳ ಮುಕ್ತಿಗಾರನೆಂದು ಭಾವಿಸುವ ವಿಫಲಗಾರನಿಗೆ ಅದು ಅವನ ದೋಷಗಳನ್ನೆಲ್ಲ ಪರಿಹರಿಸಿ ಅವನನ್ನು ಅವನ ಅಂತಿಮ ಗುರಿಯೆಡೆಗೆ ಮುಟ್ಟಿಸುವ ವಾಹಕವಾಗುತ್ತದೆ, ಅದನ್ನು ತನ್ನ ಜೀವನದ ಧ್ಯೇಯೋದ್ದೇಶಗಳಿಗಾಗಿ ಇರುವ ಅನಂತ ಕೃಪೆಯೆಂದು ಭಾವಿಸಿದ್ದಲ್ಲಿ ಅದು ಅವನ ಜೀವನದಲ್ಲಿ ಕೃಪಾಳುವಾಗಿಯೇ ಆಶೀರ್ವದಿಸುತ್ತದೆ. ಹಾಗಾಗಿ ದಿವ್ಯತೆಯೆಂಬುದು ನಿಮಗೆ ಬೇಕಿರುವ ಸಂಪದವನ್ನು ಕರುಣಿಸಲಿರುವ ಶಕ್ತಿಯ ಮೂಲವೇ ಆಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/75–76**

ವರ್ತನೆ ಎಂಬುದು ಬಹುಮುಖ್ಯವಾಗಿರುತ್ತದೆ. ಅದು ಆಂತರಿಕವೇ ಆಗಿರಬಹುದು ಅಥವಾ ಬಾಹ್ಯ ವರ್ತನೆಯೇ ಆಗಿರಬಹುದು. ಜನರಿಗೆ ನಂಬಿಕೆಯೆಂಬುದು ಎಷ್ಟು ಮುಖ್ಯವೆಂಬುದೇ ತಿಳಿದಿಲ್ಲ, ನಂಬಿಕೆಯೆಂಬುದು ಪವಾಡವೊಂದನ್ನು ಸೃಷ್ಟಿಸಲಿರುವ ಮಹಾಶಕ್ತಿಯಾಗಿದೆ. ನಿಮ್ಮ ಜೀವನದಲ್ಲಿ ನೀವು ಸದಾ ಮರ್ತ್ಯದಿಂದ ಮೇಲೇರಿ ದಿವ್ಯತೆಯೆಡೆಗೆ ಜಗ್ಗಲಿರುವ ಶಕ್ತಿಗಾಗಿ ಹಾತೊರೆಯುತ್ತಿರುತ್ತೀರಿ. ಅಂತಹ ಸಂದರ್ಭದಲ್ಲಿ ನಂಬಿಕೆಯೇ ನಿಮ್ಮನ್ನು ಭುವಿಯ ಬಂಧನಗಳಿಂದ ಮುಕ್ತವಾಗಿಸಿ ನಿಮ್ಮನ್ನು ದಿವ್ಯತೆಯ ಮೂಲದಡೆಗೆ ಹಿಡಿದೆತ್ತುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/75–76**

**ಬದುಕಿಗೊಂದು ಅರ್ಥವಿದೆ**

ಬದುಕಿನ ಅರ್ಥವನ್ನು ಹುಡುಕುವದೆಂದರೆ ಅದು ದಿವ್ಯತೆಯನ್ನು ಹುಡುಕಿ ಅದನ್ನು ಸೇವಿಸುವ ಕಾರ್ಯವೇ ಆಗಿದೆ.

ದಿವ್ಯತೆಯು ನಮ್ಮಿಂದ ಬಹು ದೂರದಲ್ಲಿಲ್ಲ, ಅದು ನಮ್ಮೊಳಗೇ ಇದೆ, ಅದು ನಮ್ಮ ಭಾವನೆ ಮತ್ತು ಯೋಚನೆಗಳ ಆಂತರ್ಯದಲ್ಲಿಯೇ ನೆಲೆಸಿ ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸುತ್ತಿರುತ್ತದೆ. ದಿವ್ಯತೆಯು ಇರುವುದರಿಂದಲೇ ನಾವು ಸದಾ ಶಾಂತಿಯನ್ನು ಅನುಭವಿಸುತ್ತಿರುತ್ತೇವೆ. ಅದು ನಮ್ಮನ್ನು ನಮ್ಮ ಕಷ್ಟಗಳ ಸುಳಿಯಿಂದ ಪಾರುಮಾಡಲೆಂದೇ ಪ್ರಯತ್ನಿಸುತ್ತಿರುತ್ತದೆ.

ಹಾಗಾಗಿ ನಮ್ಮ ಎಲ್ಲಾ ತೊಂದರೆಗಳನ್ನು ದಿವ್ಯತೆಯ ಅಡಿಯಲ್ಲಿ ಒಪ್ಪಿಸಿ ಅದನ್ನು ಸೇವಿಸೋಣ. ಅದುವೆ ನಮ್ಮನ್ನು ಸಂರಕ್ಷಿಸಿ ಸಲುಹುತ್ತದೆ.

*

ನಮ್ಮ ಜೀವನಕ್ಕೊಂದು ಉದ್ದೇಶವಿದೆ – ಅದುವೇ ಸತ್ಯವೂ ಶಾಶ್ವತವೂ ಆಗಿದೆ – ಆ ದಿವ್ಯತೆಯೆಡೆಗೆ ಮುಖ ಮಾಡಿರಿ. ಅದು ನಿಮ್ಮನ್ನು ಶೂನ್ಯದಿಂದ ಮುಕ್ತಗೊಳಿಸಿ ಪರಿಪೂರ್ಣತೆಯೆಡೆಗೆ ಆರೋಹಿಸುತ್ತದೆ.

*

ಆನಂದವನ್ನು ಅಪೇಕ್ಷಿಸುತ್ತ ಬದುಕದಿರಿ. ಕೇವಲ ಆ ದಿವ್ಯತೆಯನ್ನು ಸೇವಿಸುತ್ತ ನಿರ್ಮಲವಾಗಿ ಜೀವಿಸಿರಿ. ಶಾಂತಿ–ಆನಂದಗಳು ತಾನೇತಾನಾಗಿ ಬಂದು ನೀವು ಅಪೇಕ್ಷಿಸುತ್ತಿರುವ ಅನುಭವಕ್ಕಿಂತಲೂ ಅಧಿಕತರವಾದುದನ್ನು ಕರುಣಿಸುತ್ತದೆ.

*

ಯಾವುದು ಸತ್ಯ ಶಾಶ್ವತವಾಗಿದೆಯೋ, ಅಮರ ಚಿರಂತನವಾಗಿದೆಯೋ ಅಂತಹ ದಿವ್ಯತೆಯೇ ಸೇವಿಸಲು ಯೋಗ್ಯವಾಗಿದೆ. ಅದು ದಿವ್ಯ ಪ್ರೇಮ, ದಿವ್ಯ ಪ್ರಕಾಶ ಮತ್ತು ದಿವ್ಯ ಜೀವನದ ಮೂಲವಾಗಿದೆ; ಅದುವೇ ಸರ್ವೋಚ್ಚ ಶಾಂತಿಯೂ, ಪರಿಪೂರ್ಣ ಆನಂದವೂ, ಮರ್ತ್ಯದ ಮೇಲಿರುವ ಸರ್ವ ಜ್ಞಾನಗಳಿಗೂ ಮುಕುಟಪ್ರಾಯವಾಗಿದೆ.

*

ನಿಮ್ಮನ್ನು ನೀವು ಸದಾ ಏಕಾಂಗಿಯೆಂದು ಭಾವಿಸಲೇಬೇಡಿ. ದಿವ್ಯತೆಯು ಸದಾ ನಿಮ್ಮ ಜೊತೆಗಿದ್ದು, ನಿಮಗೆ ಸಹಾಯ, ಸಹಕಾರ ಮತ್ತು ಮಾರ್ಗದರ್ಶನವನ್ನು ಮಾಡಲು ಸಿದ್ಧವಾಗಿರುತ್ತದೆ. ಅದು ನಿಮ್ಮೊಡನಿರುವ ಸೋಲಿರದ ಸರದಾರನಾಗಿದೆ, ನಿಮಗೆ ಶಕ್ತಿ ಮತ್ತು ಸೌಹಾರ್ದವನ್ನು ಕರುಣಿಸಲಿರುವ ಜೊತೆಗಾರನಾಗಿದೆ, ನೀವು ಯಾವಾಗ ಒಬ್ಬಂಟಿತನವನ್ನು ಅನುಭವಿಸುವಿರೋ ಆಗೆಲ್ಲ ಅದು ನಿಮಗೆ ಸಹಾಯ ಹಸ್ತವನ್ನು ಚಾಚಿ ಅದರ ಪ್ರಕಾಶಮಾನ ವಲಯದಲ್ಲಿ ನಿಮ್ಮೆಲ್ಲ ಕಷ್ಟಗಳಿಂದ ದೂರಮಾಡಿ ನಿಮಗೆ ಸಂಪದವನ್ನು ಕರುಣಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/5–6, 9**

ಕೇವಲ ದಿವ್ಯತೆಯೊಂದೇ ನಮಗೆ ಪರಿಪೂರ್ಣ ಸುರಕ್ಷತೆಯನ್ನು ನೀಡಬಲ್ಲದು.

*

ಪ್ರತಿಯೋರ್ವರ ಹೃದಯದಲ್ಲಿ ನೆಲೆಸಿರುವ ದಿವ್ಯತೆಯು, ಅವರಿಗೆ ಅವರ ಉಜ್ವಲ ಭವಿಷ್ಯದ ಭರವಸೆಯನ್ನು ನೀಡುತ್ತದೆ.

*

ಈ ದಿವ್ಯತೆಯೊಂದೇ ನಮಗೆ ಸಂಪೂರ್ಣ ಶಾಂತಿ ಮತ್ತು ತೃಪ್ತಿಯನ್ನು ಕರುಣಿಸಲಿರುವ ಅಂಗವಾಗಿದೆ.

*

ಬದುಕಿನ ಪ್ರತಿಯೊಂದು ದ್ರವ್ಯದ ಹಿಂಬದಿಯಲ್ಲಿ ಸದಾ ಘೂರ್ಣಿಸುತ್ತಿರುವ ಪರಿಪೂರ್ಣ ಪ್ರಜ್ಞೆಯ ಸಲಿಲವಿದ್ದು, ನಾವು ನಮಗೆ ಬೇಕಿರುವಾಗ ಅದರ ಆನಂದೋಧದಿಯಲ್ಲಿ ಮುಳುಗೇಳಬಹುದು.

*

ಯಾರಿಂದಲೂ ದೂಷಣೆಗೊಳಗಾಗದ, ಪ್ರಶ್ನೆಗೊಳಗಾಗಲಾರದ, ಕಲುಷಿತಗೊಳಿಸ–ಲಾರದ ಪರಿಪೂರ್ಣವಾದ ಪವಿತ್ರ ಪ್ರಜ್ಞೆಯೊಂದು ಸದಾ ಜಾಗೃತವಾಗಿರುತ್ತದೆ. ಅದೇ ದೈವಿಕ ಪ್ರಜ್ಞೆಯಾಗಿದೆ.

*

ದಿವ್ಯತೆಯಿಂದ, ದಿವ್ಯತೆಯೊಳಗೆ ಎಲ್ಲಾ ಪರಿವರ್ತಿತವಾಗಿರುತ್ತದೆ, ಎಲ್ಲವೂ ವೈಭವೀಕರಣಗೊಳ್ಳುತ್ತದೆ, ಎಲ್ಲಾ ರಹಸ್ಯಗಳ ಸರ್ವ ಶಕ್ತಿಗಳ ಭಾಂಡಾರದ ಕೀಲಿಕೈಯು ದಿವ್ಯತೆಯೇ ಆಗಿದೆ.

*

ನಮ್ಮೆಲ್ಲ ಶಕ್ತಿಗಳಿಗೆ ಮೂಲವು ಆ ದಿವ್ಯತೆಯೇ ಆಗಿದೆ. ಅದರ ಸಹಾಯ ಹಸ್ತದಿಂದಲೇ ನಾವು ನಮ್ಮೆಲ್ಲ ಅಡೆತಡೆಗಳನ್ನು ಬಗೆಹರಿಸಿಕೊಂಡು ಮುನ್ನುಗ್ಗಬಹುದು.

*

ದಿವ್ಯತೆಯ ಹೆಸರಿನಿಂದಲೇ ಸಕಲ ಸಾಂತ್ವನ, ಆಶೀರ್ವಾದ ಮತ್ತು ಪ್ರಕಾಶಗಳು ಲಭಿಸುತ್ತವೆ; ದಿವ್ಯತೆಯ ಅಭಯ ಹಸ್ತವು ಕತ್ತಲೆಯ ಮುಸುಕನ್ನು ಸರಿಸಿ ಅನಂತ ಜ್ಞಾನದ ಪ್ರಕಾಶವನ್ನು ಹರಿಸುತ್ತದೆ.

*

ದಿವ್ಯತೆಯು ನಮ್ಮೆಲ್ಲರ ಸೋಲುಗಳನ್ನು ಚಿರಂತನ ವಿಜಯಗಳಾಗಿ ಪರಿವರ್ತಿಸುತ್ತದೆ. ಅದರ ಪ್ರಕಾಶಮಾನವಾದ ಬೆಳಕಿನ ಮುಂದೆ ಸೋಲಿನ ಕರಾಳ ಛಾಯೆಗಳು ಓಡಿಹೋಗುತ್ತವೆ.

*

ದಿವ್ಯತೆಯ ಉಪಸ್ಥಿತಿಯಲ್ಲಿ ನಾವು ಶಾಂತಿ–ಶಕ್ತಿಗಳನ್ನು ಪಡೆದು ನಮ್ಮ ಕಾರ್ಯಗಳಲ್ಲಿ ನಾವು ಶಾಂತವಾಗಿ ವ್ಯವಹರಿಸುವಂತಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/10–11**

ದಿವ್ಯತೆಯೆಂಬುದು ಸೋಲಿರದ ಸರದಾರ, ಬೆಂಬಲಿಗನಾದ ಸ್ನೇಹಿತ, ಮುನ್ನಡೆಸುವ ಮಾರ್ಗದರ್ಶಿ, ಕತ್ತಲೆಯನ್ನು ಓಡಿಸುವ ಪ್ರಕಾಶಮಾನವಾದ ಬೆಳಕು, ವಿಜಯವನ್ನು ತಂದಿಕ್ಕುವ ಜೊತೆಗಾರ.

ದಿವ್ಯತೆಯು ಸೋಲರಿಯದ ಬೆಂಬಲಿಗನಾಗಿದೆ.

*

ಅದು ಎಂದಿಗೂ ವಿಫಲವಾಗದ ಪ್ರತಿಕ್ರಿಯೆಯಾಗಿದೆ.

ಅದು ಎಂದಿಗೂ ನಾಶವಾಗದ ದಿವ್ಯ ಪ್ರೇಮವಾಗಿದೆ.

ಹಾಗಾಗಿ ಆ ದಿವ್ಯತೆಯನ್ನು ಪ್ರೀತಿಸಿ, ಅದು ಸದಾ ನಿಮ್ಮೊಡನೆ ನೆಲೆಸುತ್ತದೆ.

*

ತನ್ನ ಮೇಲೆ ತಾನೇ ಅವಲಂಬಿತವಾಗಿರುವುದು ಸಾವು ಮತ್ತು ಶರಣಾಗತಿಯನ್ನು ಸೂಚಿಸುತ್ತದೆ. ಅದೇ ದಿವ್ಯತೆಯ ಮೇಲೆ ಅವಲಂಬಿತವಾಗಿರುವುದೆಂದರೆ, ಜೀವನದಲ್ಲಿ ಸಂಪದ ಮತ್ತು ಸಾಕ್ಷಾತ್ಕಾರವನ್ನು ಪಡೆದುಕೊಂಡಂತೆಯೇ ಸರಿ.

*

ದಿವ್ಯತೆಯಿರದೆ ಬದುಕು ಕ್ಲೇಷಮಯವಾಗಿರುತ್ತದೆ. ದಿವ್ಯತೆಯಿಂದ ಕೂಡಿದ ಬದುಕು ಆನಂದಮಯವಾಗಿರುತ್ತದೆ.

*

ದಿವ್ಯತೆಯೆಂಬುದು ಬದುಕಿಗೆ ದೈವೀಕ ಪ್ರಸ್ತುತಿಯನ್ನು ಕರುಣಿಸುತ್ತದೆ. ಈ ಪ್ರಸ್ತುತಿಯೇ ಶಾಂತಿ, ಆನಂದ ಮತ್ತು ಸಂರಕ್ಷಣೆಗೆ ಮೂಲವಾಗಿದೆ. ಈ ಪ್ರಸ್ತುತಿಯು ನಿಮ್ಮೊಳಗಿದ್ದಲ್ಲಿ ನಿಮ್ಮೆಲ್ಲ ಕಷ್ಟಗಳು ನಿಮ್ಮಿಂದ ದೂರವಾಗುತ್ತವೆ.

*

ನಿಮ್ಮೆಲ್ಲ ಯೋಚನೆ, ಭಾವನೆ, ಕ್ರಿಯೆ, ಭರವಸೆಗಳನ್ನು ದಿವ್ಯತೆಯೆಡೆಗೆ ತಿರುಗಿಸಿರಿ. ಆಗ ನಿಮ್ಮ ಬದುಕು ಶಾಂತಿ, ಆನಂದ ಮತ್ತು ಸುರಕ್ಷತೆಯನ್ನು ಪಡೆಯುತ್ತದೆ.

*

ಹೌದು ನಮ್ಮ ಮಗುವೇ, ದಿವ್ಯತೆಯಡಿಯಲ್ಲಿ ನಮ್ಮ ಬದುಕು ಬಹು ಸುರಕ್ಷಿತವಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/11–13**

ನಾವು ಏನಾಗಬೇಕೆಂದು ಬಯಸುತ್ತಿರುವೆವೋ, ನಮ್ಮನ್ನು ಅದಕ್ಕೆ ಸಿದ್ಧಪಡಿಸಲೆಂದೇ ದಿವ್ಯತೆಯಿದೆ.

*

ದಿವ್ಯತೆಯ ದಿವ್ಯ ಪ್ರಜ್ಞೆಯೊಡನೆ ಒಂದಾಗುವದಕ್ಕಿಂತ ಹೆಚ್ಚಿನ ಸೌಂದರ್ಯವು ಜಗದಲ್ಲಿ ಬೇರೊಂದಿಲ್ಲ.

ನಾವೆಲ್ಲರೂ ಹುಡುಕುತ್ತಿರುವ ನಮ್ಮ ಅಂತಿಮ ಧ್ಯೇಯವು ನಮ್ಮೊಳಗೇ ಇದೆ. ಅದನ್ನು ಪ್ರಾಮಾಣಿಕವಾಗಿ ಹುಡುಕಿದರೆ ಅದು ಖಂಡಿತ ನಮ್ಮೆದುರು ಬಂದು ನಿಲ್ಲುತ್ತದೆ. ದಿವ್ಯತೆಯು ಈ ಶೋಧನೆಗೆ ಸಹಕಾರಿಯಾಗುತ್ತದೆ.

*

ದಿವ್ಯತೆಯೊಡನೆ ಒಂದಾದ ಆತ್ಮನಿಗೆ ಎಲ್ಲೆಲ್ಲೂ ಆ ದಿವ್ಯತೆಯ ಅಸ್ತಿತ್ವವೇ ಗೋಚರವಾಗುತ್ತದೆ. ಎಲ್ಲೆಲ್ಲೂ ಪರಿಪೂರ್ಣ ಶಾಂತಿ–ಆನಂದಗಳೇ ತುಂಬಿರುತ್ತವೆ. ಮತ್ತು ಈ ಪರಿಪೂರ್ಣತೆಯು ಆ ಆತ್ಮಗಳ ಅಂತ್ಯದವರೆಗೂ ಜೊತೆಯಾಗಿರುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/10–16, 19**

**– ಅನು: ನಾಗಜ್ಯೋತಿ ಮಾನ್ವಿ**

ಶ್ರದ್ಧೆಯು ಕತ್ತಲೆಯ ದಿನಗಳಲ್ಲಿ ನಿಶ್ಚಿತ ಮಾರ್ಗದರ್ಶಿಯಾಗಿದೆ.

*

ಒಂದು ಧೃಡವಾದ ಶ್ರದ್ಧೆಯಲ್ಲಿ ನಮ್ಮೆಲ್ಲಾ ಭರವಸೆಗಳು ನೆಲೆಸಿವೆ.

*

ಕತ್ತಲೆಯು ಯಾವಾಗಲೂ ಭರವಸೆಗಳಿಂದ ತುಂಬಿರುತ್ತವೆ. ಮತ್ತು ಅದನ್ನು ನಾವು ತುಂಬು ಶ್ರದ್ಧೆ ಮತ್ತು ಆತ್ಮವಿಶ್ವಾಸದಿಂದ ಮುಖಾಮುಖಿಯಾಗಿ ಎದುರಿಸಬೇಕಾಗಿದೆ.

*

ಪ್ರತೀ ಕ್ಷಣವೂ ಎಲ್ಲಾ ಆಕಸ್ಮಿಕ, ಅನಿರೀಕ್ಷಿತ, ಅಜ್ಞಾತವು ನಮ್ಮ ಎದುರಿಗಿವೆ. ಮತ್ತು ನಮಗೇನಾಗುತ್ತದೆ ಎಂಬುದು ನಮ್ಮ ಶ್ರದ್ಧೆಯು ಎಷ್ಟು ತೀವ್ರ ಹಾಗೂ ಪರಿಶುದ್ಧವಾಗಿದೆ ಎಂಬುದರ ಮೇಲೆ ಅವಲಂಬಿಸಿದೆ.

*

ನಮ್ಮಲ್ಲಿ ನಿಜವಾದ ಜೀವಂತ ಶ್ರದ್ಧೆ ಇದ್ದಿದ್ದರೆ, ಆ ದೈವತ್ವದ ಸರ್ವಶಕ್ತ ಸಾಮರ್ಥ್ಯದ ಮೇಲೆ ಒಂದು ಸಂಪೂರ್ಣ ಧೃಡ ನಂಬಿಕೆಯಿದ್ದರೆ, 'ಆತನ' ಪ್ರಕಟಣೆಯು ಇಡೀ ಪೃಥ್ವಿಯನ್ನೇ ರೂಪಾಂತರಗೊಳಿಸುತ್ತಿತ್ತು.

*

ಅಚಲವಾದ ಶ್ರದ್ಧೆಯನ್ನು ಇಟ್ಟುಕೊಳ್ಳಿ. ಸತ್ಯವು ಗೆದ್ದೇ ಗೆಲ್ಲುತ್ತದೆ.

*

ಆ ದೈವತ್ವದ ಮೇಲೆ ಶ್ರದ್ಧೆಯನ್ನು ಇಟ್ಟುಕೊಳ್ಳಿ, ನಿಮ್ಮ ಅಂತರಂಗದ ಆಳಕ್ಕೆ ಇಳಿಯಿರಿ. ನನ್ನ ಸಹಾಯವು ಯಾವಾಗಲೂ ನಿಮ್ಮೊಂದಿಗಿರುತ್ತದೆ.

*

ಶ್ರದ್ಧೆಯನ್ನು ಇಟ್ಟುಕೊಳ್ಳಿ ಮತ್ತು ಮುನ್ನಡೆಯಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/79**

ನಮ್ಮ ಉತ್ತಮ ಸಹಾಯಕನು ಶ್ರದ್ಧೆಯೇ ಆಗಿದೆ – ದೈವನು ಸರ್ವ ಕರುಣಾಮಯಿಯಾಗಿದ್ದಾನೆ. ಪ್ರೀತಿ ಮತ್ತು ಆಶೀರ್ವಾದಗಳೊಂದಿಗೆ.

*

ಮಗುವಿನ ಸರಳ ಆತ್ಮವಿಶ್ವಾಸದಲ್ಲಿ ಒಂದು ಶ್ರೇಷ್ಠ ಶಕ್ತಿಯೇ ಅಡಗಿದೆ.

*

ಮಗುವಿನ ಆತ್ಮವಿಶ್ವಾಸದೊಂದಿಗೆ ನಮ್ಮ ಹೃದಯವು ದೈವನನ್ನು ಬೇಡುತ್ತದೆ.

*

ಕಷ್ಟಗಳನ್ನೆದುರಿಸುವ ಅತ್ಯುತ್ತಮ ಮಾರ್ಗವೆಂದರೆ 'ಕೃಪೆ'ಯಲ್ಲಿ ಅಚಂಚಲ ಮತ್ತು ಸ್ಥಿರವಾದ ಆತ್ಮವಿಶ್ವಾಸವನ್ನಿಡುವುದು.

*

ಶ್ರದ್ಧೆ ಮತ್ತು ಆತ್ಮವಿಶ್ವಾಸವನ್ನಿಡಿ ಮತ್ತು ಹರ್ಷಚಿತ್ತದಿಂದಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/79–80**

ಪರಮ ಪರಮಾತ್ಮನು ಈ ಜಗವನ್ನು ಕಾಪಾಡಲು ತನ್ನ ಕೃಪೆಯನ್ನು ಕಳುಹಿಸಿದ್ದಾನೆ.

*

ದೈವೀ ಕೃಪೆಗಾಗಿ ಪ್ರಾರ್ಥಿಸಲೇಬೇಕಾಗಿದೆ. – ಒಂದು ವೇಳೆ ನ್ಯಾಯವು ಪ್ರಕಟವಾದರೆ ಕೆಲವೇ ಕೆಲವರಿಗೆ ಮಾತ್ರ ಅದರ ಎದುರಿಗೆ ನಿಲ್ಲಲಾಗುತ್ತದೆ.

*

'ವಿಶ್ವಾತ್ಮಕ ನ್ಯಾಯ'ದ ಮಾರ್ಗದಲ್ಲಿ ಹಸ್ತಕ್ಷೇಪ ಮಾಡಿ ಮತ್ತು ಬದಲಾವಣೆಯನ್ನು ತರಲು ಕೇವಲ ದೈವೀ ಕೃಪೆಗೆ ಮಾತ್ರ ಶಕ್ತಿಯಿದೆ. ಆ ದೈವೀ ಕೃಪೆಯನ್ನು ಪೃಥ್ವಿಯ ಮೇಲೆ ಪ್ರಕಟ ಮಾಡುವುದೇ ಅವತಾರನ ಶ್ರೇಷ್ಠ ಕೆಲಸವಾಗಿದೆ. ಅವತಾರಿಯ ಶಿಷ್ಯನಾಗುವುದು ಎಂದರೆ ಆ ದೈವೀ ಕೃಪೆಯ ಉಪಕರಣವಾಗುವುದಾಗಿದೆ. ಶ್ರೀಮಾತೆಯ ದೈವೀ ಕೃಪೆಯೊಡನೆ ತಾದ್ಯಾತ್ಮ ಹೊಂದಿ ಆ ತಾದ್ಯಾತ್ಮದಿಂದ ಪರಿಪೂರ್ಣ ಜ್ಞಾನವನ್ನು ಹೊಂದಿ – ಈ 'ವಿಶ್ವಾತ್ಮಕ ನ್ಯಾಯ'ದ ಪ್ರಕ್ರಿಯೆಯನ್ನು ಹರಡಿ ಹಂಚುತ್ತಾಳೆ.

ಮತ್ತು ಪ್ರಾಮಾಣಿಕತೆ ಹಾಗೂ ಭರವಸೆಯಿಂದ ಕೂಡಿದ ಅಭೀಪ್ಸೆಯು ದೈವೀ ಕರೆಯಲ್ಲಿ ಆಕೆಯ ಮಧ್ಯವರ್ತಿಯಾಗಿ ಭಾಗವಹಿಸಿ ದೈವೀ ಕೃಪೆಯ ಹಸ್ತಕ್ಷೇಪಕ್ಕೆ ಕಾರಣೀಭೂತಳಾಗುತ್ತಾಳೆ.

ಓ ಒಡೆಯನೇ ”ನಾನು ಎಂದೆಂದಿಗೂ ಯಾವ ತಪ್ಪನ್ನೂ ಮಾಡಿಲ್ಲ” ಎಂದು ನಿನ್ನ ಮುಂದೆ ನಿಂತು ಮತ್ತು ತನ್ನೆಲ್ಲಾ ಪ್ರಾಮಾಣಿಕತೆಯಿಂದ ಹೇಳಲು ಯಾರಿಗೆತಾನೇ ಸಾಧ್ಯ? ಪ್ರತಿದಿನವೂ ಅದೆಷ್ಟು ಬಾರಿ ದೈವೀ ಕೆಲಸದಲ್ಲಿ ವಿರುದ್ಧವಾಗಿ ತಪ್ಪುಗಳನ್ನು ಮಾಡುತ್ತೇವೆ. ಮತ್ತು ಯಾವಾಗಲೂ ದೈವೀ ಕೃಪೆಯು ಬಂದು ಅವೆಲ್ಲವುಗಳನ್ನು ಅಳಿಸಿಹಾಕುತ್ತದೆ!

ದೈವೀ ಕೃಪೆಯ ಹಸ್ತಕ್ಷೇಪವಿಲ್ಲದೆ, ಯಾರುತಾನೇ “ವಿಶ್ವಾತ್ಮಕ ನ್ಯಾಯದ” ನಿಷ್ಕರುಣೆಯ ಕತ್ತಿಯ ಅಲುಗಿನಿಂದ ತಪ್ಪಿಸಿಕೊಳ್ಳಲು ಸಾಧ್ಯ?

*

ದೈವೀ ಕೃಪೆಯ “ನಿನ್ನ” ಸದ್ಭಾವವು ಅನಂತವಾಗಿದೆ. ಕೃತಜ್ಞತಾ ಭಾವದಿಂದ ‘ನಿನ್ನ’ ಮುಂದೆ ಬಾಗುತ್ತಿದ್ದೇವೆ.

*

ಕೇವಲ “ದೈವೀಕೃಪೆ”ಯು ಮಾತ್ರ ಶಾಂತಿ, ಸಂತೋಷ, ಶಕ್ತಿ, ಬೆಳಕು, ಜ್ಞಾನ, ಸೌಭಾಗ್ಯ ಮತ್ತು ಪ್ರೀತಿಯನ್ನು ತಮ್ಮ ಸಾರ–ಸತ್ಯದಲ್ಲಿ ಕೊಡಲು ಸಾಧ್ಯ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/83–86**

ಶ್ರೀಮಾತೆಯ ನಾಲ್ಕು ಶ್ರೇಷ್ಠ ಅಂಶಗಳು, ಆಕೆಯ ನಾಲ್ಕು ಮುಖ್ಯ ‘ಶಕ್ತಿ’ಗಳಾಗಿ ಮತ್ತು “ವ್ಯಕ್ತಿತ್ವ”ಗಳಾಗಿ ಈ ಜಗದ ಮಾರ್ಗದರ್ಶನಕ್ಕೆ ಮತ್ತು ಭೌತಿಕ ಜಗದ ಆಟದೊಡನೆ ವ್ಯವಹರಿಸಲು ಮುಂದೆ ನಿಂತು ನಡೆಸುತ್ತಿವೆ.

ಆಕೆಯ ಒಂದು ವ್ಯಕ್ತಿತ್ವವು ನಿಶ್ಚಲ ವಿಶಾಲತೆ, ಸಕಲವನ್ನೂ ಗ್ರಹಿಸುವ ವಿವೇಕ, ಪ್ರಶಾಂತ ಸೌಜನ್ಯತೆ, ಅಕ್ಷಯ ಕರುಣೆ, ಸಾರ್ವಭೌಮ ಮತ್ತು ಎಲ್ಲೆ ಮೀರುವ ಮಹಿಮೆ ಹಾಗೂ ಎಲ್ಲವನ್ನೂ ಆಳುವ ಶ್ರೇಷ್ಠತೆಯಿಂದ ಕೂಡಿದುದಾಗಿದೆ.

ಇನ್ನೊಂದು ವ್ಯಕ್ತಿತ್ವವು ಭವ್ಯವಾದ ಶಕ್ತಿ ಎದುರಿಸಲಾಗದ ಉತ್ಕಟತೆ, ಆಕೆಯ ಯೋಧನ ಮನಃಸ್ಥಿತಿ, ಭಾವಪರವಶಗೊಳಿಸುವ ಸಂಕಲ್ಪ, ಆಕೆಯ ಪ್ರಚೋದಕ

ಮಧುರತೆ ಹಾಗೂ ಜಗವನ್ನು ಅಲುಗಾಡಿಸುವ ಸಾಮರ್ಥ್ಯವನ್ನು ಧಾರಣೆ ಮಾಡಿಕೊಳ್ಳುವವಳು.

ಮೂರನೆಯ ವ್ಯಕ್ತಿತ್ವವು ಉಜ್ವಲವಾದ, ಮಧುರ, ಅದ್ಭುತದಿಂದ ಕೂಡಿದ ರಹಸ್ಯಮಯ ಹಾಗೂ ಆಳವಾದ ಸೌಂದರ್ಯ ಸಾಮರಸ್ಯ ಮತ್ತು ಉತ್ತಮ ಲಯದಿಂದ ಕೂಡಿ ಸಂಕೀರ್ಣ ಮತ್ತು ಸೂಕ್ಷ್ಮದಿಂದ ಕೂಡಿದ ಐಶ್ವರ್ಯದಲ್ಲಿ ಆಕೆಯ ಒತ್ತಾಯಪೂರ್ವಕ ಆಕರ್ಷಣೆ ಮತ್ತು ವಶಪಡಿಸಿಕೊಳ್ಳುವ ಕೃಪೆಯಿಂದ ಕೂಡಿದವಳಾಗಿದ್ದಾಳೆ.

ನಾಲ್ಕನೆಯ ವ್ಯಕ್ತಿತ್ವವು ಹತ್ತಿರ ಮತ್ತು ಆಳವಾದ ಸಾಮರ್ಥ್ಯದಿಂದ ಕೂಡಿದ ಅನ್ಯೋನ್ಯ ಜ್ಞಾನ ಹಾಗೂ ಕಾಳಜಿ, ದೋಷರಹಿತ ಕಾರ್ಯಕ್ಷಮತೆ, ಎಲ್ಲಾ ವಸ್ತುಗಳೊಂದಿಗೆ ನಿಶ್ಚಲ ಹಾಗೂ ನಿಖರ ಪರಿಪೂರ್ಣತೆಯನ್ನು ಹೊಂದಿರುವ ಅಂಶಗಳಿಂದ ಕೂಡಿದೆ.

ಈ ನಾಲ್ಕು ಶ್ರೇಷ್ಠ ವ್ಯಕ್ತಿತ್ವಗಳಿಗೆ ನಾವು ಮಾಹೇಶ್ವರಿ, ಮಹಾಕಾಳಿ, ಮಹಾಲಕ್ಷ್ಮಿ ಮತ್ತು ಮಹಾಸರಸ್ವತಿಯೆಂದು ಹೆಸರಿಸುತ್ತೇವೆ.

*

ದೈವೀ ಕೃಪೆಯು ಎಲ್ಲರಿಗೂ ಸಮಾನವಾಗಿ ಲಭ್ಯವಿದೆ. ಆದರೆ ಪ್ರತಿಯೊಬ್ಬರೂ ಅವರ ಪ್ರಾಮಾಣಿಕತೆಗೆ ಅನುಗುಣವಾಗಿ ಸ್ವೀಕರಿಸುತ್ತಾರೆ. ಇದು ಬಹಿರಂಗದ ಪರಿಸರದ ಮೇಲೆ ಅವಲಂಬಿತವಾಗಿರದೆ, ಕೇವಲ ಅವರ ಪ್ರಾಮಾಣಿಕ ಅಭೀಪ್ಸೆ ಹಾಗೂ ಅವರ ತೆರೆದಿಡುವಿಕೆಯ ಮೇಲೆ ಅವಲಂಬಿತವಾಗಿರುತ್ತದೆ.

*

ಎಲ್ಲಿ ಪ್ರಾಮಾಣಿಕತೆ ಹಾಗೂ ಸದ್ಭಾವವಿದೆಯೋ ಅಲ್ಲಿ ದೈವದ ಸಹಾಯವು ಸದಾ ಇರುತ್ತದೆ.

*

ನಿಮ್ಮ ಶರಣಾಗತಿಯಲ್ಲಿ ಏಕಮುಖವಾಗಿರಿ ಮತ್ತು ನಿಮ್ಮ ಅಭೀಪ್ಸೆಯಲ್ಲಿ ಪ್ರಾಮಾಣಿಕವಾಗಿರಿ. ಮತ್ತು ನೀವು ದೈವೀ ಸಹಾಯ ಮತ್ತು ಮಾರ್ಗದರ್ಶನದ ಸಾನಿಧ್ಯವನ್ನು ಅನುಭವಿಸಿರಿ.

*

ದೈವೀ ಸಹಾಯವಿದ್ದಾಗ, ಅಸಾಧ್ಯವಾದುದು ಏನೂ ಇಲ್ಲ.

*

ದೈವೀ ಸಹಾಯವಿಲ್ಲದಿದ್ದರೆ ಯಾರಿಗೂ ಸಾಧನೆ ಮಾಡಲಾಗುತ್ತಿರಲಿಲ್ಲ. ಆದರೆ ಸಹಾಯವು ಯಾವಾಗಲೂ ಇದೆ.

*

ದೈವೀ ಕೃಪೆಯಲ್ಲಿ ಸ್ಥಿರವಾದ ಶ್ರದ್ಧೆಯನ್ನಿಡಿ.

*

"ಕೃಪೆಯು ಯಾವಾಗಲೂ ನಿನ್ನ ಜೊತೆಗಿದೆ; ನಿಶ್ಚಲ ನೀರವ ಮನದಿಂದ ನಿನ್ನ ಹೃದಯದಲ್ಲಿ ಪ್ರಜ್ಞೆಯನ್ನು ಕೇಂದ್ರೀಕರಿಸಿ ಮತ್ತು ಆಗ ನೀನು ಅಭೀಪ್ಸಿರುವ ಸಹಾಯ ಹಾಗೂ ಮಾರ್ಗದರ್ಶನವನ್ನು ಖಚಿತವಾಗಿ ಸ್ವೀಕರಿಸುವೆ.

*

ಯಾರು ಅಭೀಪ್ಸೆ ಪಡುತ್ತಾರೋ ಅವರಿಗೆ "ಕೃಪೆ" ಮತ್ತು ಸಹಾಯ ಯಾವಾಗಲೂ ಇರುತ್ತದೆ. ಮತ್ತು ಅದನ್ನು ಶ್ರದ್ಧೆ ಮತ್ತು ಆತ್ಮವಿಶ್ವಾಸದಿಂದ ಸ್ವೀಕರಿಸಿದಾಗ ಅವುಗಳ ಸಾಮರ್ಥ್ಯವು ಅಪರಿಮಿತವಾಗಿದೆ.

*

ದೈವೀ ಕೃಪೆಯು ಕಾರ್ಯ ಮಾಡಲು ಯಾವಾಗಲೂ ಸಿದ್ಧವಿರುತ್ತದೆ. ಆದರೆ ನೀನು ಅದನ್ನು ಕಾರ್ಯಗೈಯಲು ಬಿಡಬೇಕು ಹಾಗೂ ಅದರ ಕಾರ್ಯಕ್ಕೆ ಪ್ರತಿರೋಧಿಸಬಾರದು. ಇದಕ್ಕೆ ಬೇಕಾದ ಒಂದೇ ಒಂದು ಷರತ್ತೆಂದರೆ ಶ್ರದ್ಧೆಯಾಗಿದೆ. ನಿನ್ನ ಮೇಲೆ ಆಕ್ರಮಣವಾಗಿದೆಯೆಂದೆನಿಸಿದಾಗ, ನನ್ನ ಮತ್ತು ಶ್ರೀ ಅರವಿಂದರನ್ನು ಸಹಾಯಕ್ಕಾಗಿ ಕರೆಯಿರಿ. ನಿಮ್ಮ ಕರೆಯು ಪ್ರಾಮಾಣಿಕವಾಗಿದ್ದರೆ (ಅಂದರೆ, ನಿನಗೆ ಪ್ರಾಮಾಣಿಕವಾಗಿ ಗುಣಮುಖವಾಗ ಬಯಸಿದ್ದರೆ) ನಿನ್ನ ಕರೆಗೆ ಉತ್ತರ ಕೊಡಲಾಗುವುದು ಮತ್ತು ದೈವೀ ಕೃಪೆಯು ನಿನ್ನನ್ನು ಗುಣಪಡಿಸುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/85–87**

ಹೌದು, "ದೈವೀ ಕೃಪೆ"ಯ ಮೇಲೆ ನಮಗಿರುವ ಶ್ರದ್ಧೆಯು ಅದರ ಮಧ್ಯ ಪ್ರವೇಶವನ್ನು ಸರ್ವದಾ ಆಮಂತ್ರಿಸುತ್ತದೆ.

*

"ದೈವೀ ಕೃಪೆ"ಯ ಕಾರ್ಯದ ಪರಿಣಾಮವು ಸಂಪೂರ್ಣ ಮತ್ತು ಪರಿಪೂರ್ಣ–ವಾಗಬೇಕಿದ್ದರೆ, ಶ್ರದ್ಧೆಯು ಸಂಪೂರ್ಣ ಮತ್ತು ಪರಿಪೂರ್ಣವಾಗಿರಬೇಕಾಗುತ್ತದೆ.

*

ದೈವೀ ಕೃಪೆಯು ನಮ್ಮನ್ನು ಎಂದಿಗೂ ಸೋಲಲು ಬಿಡುವುದಿಲ್ಲ. ಇಂತಹ ಶ್ರದ್ಧೆಯನ್ನು ನಮ್ಮ ಹೃದಯದಲ್ಲಿ ಸತತವಾಗಿಟ್ಟುಕೊಂಡಿರಬೇಕು.

*

ಶ್ರದ್ಧೆಯ ಕೊರತೆಯು ನಮ್ಮಲ್ಲಿ ಸೀಮಿತತೆಗಳನ್ನು ಸೃಷ್ಟಿಸುತ್ತದೆ.

*

ದೈವೀ ಕೃಪೆಯು ನಮ್ಮೊಂದಿಗಿದೆ ಮತ್ತು ತೋರಿಕೆಗಳು ಕತ್ತಲಿನಿಂದಿದ್ದರೂ ಅದು ನಮ್ಮನ್ನು ಎಂದೂ ತೊರೆಯುವುದಿಲ್ಲ.

*

ಪರಮಾತ್ಮನ ಶಕ್ತಿಯು ಅನಂತವಾಗಿದೆ. ಆದರೆ ನಮ್ಮ ಶ್ರದ್ಧೆಯು ಚಿಕ್ಕದು.

*

ಜೀವನದಲ್ಲಿ ಪ್ರತೀ ಕ್ಷಣದಲ್ಲಿಯೂ ಪ್ರತಿ ಪರಿಸ್ಥಿತಿಯಲ್ಲಿಯೂ ದೈವೀ ಕೃಪೆಯು ನಮ್ಮ ಎಲ್ಲಾ ತೊಂದರೆಗಳನ್ನು ನಿವಾರಿಸಲು ಸಹಾಯ ಮಾಡುತ್ತಿರುತ್ತದೆ.

*

ನಮ್ಮ ಎಲ್ಲಾ ಜಯ ಅಪಜಯಗಳಲ್ಲಿಯೂ ದೈವೀ ಕೃಪೆಯು ಯಾವಾಗಲೂ ಇರುತ್ತದೆ.

*

ನೀವು ದೇವನ ಹತ್ತಿರಕ್ಕೆ ಬಂದಂತೆಲ್ಲಾ 'ಆತನ' ಅಗಣಿತ ಕೃಪೆಯು ಅಗಾಧ ಪ್ರಮಾಣದಲ್ಲಿಯೇ ಸಾಕ್ಷಿಗಳಾಗಿ, ನಾವು ಹೆಚ್ಚು ಹೆಚ್ಚಾಗಿ ಸಂತೋಷದಿಂದ ಬದುಕುತ್ತೇವೆ.

*

ದೈವೀ ಕೃಪೆಯ ಸರ್ವಶಕ್ತತೆಯ ಮೇಲಿರುವ ನಮ್ಮ ಶ್ರದ್ಧೆಯು, ಕೃಪೆ ಎಂಬುದು ತಾನೇನಿದೆಯೋ ಅದಕ್ಕೆ ಎಂದೂ ಸಮಾನವಾಗಲಾರದು.

*

ದೈವೀ ಕೃಪೆಯ ಮೇಲಿರುವ ಸಂಪೂರ್ಣ ಶ್ರದ್ಧೆ ಮತ್ತು ನಂಬಿಕೆಯು, ಒಂದು ಕೊನೆಯ ವಿಶ್ಲೇಷಣೆಯ ಪ್ರಕಾರ, ಪರಮ ವಿವೇಕವೇ ಆಗಿದೆ. ಈಗ ಕಾಣುವ ಗೊಂದಲದ ಮೂಲಕವೇ ಒಂದು ಒಳ್ಳೆಯ ವ್ಯವಸ್ಥೆಯನ್ನು ಸೃಷ್ಟಿಸಲಾಗುತ್ತಿದೆ. ಆದರೆ ಹೀಗೆ ಆಗುತ್ತಿದೆಯೆಂದು ನೋಡಲು ನಮಗೆ ದೈವೀ ಕೃಪೆಯ ಮೇಲೆ ಶ್ರದ್ಧೆ ಇರಲೇಬೇಕು. ಹರ್ಷದಿಂದಿರು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/87–90**

*ಪ್ರಸ್ತುತ ಬೆಳೆಯುತ್ತಿರುವ ಸಂಘರ್ಷದ ವಾತಾವರಣದಲ್ಲಿ ನಮ್ಮ ಮನೋಭಾವವೇನಿರಬೇಕು ?*

ದೈವನ ಕೃಪೆಯ ಮೇಲೆ ಸಂಪೂರ್ಣ ಆತ್ಮವಿಶ್ವಾಸ ಮತ್ತು ಶ್ರದ್ಧೆ.

*

ಯಾವಾಗ ಎಲ್ಲವೂ ಕಳೆದುಹೋಯಿತು ಎಂದೆನಿಸುತ್ತದೆಯೋ ಆಗ ಎಲ್ಲವೂ ಉಳಿಸಲ್ಪಡುತ್ತದೆ. ಯಾವಾಗ ನೀವು ನಿಮ್ಮ ವೈಯಕ್ತಿಕ ಶಕ್ತಿಯ ಮೇಲೆ ಆತ್ಮವಿಶ್ವಾಸವನ್ನು ಕಳೆದುಕೊಳ್ಳುತ್ತೀರೋ ಆಗ ನೀವು ದೈವೀ ಕೃಪೆಯಲ್ಲಿ ಶ್ರದ್ಧೆಯನ್ನಿಡಬೇಕಾಗುತ್ತದೆ.

*

ಅಂತಿಮ ವಿಶ್ಲೇಷಣೆಯ ಪ್ರಕಾರ ಎಲ್ಲವೂ ದೈವೀ ಕೃಪೆಯ ಮೇಲೆ ನಿಜವಾಗಿಯೂ ಅವಲಂಬಿತವಾಗಿದೆ. ಮತ್ತು ಆತ್ಮವಿಶ್ವಾಸ ಮತ್ತು ಪ್ರಸನ್ನತೆಯಿಂದ ಭವಿಷ್ಯವನ್ನು ನೋಡಬೇಕು, ಅದೇ ಸಮಯದಲ್ಲಿ ಎಷ್ಟು ಬೇಗ ಪ್ರಗತಿಯಾಗಲು ಸಾಧ್ಯವೋ, ಅಷ್ಟನ್ನು ಮಾಡಬೇಕು.

*

ಶ್ರದ್ಧೆ ಮತ್ತು ಧೃಡ ಆತ್ಮವಿಶ್ವಾಸವನ್ನು ಹೊಂದಿರಿ. ಉಳಿದದ್ದನ್ನು ದೈವೀ ಕೃಪೆಯು ಮಾಡುತ್ತದೆ. ನಮ್ಮೆಲ್ಲರ ಸಂಕಲ್ಪವನ್ನು ದೈವೀ ಕೃಪೆಗೆ ಅರ್ಪಿಸೋಣ; ಎಲ್ಲವನ್ನು ಸಾಧಿಸುವುದು ಆ ದೈವೀ ಕೃಪೆಯೇ ಆಗಿದೆ.

*

ದೈವೀ ಕೃಪೆ, ಆ ಕೃಪೆಯೊಂದೇ ಕಾರ್ಯಗೈಯುತ್ತದೆ. ಕೇವಲ ಅಂದೊಂದೇ ಮಾರ್ಗವನ್ನು ತೆರೆದಿಡುತ್ತದೆ. ಅದೊಂದೇ ಪವಾಡವವನ್ನು ಮಾಡುತ್ತದೆ.

*

ದೈವೀ ಕೃಪೆಯ ಮೇಲೆ ಸತ್‌ಶ್ರದ್ಧೆಯನ್ನಿಟ್ಟುಕೊಳ್ಳಿ. ಎಲ್ಲಾ ಪವಾಡಗಳನ್ನು ಮಾಡುವವಳು ಆಕೆಯೇ ಆಗಿದ್ದಾಳೆ.

*

ನಾವು ಕೇವಲ ದೈವೀ ಕೃಪೆಯ ಮೇಲೆ ಅವಲಂಬಿತವಾಗಿರುವುದನ್ನು ಕಲಿಯಬೇಕು. ಮತ್ತು ಎಲ್ಲಾ ಪರಿಸ್ಥಿತಿಗಳಲ್ಲಿ ಅದರ ಸಹಾಯಕ್ಕಾಗಿ ಕರೆಯಬೇಕು; ಆಗ ಸತತವಾದ ಪವಾಡಗಳಂತೆ ಗೋಚರಿಸತೊಡಗುತ್ತದೆ.

*

ಪ್ರಯಾಣವು ಎಷ್ಟೇ ದೂರವಿರಲಿ ಮತ್ತು ಪ್ರಯಾಣಿಕರು ಎಷ್ಟೇ ಶ್ರೇಷ್ಠರಾಗಿರಲಿ, ಕೊನೆಗೆ ವಿಶೇಶವಾಗಿ ದೈವೀ ಕೃಪೆಯನ್ನು ಅವಲಂಬಿತವಾಗುವುದನ್ನು ಕಾಣುತ್ತೇವೆ.

*

ಕೇವಲ ದೈವೀ ಕೃಪೆಯೊಂದೇ ನಮ್ಮ ಬೆಂಬಲವಾಗಿರಬೇಕು.

*

ಯಾರು ದೈವೀ ಕೃಪೆಯನ್ನು ಪ್ರಾಮಾಣಿಕವಾಗಿ ನಂಬುತ್ತಾನೋ ಅವನಿಗೆ ಕೃಪೆಯು ಅನಂತವಾಗಿರುತ್ತದೆ.

*

ದೈವೀ ಕೃಪೆಯು ಯಾವಾಗಲೂ ನಿನ್ನೊಡನಿದೆ. ಮತ್ತು ನಿನ್ನ ನಂಬಿಕೆಯು ಅದರ ಕಾರ್ಯವನ್ನು ಪರಿಣಾಮಕಾರಿಯಾಗುವಂತೆ ಮಾಡುತ್ತದೆ.

*

ನಾವು ಎಷ್ಟು ದೈವವನ್ನು ನಂಬುತ್ತೇವೆಯೋ ಅಷ್ಟು ದೈವೀ ಕೃಪೆಯು ನಮಗಾಗಿ ಕಾರ್ಯಗೈದು ಸಹಾಯ ಮಾಡುತ್ತದೆ.

*

ದೈವದ ಮೇಲಿನ ನಮ್ಮ ನಂಬಿಕೆಯು ಯಾವುದೇ ಬಹಿರಂಗದ ಪರಿಸರದ ಮೇಲೆ ಅವಲಂಬನೆಯಾಗಿರಲೇಬಾರದು.

*

ದೈವೀ ಕೃಪೆಯ ಮೇಲಿನ ನಂಬಿಕೆಯಿಂದ ಎಲ್ಲಾ ತೊಂದರೆಗಳು ಜಯಿಸಲ್ಪಡುತ್ತವೆ.

*

ಯಾವಾಗ ನಾವು ದೈವೀ ಕೃಪೆಯನ್ನು ನಂಬುತ್ತೇವೆಯೋ ಆಗ ಅಜೇಯವಾದ ಧೈರ್ಯವನ್ನು ಹೊಂದುತ್ತೇವೆ.

*

ದೈವೀ ಕೃಪೆಯ ಮೇಲೆ ಸಂಪೂರ್ಣ ನಂಬಿಕೆಯನ್ನಿಡಿ, ಆಗ ದೈವೀ ಕೃಪೆಯು ನಿನಗೆ ಎಲ್ಲಾ ರೀತಿಯಲ್ಲಿ ಸಹಾಯ ಮಾಡುತ್ತದೆ.

*

ಬೌದ್ಧಿಕವಾಗಿ ತರ್ಕಿಸದ ಮತ್ತು ಅತಿ ಕಾಳಜಿಯಿಂದ ಚಡಪಡಿಸದ ಮುಗ್ಧ ಮಗುವಿನಂತೆ, ಅವನ ಸಂಕಲ್ಪವು ನೇರವೇರಲೆಂದು, ನಿನ್ನನ್ನು ನೀನು ಪರಮಾತ್ಮನಿಗೆ ಒಪ್ಪಿಸಿಕೊಂಡು ನಿಶ್ಚಿಂತನಾಗಿರು.

ಏನೇ ಆಗಲಿ ನಾವು ನಿಶ್ಚಲವಾಗಿರಬೇಕು. ಮತ್ತು ದೈವೀ ಕೃಪೆಯಲ್ಲಿ ನಂಬಿಕೆಯಿಡಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/93–96**

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

ದೈವಾನುಗ್ರಹದಲ್ಲಿನ ಪೂರ್ಣ ಭರವಸೆಯಿಂದ ಬರುವಂಥ ಶಾಂತಿಗೆ ಏನನ್ನೂ ಹೋಲಿಸಲಾಗದು.

*

ನೀವು ನೆಮ್ಮದಿಯಿಂದಿರಲು (ಶಾಂತಿಯಿಂದಿರಲು) ನಿಮ್ಮೆಲ್ಲ ಜವಾಬ್ದಾರಿಯನ್ನು (ನಿಮ್ಮ ಪ್ರಗತಿಯ ಜವಾಬ್ದಾರಿಯೂ ಸೇರಿ) ದೈವಾನುಗ್ರಹಕ್ಕೆ ಬಿಟ್ಟುಬಿಡಿ.

*

ನಾವು ಹೆಚ್ಚು–ಹೆಚ್ಚು ತಿಳಿದುಕೊಂಡಂತೆ, ನಮಗೇನೂ ತಿಳಿದಿಲ್ಲವೆನ್ನುವ ಸತ್ಯವು ಅರಿವಾಗುತ್ತದೆ.

ದೇವರ ಅನುಗ್ರಹದಲ್ಲಿ, ಆತನ ಜ್ಞಾನದಲ್ಲಿ ಮತ್ತು ಅನುಕಂಪದಲ್ಲಿ ಪೂರ್ಣ ಭರವಸೆಯಿರುವವರಿಗೆ ಸಮಸ್ಯೆಗಳಿರುವುದಿಲ್ಲ.

*

ದೈವೀ ವಿಜಯವು ನಿಶ್ಚಿತ. ಭಗವಂತನಲ್ಲಿ ನಾವು ನಿಜವಾಗಿಯೂ ಭರವಸೆಯನ್ನಿಟ್ಟರೆ, ನಾವು ಎಂದಿಗೂ ತಪ್ಪು ದಾರಿಯನ್ನು ತುಳಿಯಲಾರೆವು.

*

ದೈವಾನುಗ್ರಹದಲ್ಲಿ ಅಚಲ ವಿಶ್ವಾಸ ಮತ್ತು ನಂಬಿಕೆಯೊಂದಿಗೆ ಸಂಪೂರ್ಣವಾಗಿ ಶಾಂತವಾಗಿರುವುದರಿಂದ ಮಾತ್ರ ನೀವು ಸನ್ನಿವೇಶಗಳನ್ನು, ಸಂದರ್ಭಗಳನ್ನು ಎಷ್ಟು ಸಾಧ್ಯವೋ ಅಷ್ಟು ಉತ್ತಮವಾಗಿರುವಂತೆ ಅವಕಾಶ ಮಾಡಿಕೊಡಬಹುದು. ದೇವರಲ್ಲಿ, ದೇವರಲ್ಲಿ ಮಾತ್ರ ಸಂಪೂರ್ಣ ಭರವಸೆಯನ್ನು ಇಟ್ಟವರಿಗೆ ಯಾವಾಗಲೂ ಅತ್ಯುತ್ತಮವಾದದ್ದೇ ಸಂಭವಿಸುತ್ತದೆ.

*

ನಿಮ್ಮ ಜೀವನದಲ್ಲಿ ನೀವು ತೊಂದರೆಯನ್ನು ಎದುರಿಸಿದಾಗ, ಅದನ್ನು ದೇವರ ಅನುಗ್ರಹವೆಂದು ಸ್ವೀಕರಿಸಿರಿ ಮತ್ತು ಅದು ಹಾಗಾಗುತ್ತದೆ.

*

ಯಾವುದೇ ಸಂದರ್ಭದಲ್ಲಿ ಏನೇ ಸಂಭವಿಸಲಿ, ಆ ಸಂದರ್ಭವು ನಿಮ್ಮನ್ನು ನಿಮ್ಮ ಆಧ್ಯಾತ್ಮಿಕ ಗುರಿಯೆಡೆಗೆ ತ್ವರಿತ ಮಾರ್ಗಗಳಿಂದ ಮುನ್ನಡೆಸುವ ದೈವಾನುಗ್ರಹದ ಕಾಣಿಕೆಯೆಂದು ಪರಿಗಣಿಸಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/94–96**

ಯಾವುದೇ ಸಂದರ್ಭದಲ್ಲಿ ಅತ್ಯಂತ ಪರಿಣಾಮಕಾರಿಯಾದ ಸಂಗತಿ ಎಂದರೆ, ದೈವೇಚ್ಛೆಯಂತೆ ಇರುವುದು ಮತ್ತು ದೈವಾನುಗ್ರದ ಕಾರುಣ್ಯದಲ್ಲಿ ಅಚಲವಾದ ಶ್ರದ್ಧೆಯನ್ನಿಡುವುದು, ಅದರಿಂದ ಯಾವಾಗಲೂ ಅತ್ಯುತ್ತಮ ಸಂಗತಿಯೇ

ಸಂಭವಿಸುತ್ತದೆ; ಮನುಷ್ಯನ ಕಲ್ಪನೆಯಂತೆ ಅತ್ಯುತ್ತಮವಲ್ಲ, ಆದರೆ ಅತ್ಯುನ್ನತ ಸತ್ಯದನುಗುಣವಾಗಿ ಅತ್ಯುತ್ತಮ.

ಸ್ಥಿರವಾಗಿರಿ ಮತ್ತು ದೃಢವಾದ ಹಾಗೂ ಶುದ್ಧವಾದ ನಂಬಿಕೆಯಿಂದಿರಿ.

*

ನಿಮಗೇನು ಬೇಕು ಎನ್ನುವುದರ ಮೇಲೆ ಎಲ್ಲವೂ ಅವಲಂಬಿಸಿದೆ. ನಿಮಗೆ ಯೋಗವು ಬೇಕಾಗಿದ್ದರೆ, ನಿಮ್ಮ ಗುರಿಯೆಡೆಗೆ ಮುನ್ನಡೆಸುವ ದೈವಾನುಗ್ರಹದ ಅಭಿವ್ಯಕ್ತಿಯ ಪರಿಣಾಮವಾಗಿ ಸಂಭವಿಸುವುದೆಲ್ಲವನ್ನೂ ಪಡೆದುಕೊಳ್ಳಿ, ಮತ್ತು ಸಂದರ್ಭಗಳು ಕಲಿಸುವ ಪಾಠಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಿ.

*

ಭಗವಂತನಿಗೆ ತಮ್ಮನ್ನು ತಾವು ಸಮರ್ಪಸಿಕೊಂಡವರು ಎದುರಿಸುವ ಪ್ರತಿಯೊಂದು ತೊಂದರೆಯು ಒಂದು ಹೊಸ ಪ್ರಗತಿಯ ಭರವಸೆಯಾಗಿದೆ, ಹಾಗಾಗಿ ಅದನ್ನು ದೈವಾನುಗ್ರಹದ ಕಾಣಿಕೆ ಎಂದು ಸ್ವೀಕರಿಸಬೇಕು.

*

ತೊಂದರೆಗಳು ನಿಮ್ಮನ್ನು ಪೀಡಿಸುವಾಗ, ಆ ದೇವರ ಕೃಪೆ ನಿಮ್ಮ ಮೇಲಿದೆ ಎಂದು ನಿಮಗೆ ಗೊತ್ತಿರಲಿ.

*

ಕೃಪೆ ಎಂದರೆ ನಿಮ್ಮ ಪೂರ್ತಿ ಜೀವನವನ್ನು ಸುಲಭ–ಸುಗಮಗೊಳಿಸುವುದೆಂದು ಜನರು ನಂಬಿದ್ದಾರೆ. ಅದು ನಿಜವಲ್ಲ.

ಕೃಪೆಯು ನಿಮ್ಮ ಅಭೀಪ್ಸೆಯನ್ನು ಸಾಕ್ಷಾತ್ಕಾರಗೊಳಿಸಲು ಕಾರ್ಯ ಮಾಡುತ್ತದೆ ಮತ್ತು ಅದನ್ನು ಅತ್ಯಂತ ತ್ವರಿತವಾಗಿ ಸಂಪಾದಿಸಲು ಎಲ್ಲವನ್ನೂ ವ್ಯವಸ್ಥೆ ಮಾಡಲಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/94–96**

ಕೃಪೆ ಎಂದರೆ, ಅದು ನಿಮ್ಮನ್ನು ನಿಮ್ಮ ಗುರಿಯೆಡೆಗೆ ತಳ್ಳುವಂಥ ಸಂಗತಿಯಾಗಿದೆ. ಅದನ್ನು ನಿಮ್ಮ ಸಾಮಾನ್ಯ ಮನಸ್ಸಿನಿಂದ ವಿವರಿಸಲು ಪ್ರಯತ್ನ ಪಡಬೇಡಿ, ಅದು

ನಿಮಗೆ ಸಹಾಯಕವಾಗಲಾರದು, ಏಕೆಂದರೆ ಅದನ್ನು ನಿಮ್ಮ ಶಬ್ದಗಳಿಂದಾಗಲಿ ಅಥವಾ ಭಾವನೆಗಳಿಂದಾಗಲಿ ವಿವರಿಸುವ ಸಂಗತಿಯಲ್ಲ. ಕೃಪೆಯು ತನ್ನ ಕಾರ್ಯವನ್ನು ಮಾಡಿದಾಗ ಅದರ ಪರಿಣಾಮವು ಹಿತಕರವಾಗಿರಬಹುದು ಅಥವಾ ಇಲ್ಲದೇ ಇರಬಹುದು – ಅದು ಯಾವುದೇ ಮಾನವೀಯ ಮೌಲ್ಯವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ, ಅದು ಸಾಮಾನ್ಯ ಮತ್ತು ಬಾಹ್ಯ ದೃಷ್ಟಿಕೋನದಿಂದ ಇನ್ನೂ ವಿನಾಶಕಾರಿಯಾಗಿರಬಹುದು. ಆದರೆ ಒಬ್ಬ ವ್ಯಕ್ತಿಗೆ ಅದು ಯಾವಾಗಲೂ ಅತ್ಯುತ್ತಮವಾದುದಾಗಿದೆ. ಕೃಪೆಯು, ಪ್ರಗತಿಯನ್ನು ಕ್ಷಿಪ್ರವಾಗಿ ಸಾಧಿಸಲು ಆ ದೇವರು ನಿಮಗೆ ಕಳಿಸಿದ ಒಂದು ಹೊಡೆತವಾಗಿದೆ. ಸಾಕ್ಷಾತ್ಕಾರದೆಡೆಗೆ ನಿಮ್ಮನ್ನು ಕ್ಷಿಪ್ರವಾಗಿ ಹೋಗುವಂತೆ ಮಾಡುವುದು ಕೃಪೆಯಾಗಿದೆ.

*

ನಮ್ಮನ್ನು ಮತ್ತು ಜಗತ್ತನ್ನು ಸಾಧ್ಯವಾದಷ್ಟು ಬೇಗನೆ ಗುರಿಯೆಡೆಗೆ (ದೇವರೊಡನೆ ಒಂದಾಗುವುದು ಮತ್ತು ದೈವಿಕವನ್ನು ಪ್ರಕಟಗೊಳಿಸುವುದು) ಮುನ್ನಡೆಸಲು ಏನೆಲ್ಲವೂ ಸಂಭವಿಸಬೇಕೊ ಅದೆಲ್ಲವೂ ಸಂಭವಿಸುತ್ತದೆ ಎನ್ನುವ ಸಂಗತಿಯು ನಿಮಗೆ ಮನವರಿಕೆಯಾಗಬೇಕು.

ಈ ಪ್ರಾಮಾಣಿಕ ಹಾಗೂ ಸ್ಥಿರವಾದ ನಂಬಿಕೆಯು ನಮ್ಮ ಸಹಾಯ ಮತ್ತು ರಕ್ಷಣೆಯಾಗಿದೆ.

*

ನಮ್ಮ ಧೈರ್ಯ ಹಾಗೂ ತಾಳ್ಮೆ ನಮ್ಮ ನಿರೀಕ್ಷೆಯಷ್ಟೇ ಅಸಾಧಾರಣವಾಗಿರಬೇಕು, ನಿರೀಕ್ಷೆಗೆ ಮಿತಿಗಳಿಲ್ಲ.

*

ಗಟ್ಟಿಯಾದ ನಿರೀಕ್ಷೆಯು ಸಾಧನಾ ಪಥದಲ್ಲಿ ಸಹಾಯ ಮಾಡುತ್ತದೆ.

*

ನಮ್ಮ ನಿರೀಕ್ಷೆಗಳು ಸಕಾರಗೊಳಿಸುವಷ್ಟು ವಿಶೇಷವಲ್ಲ.

ಗ್ರಹಿಸಲಾರದ ಯಾವುದೇ ಸಂಗತಿಯನ್ನು ನಾವು ಗ್ರಹಿಸಲಾರೆವು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/94–97, 174**

ಜೀವನವು ಯಾವಾಗಲೂ ತೊಂದರೆಗಳಿಂದ, ಸಂಕಷ್ಟಗಳಿಂದ ಮತ್ತು ಯಾತನೆಗಳಿಂದ ತುಂಬಿದೆ; ನಾವು, ಪ್ರತಿಯೊಬ್ಬರೂ ನಮ್ಮ ಪಾಲಿಗೆ ಬಂದ ತೊಂದರೆಗಳನ್ನು ಅನುಭವಿಸಬೇಕೆನ್ನುವುದು ಸಮಾನ್ಯವಾದ ಸಂಗತಿ. ಎಲ್ಲ ತೊಂದರೆಗಳನ್ನು, ಯಾತನೆಗಳನ್ನು ಯುಕ್ತವಾಗಿ ಎದುರಿಸುವ ಏಕಮಾತ್ರ ಮಾರ್ಗವೆಂದರೆ ತಾಳ್ಮೆಯಿಂದಿರುವುದು ಮತ್ತು ನಮ್ಮ ಆಸ್ಥೆ ಹಾಗೂ ನಂಬಿಕೆಯನ್ನು ಅಂತಃಪುರುಷನ ಮೇಲೆ ಮತ್ತು ದೇವನೆಡೆಗೆ ಹೊರಳಿದ ಪ್ರಜ್ಞೆಯ ಮೇಲೆ ಇರಿಸುವುದು ಮತ್ತು ದೇವರ ಶಕ್ತಿಗಾಗಿ ಹಾಗೂ ಸಹಾಯಕ್ಕಾಗಿ ಹಂಬಲಿಸುವುದು. ಆದರೆ ಹೆಚ್ಚಾಗಿ, ಪ್ರಾಣ ಪುರುಷನು ಅಥವಾ ಪ್ರಾಣ ಪುರುಷನ ಕೊಂಚ ಅಂಶವು ಪ್ರತಿಯೊಂದು ತೊಂದರೆಗೆ ಒಂದು ನಾಟಕೀಯ ಮಹತ್ವವನ್ನು ಕೊಡುವುದರಲ್ಲಿ ಒಂದು ರೀತಿಯ ವಿಕೃತ ಆನಂದವನ್ನು ಪಡೆದುಕೊಳ್ಳುತ್ತಾನೆ. ಹಾಗಾಗಿ ಆ ವಿಕೃತ ಆನಂದವು ನಮ್ಮ ಅಂತಃಪುರುಷನ ಮತ್ತು ದೇವರ ಸಂಪರ್ಕವನ್ನು ಕಡಿದು ಹಾಕುತ್ತದೆ.

*

ದೇವರ ತೋಳುಗಳಲ್ಲಿ ಶರಣು ಪಡೆಯುದರಿಂದ ಎಲ್ಲ ತೊಂದರೆಗಳು ಪರಿಹಾರವಾಗುತ್ತವೆ ಮತ್ತು ನಮಗೆ ಆಶ್ರಯ ಕೊಡಲು ದೇವರು ತನ್ನ ತೋಳುಗಳನ್ನು ಯಾವಾಗಲೂ ತೆರೆದಿರುತ್ತಾನೆ.

*

ಎಲ್ಲ ಸಂಗತಿಗಳು ಸರಿಯಾಗಿರದಿದ್ದಾಗ, ದೇವರು ಸರ್ವಶಕ್ತನು ಎನ್ನುವ ಸಂಗತಿ ನಮಗೆ ತಿಳಿದಿರಬೇಕು.

*

ದೇವರು ನಮ್ಮೆಲ್ಲರೊಳಗೂ ಇದ್ದಾನೆ. ನಾವು ಅವನ್ನು ನೆನೆದಾಗ, ಎಲ್ಲ ಸನ್ನಿವೇಷಗಳನ್ನು ಶಾಂತವಾಗಿ ಹಾಗೂ ಸಮಚಿತ್ತವಾಗಿ ಎದುರಿಸುವ ಶಕ್ತಿಯನ್ನು ಅವನು ನಮಗೆ ನೀಡುತ್ತಾನೆ. ನಿಮ್ಮಲ್ಲಿ ಅವನ ಇರವನ್ನು ಅರಿತುಕೊಳ್ಳಿ, ಆಗ ಎಲ್ಲ ತೊಂದರೆಗಳು ಮಾಯವಾಗುತ್ತವೆ.

*

ನಗುವಿನೊಂದಿಗೆ ಜೀವನವನ್ನು ಗೌರವಿಸುವ ಮತ್ತು ಯಾವುದೇ ಸನ್ನಿವೇಶಗಳಲ್ಲಿ ಶಾಂತವಾಗಿರುವ ಸಾಮರ್ಥ್ಯವನ್ನು ಕೊಡುವ ದೇವರನ್ನು ನಿರಂತರವಾಗಿ ಹಂಬಲಿಸಬೇಕು.

*

ನಿಮ್ಮ ಅಂತರಂಗದಲ್ಲಿ ಇರಿ, ಬಾಹ್ಯ ಸನ್ನಿವೇಶಗಳಿಂದ ವಿಚಲಿತರಾಗದಿರಿ.

*

ಭಗವಂತನಿಗಾಗಿ ಮಾತ್ರ ಬದುಕಬೇಕು: ಇದರರ್ಥ, ವ್ಯಕ್ತಿಗತ ಜೀವನದ ಎಲ್ಲ ತೊಂದರೆಗಳನ್ನು ಜಯಿಸಿ ಬರುವುದಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/230–32**

ಜೀವನದ ಸಣ್ಣ ಘಟನೆಗಳಿಗೆ ಅತಿ ಹೆಚ್ಚು ಮಹತ್ವವನ್ನು ಕೊಡಬಾರದು.

ಈ ಸಣ್ಣ ಘಟನೆಗಳ ಮಹತ್ವವು, ಅವುಗಳು ನೀವು ಪ್ರಗತಿಯನ್ನು ಸಾಧಿಸಲು ಎಷ್ಟು ಸಹಾಯಕವಾಗಿವೆ ಎಂಬುದರಲ್ಲಿ ಅಡಕವಾಗಿದೆ. ಪ್ರಗತಿಯನ್ನು ಸಾಧಿಸಿದಾದ ಮೇಲೆ, ಹಿಂದಿನ ತಪ್ಪುಗಳ (ಏನಾದರು ಇದ್ದರೆ) ದೈವೀ ಕೃಪೆಯ ಮಧ್ಯಸ್ಥಿಕೆಯಿಂದ ಮಾಯವಾಗುತ್ತವೆ.

*

ಅಸಾಮರ್ಥ್ಯದ ಈ ಕಲ್ಪನೆಗಳು ಅರ್ಥಹೀನ, ಅವುಗಳು ಸತ್ಯದ ಪ್ರಗತಿಯ ನಿರಾಕರಣೆಯಾಗಿವೆ – ಇಂದು ಏನನ್ನು ಮಾಡಲಾಗುವುದಿಲ್ಲವೋ, ಹಂಬಲವಿದ್ದರೆ ಅದನ್ನು ಇನ್ನೊಂದು ದಿನ ಮಾಡಬಹುದು.

*

ಒಂದು ವೇಳೆ ಸಂಗತಿಗಳು ಇರಬೇಕಾದ ಹಾಗೆ ಇರದಿದ್ದರೆ, ಚಿಂತೆಯು ಅವುಗಳನ್ನು ಉತ್ತಮವಾಗಿಸಲು ಸಹಾಯ ಮಾಡುವುದಿಲ್ಲ. ದೃಢ ವಿಶ್ವಾಸವೇ ಶಕ್ತಿಯ ಆಧಾರ.

*

ಭೂತಕಾಲದ ಸಂಗತಿಗಳ ಬಗ್ಗೆ ಕಳವಳ ಪಡುತ್ತ ಇರುವುದು ತಪ್ಪು. ದೇವರಿಚ್ಛೆ ಇಲ್ಲದೆ ಏನೂ ಸಂಭವಿಸಲಾರದು ಎನ್ನುವುದನ್ನು ಮರೆಯದೆ ಇರುವುದು

ನಿಜವಾದ ಮನೋಭಾವ. ಆ ದೇವರಿಚ್ಛೆಗೆ ನಮ್ಮನ್ನು ನಾವು ಸಮರ್ಪಿಸಿಕೊಳ್ಳಬೇಕು. ಪೂರ್ವದಲ್ಲಿ ನೀವು ಏನಾದರೂ ತಪ್ಪುಗಳನ್ನು ಮಾಡಿದ್ದರೆ ಅದು ಸಂಪೂರ್ಣ ಶರಣಾಗತಿಯ ಕೊರತೆಯಿಂದ ಮತ್ತು ಅದನ್ನು ಸರಿ ಪಡಿಸಬೇಕಾದರೆ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳಬೇಕು.

*

ಭಯಪಡುವ ಅಗತ್ಯವಿಲ್ಲ – ಎಲ್ಲವೂ ದೇವಮಯ – ದೇವರನ್ನು ಬಿಟ್ಟು ಬೇರೇನೂ ಇಲ್ಲ; ದೇವನೊಬ್ಬ ಮಾತ್ರ ಇದ್ದಾನೆ, ನಮ್ಮನ್ನು ಹೆದರಿಸಲು ಪ್ರಯತ್ನಪಡುವುದೆಲ್ಲವೂ ದೇವರ ಕ್ಷುಲ್ಲಕ ಮತ್ತು ಅರ್ಥಹೀನ ಸೋಗು. ಸಹನ್ಮುಖಿಯಾಗಿರು – ಜಾಡ್ಯದ ಭ್ರಾಂತಿಯಿಂದ ಮುಕ್ತನಾಗು, ದೈವೀ ಶಾಂತಿಯನ್ನು ಹೊಂದು. ಆಗ ಎಲ್ಲವೂ ಸರಿ ಹೊಂದುವುದು.

ಪ್ರೀತಿ ಹಾಗೂ ಆಶೀರ್ವಾದಗಳೊಂದಿಗೆ.

*

ನಿನಗೆ ನನ್ನ ಸಲಹೆ: ಯಾತನೆಯನ್ನು ಹಚ್ಚಿಕೊಳ್ಳಬೇಡ, ಅದು ಪೂರ್ತಿಯಾಗಿ ನಿನ್ನನ್ನು ಬಿಟ್ಟು ಹೋಗುತ್ತದೆ. ಪ್ರಗತಿ ಹೊಂದಲು ಯಾತನೆ ಅಥವಾ ತೊಂದರೆ ಅನಿವಾರ್ಯವಾದ ಸಂಗತಿಯಲ್ಲ. ಶ್ರೇಷ್ಠವಾದ ಪ್ರಗತಿಯನ್ನು ಸ್ಥಿರ ಮತ್ತು ಹರ್ಷದಾಯಕ ಸಮಚಿತ್ತತೆಯ ಮುಖಾಂತರ ಮಾಡಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/234, 236, 242, 247**

**– ಶ್ರೀಮಾತೆ**

**ಮಂದಸ್ಮಿತವಾಗಿರಲು ಕಲಿತುಕೊಳ್ಳಿ**

ಯಾವಾಗಲೂ, ಎಲ್ಲ ಸಂದರ್ಭಗಳಲ್ಲೂ ಮಂದಸ್ಮಿತವಾಗಿರಲು ಕಲಿತುಕೊಳ್ಳಿ; ನಿಮ್ಮ ದುಃಖಗಳಲ್ಲಿ ಹಾಗೆಯೇ ಸಂತಸದ ಕ್ಷಣಗಳಲ್ಲಿ, ನಿಮ್ಮ ಯಾತನೆಗಳಲ್ಲಿ ಅಂತೆಯೇ ನಿಮ್ಮ ನಿರೀಕ್ಷೆಗಳಲ್ಲಿ ಮಂದಸ್ಮಿತವಾಗಿರಲು ಕಲಿತುಕೊಳ್ಳಿ, ಏಕೆಂದರೆ ನಗುವಿನಲ್ಲಿ ಸ್ವ–ಹತೋಟಿಯ ಸರ್ವೋತ್ತಮ ನಿಯಂತ್ರಣವಿದೆ.

*

ದೇವರ ಸೇವೆಯಲ್ಲಿದ್ದಾಗ ಮಮತೆಯು ತಾನಾಗಿಯೇ ಶಕ್ತಿಶಾಲಿಯಾಗುತ್ತದೆ.

*

ಸೂರ್ಯನ ಕಿರಣಗಳು ಮೋಡಗಳನ್ನು ಚದುರಿಸುವಂತೆ ನಗುವು ನಮ್ಮೆಲ್ಲ ತೊಂದರೆಗಳನ್ನು ಚದುರಿಸುತ್ತದೆ.

*

ನಾವು ಎಂದಿಗೂ ಅತಿಯಾಗಿ ನಗಬಹುದೆಂದು ನಾನು ಭಾವಿಸುವುದಿಲ್ಲ. ಎಲ್ಲಾ ಸಂದರ್ಭಗಳಲ್ಲಿ ನಗುವುದು ಹೇಗೆ ಎಂದು ತಿಳಿದಿರುವವರು ಪರಮಾತ್ಮನಿಗೆ ತುಂಬಾ ಹತ್ತಿರವಾಗಿರುತ್ತಾರೆ.

*

ಸಾಮಾನ್ಯವಾಗಿ ಹೇಳುವುದಾದರೆ, ಮನುಷ್ಯನು ತನ್ನನ್ನು ತಾನು ಅತ್ಯಂತ ಗಂಭೀರವಾಗಿ ಪರಿಗಣಿಸುವ ಪ್ರಾಣಿ. ಎಲ್ಲಾ ಸಂದರ್ಭಗಳಲ್ಲಿಯೂ ತನ್ನನ್ನು ತಾನು ನೋಡಿ ಹೇಗೆ ನಗಬೇಕೆಂದು ತಿಳಿದುಕೊಳ್ಳುವುದು, ನಮ್ಮ ದುಃಖಗಳ ಹಾಗೂ ಭ್ರಮನಿರಸನಗಳ, ಮಹತ್ವಾಕಾಂಕ್ಷೆಗಳ ಹಾಗೂ ಸಂಕಟಗಳ, ಕೋಪ ಹಾಗೂ ಪ್ರತಿಭಟನೆಗಳ ಸಂದರ್ಭಗಳಲ್ಲಿ ಹೇಗೆ ನಗಬೇಕೆಂದು ತಿಳಿದುಕೊಳ್ಳುವುದು ನಮ್ಮನ್ನು ನಾವು ಜಯಿಸಲು ಇರುವಂಥ ಒಂದು ಪ್ರಬಲವಾದ ಅಸ್ತ್ರವಾಗಿದೆ.

*

ಜೀವನದಲ್ಲಿ ನೀನು ಯಾವಾಗಲೂ ನಗುತ್ತಲಿದ್ದರೆ, ಜೀವನವು ಯಾವಾಗಲೂ ನಿನ್ನನ್ನು ನೋಡಿ ನಗುತ್ತಿರುತ್ತದೆ.

*

ನಾವು ಶಾಶ್ವತವಾಗಿ ನಗುತ್ತಿದ್ದರೆ, ನಾವು ಶಾಶ್ವತವಾಗಿ ಯುವಕರು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/177–78 – ಶ್ರೀಮಾತೆ**

# ಶ್ರೀ ಅರವಿಂದರ
# ‘ಗೀತಾ ಪ್ರಬಂಧಗಳು’

**– ಅನುವಾದ: ಜಾನ್ವಿ**

## 20

## ಅಧ್ಯಾಯ – 18

ನಿರ್ದಿಷ್ಟ ಹಂತದ ಘನತೆ, ಔನ್ನತ್ಯ ಸಾಧಿಸಿಕೊಂಡ ಸಾಧಕರಿಗೆ ತಮ್ಮೊಳಗೊಂದು ಅಲೌಕಿಕ, ದಿವ್ಯ, ನಿರ್ವ್ಯಯಕ್ತಿಕ ಶಕ್ತಿ ಕೆಲಸ ಮಾಡುತ್ತಿರುವುದರ ಅರಿವು ಇರುತ್ತದೆ. ಆದರೂ ಸಹ ಅವರು ಮಾನವೀಯ ಅಹಂ, ಪ್ರತಿಕ್ರಿಯೆಗಳಿಂದ ಮುಕ್ತರಾಗಿರುವುದಿಲ್ಲ. ಕೆಲಸಲವಂತೂ ಅತ್ಯುಗ್ರ ಪ್ರತಿಕ್ರಿಯೆ ನೀಡುವುದುಂಟು. ಆದರೆ ಮುಕ್ತಾತ್ಮನಿಗೆ ಇಂಥ ಮುಕ್ತಿ ಸಿದ್ಧಿಸಿರುತ್ತದೆ. ಏಕೆಂದರೆ ತನ್ನ ವ್ಯಕ್ತಿತ್ವವನು ನಿರ್ವ್ಯಕ್ತಿತ್ವದಲ್ಲಿ ಕರಗಿಸಿ ಬಿಟ್ಟಿರುತ್ತಾನೆ. ಅವನಿಗೆ ತನ್ನದೇ ಆದ ಪ್ರತ್ಯೇಕ ವ್ಯಕ್ತಿತ್ವವೆಂಬುದು ಇರುವುದಿಲ್ಲ. ಎಲ್ಲವಲ್ಲೂ ಪರಮ ದೈವೀ ಪುರುಷನೇ ನಿರ್ವಹಿಸುತ್ತಿರುತ್ತಾನೆ. ಸಾಕ್ಷಾತ್ ಪುರುಷೋತ್ತಮನೇ ಸಾಧಕನ ಎಲ್ಲ ಸಾಂತ ಅನಂತ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಾನೆ. ಅವನಿಗೆ ಯಾವ ವಿಧದ ನಿರ್ಬಂಧಗಳೂ ಇರುವುದಿಲ್ಲ, ಎಲ್ಲ ರೀತಿಯಿಂದಲೂ ಮುಕ್ತನಾಗಿರುತ್ತಾನೆ. ಅವನು ಕೇವಲ ಸಹಜ ಗುಣ ಗಣಗಳ ಮೊತ್ತವಾಗಿರುವುದಿಲ್ಲ, ಅವನು ಆತ್ಮ ಸ್ವರೂಪನೇ ಆಗಿರುತ್ತಾನೆ. ನಮಗೆ ಮೇಲೆ ತೋರುವ ಅವನ ವ್ಯಕ್ತಿತ್ವವು ಕೇವಲ ಪ್ರಕೃತಿಯ ಸಹಜ ಕ್ರಿಯೆಗಾಗಿ ಇರುವುದೇ ವಿನಃ ಯಾವುದೇ ರೀತಿಯಿಂದ ಬದ್ಧವಾಗಿರುವುದಿಲ್ಲ; ಅದು ವಿಶಾಲವೂ, ಅನಿರ್ಬಂಧಿತವೂ, ಸ್ವತಂತ್ರವೂ, ವಿಶ್ವಾತ್ಮವೂ ಆಗಿರುತ್ತದೆ. ಅದು ಅನಂತದ ಪ್ರತಿಷ್ಠಾಪನೆಗೆ ಯೋಗ್ಯವಾಗಿರುತ್ತದೆ. ಅವನು ಪುರುಷೋತ್ತಮನ ಜೀವಂತ ಪರಿವೇಶವಾಗಿರುತ್ತಾನೆ.

ಈ ಜ್ಞಾನ, ನಿರಾಶಿತ್ವ, ನಿರ್ಮೋಹಿತ್ವ, ನಿರ್ವ್ಯಕ್ತಿಕತೆಗಳ ಪರಿಣಾಮವಾಗಿ ಜೀವನದಲ್ಲಿ ಪರಿಪೂರ್ಣವಾದ ಸಮತ್ವ ಸಿದ್ಧಿಸುತ್ತದೆ, ಪ್ರಕೃತಿಯಲ್ಲಿ ಸಮತೆ ಮೂಡುತ್ತದೆ. ಈ ಸಮತೆಯೇ ದಿವ್ಯ ಕರ್ತೃವಿನ ನಾಲ್ಕನೆಯ ಲಕ್ಷಣವಾಗಿದೆ. ಗೀತೆ ಹೇಳುವಂತೆ ಅವನು ಎಲ್ಲ ದ್ವಂದ್ವಗಳನ್ನು ಮೀರಿರುತ್ತಾನೆ, ದ್ವಂದ್ವಾತೀತನಾಗಿರುತ್ತಾನೆ; ಅವನು ಎಲ್ಲವನ್ನೂ ಸಮಾನ ದೃಷ್ಟಿಯಿಂದಲೇ ನೋಡುತ್ತಾನೆ, ಅವನಲ್ಲಿ ಭಾವ ವ್ಯತಿರೇಕವಿರುವುದಿಲ್ಲ, ಸೋಲು–ಗೆಲುವುಗಳ ಭಾವ ಇರುವುದಿಲ್ಲ. ಅಷ್ಟೇ ಅಲ್ಲ ಎಲ್ಲ

ವಿಧದ ದ್ವಂದ್ವಗಳಿಂದ, ವೈರುಧ್ಯಗಳಿಂದ ಅವನು ಮುಕ್ತನಾಗಿರುತ್ತಾನೆ. ಬಾಹ್ಯದಲ್ಲಿ ಕಾಣಬರುವ ವ್ಯತ್ಯಾಸಗಳು, ಸಾಮಾನ್ಯವಾಗಿ ಎಲ್ಲ ಜನರ ಮನೋಭೂಮಿಕೆಯ ವ್ಯಕ್ತಿತ್ವವು ಸಿದ್ಧವಾಗುವ ವಿಷಯಗಳು, ಸಂಗತಿಗಳು, ಘಟನೆಗಳು ಎಲ್ಲವೂ ಅವನಿಗೆ ಕೇವಲ ಉಪಕರಣ ರೂಪವಾಗಿ ತೋರುವುವು. ಯಾವುದನ್ನೂ ಅವನು ನಿರ್ಲಕ್ಷಿಸುವುದಿಲ್ಲ, ಆದರೆ ಅವನು ಅವುಗಳನ್ನು ಮೀರಿ ನಿಂತಿರುತ್ತಾನೆ. ಒಳ್ಳೆಯದೇ ಆಗಲಿ, ಕೆಟ್ಟದ್ದೇ ಆಗಲಿ, ಮಾನವನಿಗೆ ಎಲ್ಲವೂ ಅವನ ಆಶೆ–ಆಕಾಂಕ್ಷೆಗಳಿಗೆ ಅನುಗುಣವಾಗಲಿ ಅತಿ ಮಹತ್ವದ್ದೆಂದೇ ತೋರುವುದು. ಆದರೆ ದಿವ್ಯ ಮಾನವನಿಗೆ ಆಶೆಗಳೇ ಇರುವುದಿಲ್ಲವಾಗಿ ಸಮಾನವಾಗಿಯೇ ತೋರುವುದು. ಅಂತೆಯೇ ಸ್ವರೂಪದ ಶಾಶ್ವತ ಒಳ್ಳೆಯದಕ್ಕಾಗಿ ಅವನು ಎಲ್ಲವನ್ನೂ ಸಮಾನವಾಗಿಯೇ ಸ್ವೀಕರಿಸುತ್ತಾನೆ. ಅವನಿಗೆ ಯಾವುದೇ ಘಟನೆ ಇರಲಿ, ಸೋಲು ಎನಿಸುವುದೇ ಇಲ್ಲ, ಏಕೆಂದರೆ ಅವನ ದೃಷ್ಟಿಯಲ್ಲಿ ಎಲ್ಲವೂ ಪ್ರಕೃತಿ ಎಂಬ ಕುರುಕ್ಷೇತ್ರದಲ್ಲಿ ದೈವೀ ವಿಜಯದ ಕಡೆಗೆ ಹೋಗುವುದು. ಇಡೀ ಕುರುಕ್ಷೇತ್ರವೇ ಧರ್ಮಕ್ಷೇತ್ರವಾಗಿರುವುದು. ಜೀವನ ಸಂಗ್ರಾಮದ ಪ್ರತಿ ತಿರುವೂ ಕೂಡ ಯುದ್ಧ ಪ್ರಭುವಾದ ಭಗವಂತನ ಯೋಜನೆಯ ಪ್ರಕಾರವೇ ಜರುಗುವುದು. ಅವನೇ ಕರ್ಮಗಳ ಅಧ್ಯಕ್ಷನು, ಪ್ರಭುವು, ಅವನೇ ಧರ್ಮದ ಮಾರ್ಗದರ್ಶಕನು, ಮಾನವರು ನೀಡುವ ಮಾನ ಅಪಮಾನಗಳು ಅವನನ್ನು ಯಾವ ರೀತಿಯಿಂದಲೂ ಪ್ರಭಾವಿತಗೊಳಿಸುವುದಿಲ್ಲ. ಹೊಗಳಿಕೆ, ತೆಗಳಿಕೆ ಅವನನ್ನು ಸ್ಪರ್ಶಿಸುವುದೇ ಇಲ್ಲ. ಏಕೆಂದರೆ, ಅವನ ನ್ಯಾಯ ನಿರ್ಣಯದ ರೀತಿಯೇ ಭಿನ್ನವಾಗಿರುತ್ತದೆ, ನ್ಯಾಯ ನಿರ್ಣಾಯಕನ ದೃಷ್ಟಿಕೋನವೇ ಭಿನ್ನವಾಗಿರುತ್ತದೆ. ಅವನ ಮೌಲ್ಯ ಮಾಪನ, ನ್ಯಾಯಾ ನ್ಯಾಯತರ್ಕದ ತಕ್ಕಡಿಯೇ ಭಿನ್ನವಾಗಿರುತ್ತದೆ. ಅವನು ಯಾವ ಪ್ರಾಪಂಚಿಕ ಗೌರವ, ಆದರ, ಪದವಿ, ಪುರಸ್ಕಾರಗಳನ್ನೂ ಆಶಿಸುವುದಿಲ್ಲ. ಅವನು ಅವುಗಳನ್ನು ಮೀರಿರುತ್ತಾನೆ. ಅರ್ಜುನನು ಕ್ಷತ್ರೀಯನಾಗಿದ್ದುಕೊಂಡು ಖ್ಯಾತಿ, ಜನಪ್ರಿಯತೆಗಳಿಗೆ ಹೆಚ್ಚು ಮಹತ್ವ ನೀಡುವುದು ಸರಿಯಾಗಿದೆ; ಅವನು ಅಪಖ್ಯಾತಿ, ಅಪಮಾನಗಳನ್ನು ಸಹಿಸದಿರುವುದು, ಹೇಡಿ ಎನಿಸಿಕೊಳ್ಳುವುದು ಸಾವಿಗಿಂತ ಕಡೆ ಎಂದು ಭಾವಿಸುವುದು ಯೋಗ್ಯವಾಗಿಯೇ ಇದೆ. ಗೌರವಾದರಗಳನ್ನು ಕಾಯ್ದುಕೊಂಡು, ಧೈರ್ಯ, ಧೃತಿಯನ್ನೂ ತಾಳಿ ಲೋಕ ಕಾರ್ಯಗಳನ್ನು ಮಾಡುವುದು ಅವನ ಕ್ಷತ್ರಿಯ ಧರ್ಮದ ಭಾಗವೇ ಆಗಿದೆ. ಆದರೆ ಜೀವನ್ಮುಕ್ತನಾದರೆ ಅರ್ಜುನನು ಇವುಗಳ ಬಗ್ಗೆ ಚಿಂತಿಸಬೇಕಾಗಿಲ್ಲ. ಕರ್ತವ್ಯಂ ಕರ್ಮ ಏನು ಎಂಬುದನ್ನು ಯೋಚಿಸಿದರೆ ಸಾಕು, ತನ್ನ ಕರ್ತವ್ಯ ತಾನು

ಮಾಡಿ ಉಳಿದೆಲ್ಲವನ್ನೂ ಭಗವಂತನಿಗೆ ಬಿಟ್ಟು ಬಿಡುವುದು ಅವನ ವ್ಯಕ್ತಿತ್ವಕ್ಕೆ ಯೋಗ್ಯವಾಗಿದೆ, ಸರಿಯಾದ ದಾರಿಯಾಗಿದೆ. ಮಾನವನು ಪಾಪ ಪುಣ್ಯ ಇವುಗಳ ಪರಿಕಲ್ಪನೆಯನ್ನು ಮೀರಬೇಕು; ಮಾನವರ ಮಟ್ಟಿಗೆ ಅದೇ ಅತ್ಯಂತ ಮಹತ್ವದ್ದು, ಮಾನವನು ಅವುಗಳನ್ನು ಮೀರಬೇಕೆಂದು ಪ್ರಯತ್ನಿಸಿದಷ್ಟೂ ಅವುಗಳ ಹಿಡಿತ ಜಾಸ್ತಿ ಆಗುತ್ತಲೇ ಹೋಗುತ್ತದೆ. ಅವನ ಅಹಂ ಕಡಿಮೆಯಾಗಬೇಕು. ಭಾವಾವೇಶಗಳ ಭಾರ ಹಗುರಾಗಬೇಕು ಇದು ಅಲಿಖಿತ ನಿಯಮ; ಜೀವನ್ಮುಕ್ತನು ಈ ಹೋರಾಟವನ್ನು ಮೀರಿರುತ್ತಾನೆ, ಸಾಕ್ಷೀ ಭಾವದ ಪವಿತ್ರ ಕ್ಷೇತ್ರದಲ್ಲಿ ನಿಂತು ಎಲ್ಲವನ್ನೂ ಪರೀಕ್ಷಿಸುವ ಸಿದ್ಧ ಆತ್ಮಭಾವವನ್ನು ತಾಳಿರುತ್ತಾನೆ. ಅವನಿಂದ ಪಾಪ ಘಟಿಸುವ ಸಾಧ್ಯತೆಯೇ ಇಲ್ಲ. ಪುಣ್ಯ ಗಳಿಸುವ ಪ್ರಮೇಯವೂ ಅವನಿಗಿಲ್ಲ. ದುಷ್ಟ ಕರ್ಮಗಳಿಂದ ಪಾಪ ಅಂಟೀತು, ಉತ್ತಮ ಕರ್ಮಗಳಿಂದ ಪುಣ್ಯ ಬಂದೀತು ಎಂಬ ಯೋಚನೆಯನ್ನು ಕೂಡ ಅವನು ಮೀರಿದ್ದಾನೆ. ಅವನು ಅವಿಚ್ಛಿನ್ನವಾದ, ಅವಿಕಾರಿಯಾದ ಪವಿತ್ರ ಸ್ಥಾನವನ್ನು ಏರಿ, ನಿಃಸ್ವಾರ್ಥ ಹಾಗೂ ದೈವಿಕ ಸ್ಥಾನದಲ್ಲಿ ನಿಂತಿದ್ದಾನೆ; ಮಾನವನ ಪ್ರಕೃತಿಯ ಉನ್ನತ ಶಿಖರ ಅದು, ಅದನ್ನೇರಿ ಅಲ್ಲಿ ಸ್ಥಿತನಾಗಿದ್ದಾನೆ. ಅಲ್ಲಿ ಪಾಪ ಪುಣ್ಯಗಳ ಪರಿಕಲ್ಪನೆಗೆ ಆಸ್ಪದವೇ ಇಲ್ಲ. ಅಷ್ಟು ಪರಿಶುದ್ಧವಾದ, ಪವಿತ್ರ ಶಿಖರ ಅದು.

ಆದರೆ ಅರ್ಜುನನಿನ್ನೂ ಆ ಹಂತ ತಲುಪಿಲ್ಲ. ಅವನಿನ್ನೂ ಅಜ್ಞಾನದಲ್ಲಿಯೇ ಇದ್ದಾನೆ. ಅಂತೆಯೇ ಅವನಲ್ಲಿನ್ನೂ ದ್ವಿಧಾ ಭಾವ ಇದೆ. ಅವನ ಹೃದಯವು ಧರ್ಮದ, ನ್ಯಾಯದ ಕರೆಯನ್ನು ಕೇಳುತ್ತದೆ. ಅದಕ್ಕೆ ಸ್ಪಂದಿಸುತ್ತದೆ; ಮನಸ್ಸು ಯೋಚಿಸುತ್ತದೆ, ಯುದ್ಧ ಮಾಡದೇ ಹೋದರೆ ಪಾಪ ತಗುಲುವುದು, ಅನ್ಯಾಯ, ಅಧರ್ಮ, ದುರಾಚಾರ ಇವೇ ಗೆಲ್ಲುವುದರಿಂದ ಮುಂದೆ ಒದಗಬಹುದಾದ ದುಃಖ, ಅನ್ಯಾಯ, ದುರಾಡಳಿತಗಳಿಗೆಲ್ಲ ತಾನೇ ಹೊಣೆಯಾಗುವೆನೇನೋ ಎಂಬ ಆತಂಕ, ಅದರಿಂದ ಪ್ರಜೆಗಳು, ರಾಷ್ಟ್ರ ಎಲ್ಲವೂ ಭವಿಷ್ಯದಲ್ಲಿ ತುಂಬ ತೊಂದರೆ ಅನುಭವಿಸಬೇಕಾಗುವುದೆಂಬ ಹೆದರಿಕೆ ಅವನನ್ನು ಕಾಡುತ್ತದೆ. ಅದೇ ವೇಳೆಗೆ ಅವನ ಹೃದಯವು ಹಿಂಸೆ, ಕೊಲೆ, ರಕ್ತಪಾತಗಳಿಂದ ಹಿಂದೆ ಸರಿಯುತ್ತದೆ. ಇಂಥ ಅಪಾರ ರಕ್ತಪಾತದಿಂದ, ಹಿಂಸೆಯಿಂದ ಯಾರಿಗೆ ಒಳಿತಾದೀತು? ಎಲ್ಲವೂ ಅನರ್ಥವೇ ಆದೀತಲ್ಲವೇ? ಇಂಥ ದುಷ್ಕೃತ್ಯವನ್ನು ಹೇಗೆ ಸಮರ್ಥಿಸುವುದು ಎಂದು ಮನಸ್ಸು ಒದ್ದಾಡುತ್ತದೆ. ಈ ಎರಡೂ ಭಾವಗಳು ಅಷ್ಟೇ ಸಮರ್ಥವಾಗಿ ತರ್ಕವನ್ನು ಒಡ್ಡುವುವು, ಒಮ್ಮೆ ಅದೇ ಸರಿ ಅನಿಸಿದರೆ, ಮಗದೊಮ್ಮೆ ಇದೇ ಸರಿ

ಅನಿಸುವುದು, ಇವುಗಳಲ್ಲಿ ಯಾವ ಭಾವ ಗೆಲ್ಲವುವು, ಅವನು ಏನು ಮಾಡುವನು ಎಂಬುದು ಅವನಿರುವ ಪರಿಸ್ಥಿತಿ ಹಾಗೂ ಕಾಲಗಳ ಮೇಲೆ ಅವಲಂಬಿಸಿರುವುದು. ಜಗತ್ತು ಕೂಡ ಅಷ್ಟೇ ಅವನ ಪರಿಸ್ಥಿತಿ ಹಾಗೂ ಕಾಲವನ್ನನುಸರಿಸಿಯೇ ಅವನ ಬಗ್ಗೆ ತೀರ್ಮಾನ ನೀಡುವುದು. ಅವನ ಹೃದಯ ಹಾಗೂ ಕುಲದ ಮೇಲಿರುವ ಅಭಿಮಾನವು ಮಿತ್ರ ಪಕ್ಷವನ್ನು ವಹಿಸಿ ವೈರಿಗಳ ವಿರುದ್ಧ, ಅತ್ಯಾಚಾರ, ಅನಿಷ್ಟಗಳ ವಿರುದ್ಧ ಹೋರಾಡಲು ಪ್ರೇರಿಸುವುದುಂಟು, ಧರ್ಮ, ನ್ಯಾಯಗಳ ಪತಾಕೆಯನ್ನು ಎತ್ತಿ ಹಿಡಿಯುವಂತೆ ಪ್ರೋತ್ಸಾಹಿಸುವುದುಂಟು. ಇದೆಲ್ಲ ನೈತಿಕ, ಸಾಮಾಜಿಕ ಪರಿಧಿಯೊಳಗಿನ ಮಾತು. ಆದರೆ ಜೀವನ್ಮುಕ್ತನು ಇಂಥ ಮಾನದಂಡಗಳ ಆಚೆಗೆ ನಿಂತಿರುತ್ತಾನೆ. ಅವನ ಗುರಿ ಇರುವುದು ವಿಕಾಸ ಹೊಂದುತ್ತ ಹೋಗುವ ಧರ್ಮದ ಸಂರಕ್ಷಣೆ, ಅದರ ಅಭ್ಯುದಯ ಹಾಗೂ ಈಶ್ವರ ಪ್ರಣೀತ ದಿವ್ಯ ಕರ್ಮಗಳನ್ನು ಮಾಡುವುದು. ಅವನಿಗೆ ವೈಯಕ್ತಿಕ ಗುರಿ, ಸ್ವಾರ್ಥ ಎಂಬುದೇನಿಲ್ಲ. ವೈಯಕ್ತಿಕ ಇಷ್ಟ, ಅನಿಷ್ಟ, ಪ್ರೀತಿ, ದ್ವೇಷಗಳಿಲ್ಲ, ನಿರ್ದಿಷ್ಟ ಮಾನದಂಡಗಳು ಅಂತಿಲ್ಲ. ಇಂಥದೇ ಕರ್ಮ ಎಂಬ ಅಭಿಪ್ರಾಯವೂ ಇಲ್ಲ, ಮನುಕುಲದ ಪ್ರಗತಿಪರ ಮುನ್ನಡೆಯ ಸುನಮ್ಯಗತಿಗೆ ಕಲ್ಲು ಬಂಡೆಯಂತೆ ಅಡ್ಡಿಯಾಗುವ ಅಥವಾ ಅನಂತದ ಆಹ್ವಾನವನ್ನು ಎದುರಿಸಿ ನಿಲ್ಲಬೇಕಾದ ಕರ್ಮದ ಕಠೋರ ಕಟ್ಟಳೆ ಕೂಡ ಅವನಿಗಿಲ್ಲ. ಅವನಿಗೆ ವೈಯಕ್ತಿಕ ಶತ್ರುಗಳಿಲ್ಲ, ಅವನನ್ನು ಗೆಲ್ಲವು ಅಥವಾ ಕೊಲ್ಲುವ ಪ್ರಶ್ನೆಯೇ ಅವನಿದಿರು ಇಲ್ಲ. ಅವನಿಗೆ ಕಾಣವುದು ಕೇವಲ ಜನರು, ತನ್ನನ್ನು ಈ ಪರಿಸ್ಥಿತಿಗೆ ತಂದು ನಿಲ್ಲಿಸಿದ ಜನರು ಮಾತ್ರ ಅವನಿಗೆ ಕಾಣುತ್ತಾರೆ. ಅಷ್ಟೇ ಏಕೆ ವಿಧಿಯ ಅಥವಾ ನಿಯತಿಯ ವಿರೋಧದಿಂದ ಕೂಡ ಪ್ರಕೃತಿಗೆ ಸಹಾಯ ಮಾಡುವ ಜನರ ಮತ್ತು ಸಂಗತಿಗಳ ಸಂಕಲ್ಪ ಈಶ್ವರ ಸಂಕಲ್ಪ ಅವನಿಗೆ ಕಾಣುತ್ತದೆ. ಆದರೆ ಅವರ ಬಗೆಗೂ ಆ ಸಂಗತಿಗಳ ಬಗೆಗೂ ಅವನಿಗೆ ದ್ವೇಷವಿಲ್ಲ, ಅವುಗಳ ಮೇಲೆ ಸಿಟ್ಟಿಲ್ಲ. ಏಕೆಂದರೆ ಸಿಟ್ಟು, ದ್ವೇಷ ಇವು ದೈವೀ ಪ್ರಕೃತಿಯಲ್ಲಿ ಇಲ್ಲವೇ ಇಲ್ಲ. ತನಗೆ ಎದುರಾದದ್ದನ್ನು ಮುರಿದು ಕೊಲ್ಲುವ ಆಸುರೀ ಪ್ರವೃತ್ತಿಯಾಗಲಿ, ಹತ್ಯೆಯ ಉಗ್ರ ಹಸಿವೆಯ ರಾಕ್ಷಸೀ ಪ್ರವೃತ್ತಿಯಾಗಲಿ ಅವನ ದೈವೀ ಸ್ವಭಾವಕ್ಕೆ, ಸ್ಥೈರ್ಯ, ಶಾಂತಿ, ವಿಶ್ವಾತ್ಮಕ ಸಹಾನುಭೂತಿ ತಿಳುವಳಿಕೆಗಳಿಗೆ ಅಸಾಧ್ಯವೇ ಸರಿ. ಯಾರನ್ನೂ ನೋಯಿಸುವ ಇಚ್ಛೆ ಅವನಿಗಿರದು, ಎಲ್ಲರ ಬಗೆಗೂ ಕರುಣೆ, ಅಂತಃಕರಣ, ಸ್ನೇಹ ಭಾವ ಮೈತ್ರಃ ಕರುಣ ಏವಚ – ಇರುತ್ತವೆ. ಆದರೆ ಈ ಕರುಣೆಯು ದೈವೀ ಪುರುಷನ ಕರುಣೆ, ಮಾನವರನ್ನು ಮೀರಿದ ದಿವ್ಯ ಕರುಣೆ, ಎಲ್ಲ ಜೀವಿಗಳನ್ನು ತನ್ನಂತರಂಗದಲ್ಲಿ

ಅಪ್ಪಿಕೊಳ್ಳುವ ದಿವ್ಯ ಕರುಣೆ. ಅದು ಕೇವಲ ಮಾನವ ಸಹಜ ಭಾವನಾತ್ಮಕ, ಮಾನಸಿಕ, ಐಂದ್ರೀಯ ಕರುಣೆಯಲ್ಲ. ಇದನ್ನೆಲ್ಲ ಮೀರಿ, ಕೇವಲ ಶಾರೀರಿಕ ಜೀವನವನ್ನೂ ಮೀರಿ, ಆತ್ಮದ ಜೀವನವನ್ನು ಕೇಂದ್ರವಾಗಿರಿಸಿಕೊಂಡು ನೋಡುವ ದೈವೀ ಕರುಣೆ, ಸ್ನೇಹ, ಪ್ರೀತಿ ಅವನದು. ಅವನು ಯುದ್ಧಕ್ಕೆ, ಹಿಂಸೆಗೆ, ಹತ್ಯೆಗೆ ಮುಂದಾಗುವುದಿಲ್ಲ, ಆದರೆ ಧರ್ಮದ ವಿಷಯದಲ್ಲಿ ಯುದ್ಧ ಅನಿವಾರ್ಯ–ವೆಂದಾದರೆ, ಹಿಂಜರಿಯುವುದಿಲ್ಲ, ಸಮತೆಯಿಂದ ಸ್ವೀಕರಿಸುತ್ತಾನೆ. ವಿಶಾಲ ತಿಳುವಳಿಕೆ, ಪರಿಪೂರ್ಣ ಅರಿವಿನಿಂದ ಅದನ್ನು ಒಪ್ಪಿಕೊಳ್ಳುತ್ತಾನೆ. ಯಾರ ಅಧಿಕಾರದ ಸುಖ ಸಾಮರ್ಥ್ಯಗಳನ್ನು ನಾಶ ಮಾಡಬೇಕೋ, ಯಾರ ವಿಜಯೀ ಜೀವನದ ಆನಂದವನ್ನು ನಷ್ಟಪಡಿಸಬೇಕೋ ಅಂಥವರ ಬಗೆಗೂ ಸಹ ಅನುಕಂಪ, ಸಹಾನುಭೂತಿ ಸಮಾನತೆ, ವಿಶುದ್ಧ ತಿಳುವಳಿಕೆ ಹೊಂದಿರುತ್ತಾನೆ. ಯುದ್ಧ ಮಾಡುವಾಗಲೂ ಈ ಅನುಕಂಪ, ಸಹಾನುಭೂತಿ ಅಖಂಡಿತವಾಗಿರುತ್ತದೆ.

ಏಕೆಂದರೆ, ಅವನು ಎಲ್ಲರಲ್ಲೂ ಎರಡು ಸಂಗತಿಗಳನ್ನು ಅವಶ್ಯವಾಗಿ ಕಾಣುತ್ತಾನೆ. ಎಲ್ಲರಲ್ಲಿಯೂ ಅಮಾನವಾಗಿ ನೆಲೆಸಿರುವ ಈಶ್ವರ, ಅವನ ಭಿನ್ನ ಭಿನ್ನ ವ್ಯಕ್ತ ರೂಪಕ್ಕೆ ಕಾರಣವಾದ ತಾತ್ಕಾಲಿಕ ಪರಿಸ್ಥಿತಿಯ ವಿಷಮತೆ ಇವುಗಳನ್ನೇ ಅವನು ಮುಖ್ಯವಾಗಿ ಗ್ರಹಿಸುತ್ತಾನೆ. ಪಶು, ಮಾನವ, ನಾಯಿ, ಚಾಂಡಾಲ, ವಿದ್ವಾನ್, ಬ್ರಾಹ್ಮಣ, ಮಹಾಪಾಪಾತ್ಮ, ಶತ್ರು, ಮಿತ್ರ, ತಟಸ್ಥ, ತನ್ನನ್ನು ಪ್ರೀತಿಸುವವರು, ಹಿತ ಬಯಸುವವರು, ಹಾಗೆಯೇ ದ್ವೇಷಿಸುವವರು ಎಲ್ಲರನ್ನೂ ಅವನು ಸಮಾನವಾಗಿ ಕಾಣುತ್ತಾನೆ. ಎಲ್ಲರಲ್ಲೂ ಅವನು ತನ್ನನ್ನೇ ಕಾಣುತ್ತಾನೆ, ಈಶ್ವರನನ್ನೇ ಕಾಣುತ್ತಾನೆ. ಬಾಹ್ಯದಲ್ಲಿ ಪರಿಸ್ಥಿತಿಗನುಗುಣವಾಗಿ ಅವನು ಕೆಲವರೊಡನೆ ಸ್ನೇಹದಿಂದಿರಬಹುದು, ಕೆಲವರೊಡನೆ ಜಗಳವಾಡಬಹುದು, ಯುದ್ಧ ಮಾಡಬಹುದು; ಆದರೆ ಆಂತರಿಕವಾಗಿ ಅವನು ಎಲ್ಲರ ಜೊತೆಗೂ ಸಮನಾಗಿರುತ್ತಾನೆ. ಅವನ ಎಲ್ಲ ಪ್ರಕಾರದ ವ್ಯವಹಾರದಲ್ಲೂ ಒಂದೇ ಆಧ್ಯಾತ್ಮಿಕ ತತ್ವಪೂರ್ಣ ಸಮತೆ, ಪ್ರೀತಿ ಕಂಡು ಬರುವುವು ಅವನ ಎಲ್ಲ ಕರ್ಮಗಳಲ್ಲೂ ಒಂದೇ ತತ್ವ ಇರುತ್ತದೆ, ಅವನಲ್ಲಿ ಪರಮಾತ್ಮನ ಸಂಕಲ್ಪ ಜಾಗೃತವಾಗಿರುತ್ತದೆ. ಮಾನವ ಜನಾಂಗದ ಒಳಿತಿಗಾಗಿ ಏನು ಮಾಡಬೇಕೋ ಅದನ್ನೇ ಅವನು ಮಾಡುತ್ತಾನೆ. ಸಮಗ್ರ ಮಾನವ ಜನಾಂಗವು ದೈವತ್ವದ ದಾರಿಯಲ್ಲಿ ನಡೆಯಲು ಏನು ಮಾಡಬೇಕಾಗಿದೆಯೋ ಅದನ್ನೇ ಆತ ಮಾಡುತ್ತಾನೆ.

ದಿವ್ಯ ಕರ್ಮಕರ್ತೃವಿನ ಇನ್ನೊಂದು ಲಕ್ಷಣವನ್ನು ಶ್ರೀ ಕೃಷ್ಣ ಪುನಃ ವಿವರಿಸುತ್ತಾನೆ. ದೈವೀ ಪ್ರಜ್ಞೆಯು ಆಂತರಿಕ ಆನಂದ, ಶಾಂತಿ ಇವುಗಳ ಮೇಲೆ ಕೇಂದ್ರೀತವಾಗಿದೆ. ಆದರೆ ಈ ಆನಂದ ಮತ್ತು ಶಾಂತಿಗಳು ಜಗದ ಯಾವ ವಸ್ತು ಅಥವಾ ಸಂಗತಿಗಳ ಮೇಲೆಯೂ ನಿರ್ಭರವಾಗಿರುವುದಿಲ್ಲ. ಅದು ನಿರಪೇಕ್ಷವಾಗಿರುತ್ತದೆ, ಸಹಜವಾಗಿರುತ್ತದೆ, ಅದು ಆತ್ಮ ಪ್ರಜ್ಞೆಯ ಮೂಲ ಸತ್ವವಾಗಿದ್ದು, ದೈವೀ ಪುರುಷನ ಸ್ವಭಾವವೇ ಆಗಿರುತ್ತದೆ. ಸಾಮಾನ್ಯ ಮಾನವನು ಆನಂದಕ್ಕಾಗಿ ಬಾಹ್ಯ ವಸ್ತುಗಳನ್ನು ಅವಲಂಬಿಸಿರುತ್ತಾನೆ, ಆಶಿಸುತ್ತಾನೆ, ಅವನಲ್ಲಿ ಬಯಕೆ, ಆಶೆ ಇವೆ. ಅಂತೆಯೇ ಅವನಲ್ಲಿ ರಾಗ, ದ್ವೇಷ, ಸುಖ, ದುಃಖ, ಆವೇಶ ಎಲ್ಲವೂ ಇವೆ. ಅವನು ಎಲ್ಲವನ್ನೂ ಲಾಭ–ನಷ್ಟಗಳ ತಕ್ಕಡಿಯಲ್ಲಿಯೇ ಅಳೆಯುತ್ತಾನೆ. ಆದರೆ ದೈವೀ ವ್ಯಕ್ತಿಗೆ ಇವಾವೂ ಸಂಬಂಧವೇ ಇಲ್ಲ. ಅವನು ಸದಾ ತೃಪ್ತನೂ, ನಿರಾಲಂಬನೊ "ನಿತ್ಯ ತೃಪ್ತೋ ನಿರಾಶ್ರಯಃ" ಆಗಿರುತ್ತಾನೆ. ಈ ಸ್ಥಿತಿಯ ಆನಂದ, ದೈವೀ ಸಂತುಷ್ಟ ಎಲ್ಲವೂ ಅಂತರಂಗದಲ್ಲಿ ಶಾಶ್ವತವಾಗಿರುತ್ತವೆ. ಅವು ಅವನ ಕಣ ಕಣಗಳಲ್ಲಿ ಸಮಾಹಿತವಾಗಿರುತ್ತವೆ. "ಆತ್ಮರತಿಃ, ಅಂತಃ ಸುಖೋವಂತರಾರಮಃ, ತಥಾಂತರ್ಜ್ಯೋರ್ಗತಿರೇವಯಃ" ಬಾಹ್ಯ ವಸ್ತುಗಳಿಂದ ಸಿಗುವ ಆನಂದವು ತನಗೆ ಅವು ದೊರೆತಿವೆ ಎಂಬ ಅಭಿಮಾನದಿಂದಲ್ಲ, ಅವು ಇಲ್ಲವಾದರೆ ಅವನಿಗೆ ದುಃಖವೂ ಇಲ್ಲ. ಅವನಿಗೆ ಅವುಗಳ ಮೇಲಿರುವ ಪ್ರೀತಿ ಅವುಗಳಲ್ಲಿರುವ ಶಾಶ್ವತ ತತ್ವಕ್ಕಾಗಿ. ಅವುಗಳ ಬಾಹ್ಯ ಸ್ಪರ್ಶದಲ್ಲಿ ಅವನಿಗೆ ಆಸಕ್ತಿ ಇಲ್ಲ. ತನ್ನಲ್ಲಿರುವ, ಎಲ್ಲರಲ್ಲೂ, ಎಲ್ಲದರಲ್ಲೂ ಇರುವ ಆನಂದವನ್ನೇ ಅವನು ಕಾಣುತ್ತಾನೆ. ಅವನು ಎಲ್ಲದರ ಜೊತೆ ಏಕೀಭವಿಸಿರುತ್ತಾನೆ. ಬ್ರಹ್ಮಯೋಗಯುಕ್ತಾತ್ಮಾ, ಸರ್ವಭೂತಾತ್ಮ – ಭೂತಾತ್ಮ, ಸುಖ ನೀಡುವ ವಸ್ತುಗಳಿಂದ ಅನಿಗೆ ನಲಿವಿಲ್ಲ, ದುಃಖಕರ ವಸ್ತುಗಳಿಂದ ಅವನಿಗೆ ನೋವಿಲ್ಲ. ಶತ್ರುಗಳ, ಮಿತ್ರರ ಕ್ಷತಿ, ಗಾಯಗಳು ಅವನ ಸ್ಥೈರ್ಯವನ್ನು ಕುಂದಿಸುವುದಿಲ್ಲ. ಅವನ ಹೃದಯಕ್ಕೆ ಘಾಸಿ ಮಾಡುವುದಿಲ್ಲ. ಈಶೋಪನಿಷತ್ತು ಹೇಳುವಂತೆ ಅವನ ಆತ್ಮವು ಅಕಾಯಂ ಅವ್ರಣಂ ಆಗಿರುತ್ತದೆ. ಎಲ್ಲ ವಸ್ತುಗಳಲ್ಲೂ, ಎಲ್ಲದರಲ್ಲೂ ಅವನಿಗೆ ಸುಖಮಕ್ಷಯ ಮಶ್ನೇತೇ, ಸುಖದ ಅನುಭವವೇ ಆಗುತ್ತದೆ.

## ದೈವೀ ಕಾರ್ಯಗಳ ಕರ್ತೃ

ದೈವೀ ಕಾರ್ಯಗಳ ಕರ್ತೃವಿನ ಲಕ್ಷಣವೇನೆಂದರೆ, ಪರಿಪೂರ್ಣವಾದ ಆಂತರಿಕ ಆನಂದ ಮತ್ತು ಶಾಂತಿ. ಇದು ದೈವೀ ಪ್ರಜ್ಞೆಯ ಕೇಂದ್ರವಾಗಿದ್ದು ಪ್ರಪಂಚದ ಯಾವ

ವಸ್ತುವನ್ನೇ ಆಗಲಿ, ಸಂಗತಿಯನ್ನೇ ಆಗಲಿ ಅವಲಂಬಿಸಿರುವದಿಲ್ಲ. ಅದರ ಮೂಲವೂ ಅಷ್ಟೇ, ಅದರ ಸ್ಥಿತಿ, ಮುಂದುವರಿಕೆಯ ಕೂಡ ಅಷ್ಟೇ, ಪೂರ್ಣತಃ ನಿರಪೇಕ್ಷವಾಗಿರುವದು. ಅದು ಸಹಜವಾಗಿರುತ್ತದೆ. ಅದು ಆತ್ಮ ಪ್ರಜ್ಞೆಯ ಮೂಲದ್ರವ್ಯವಾಗಿದ್ದು, ದೈವೀ ಪ್ರಜ್ಞೆಯ, ದೈವೀ ಪುರುಷನ ಲಕ್ಷಣವಾಗಿರುತ್ತದೆ. ಸಾಮಾನ್ಯ ಮಾನವನು ತನ್ನ ಸುಖ–ಸಂತೋಷಗಳಿಗಾಗಿ ಬಾಹ್ಯ ವಸ್ತುಗಳನ್ನು ಅವಲಂಬಿಸಿರುತ್ತಾನೆ. ಅಂತೆಯೇ ಅವನಲ್ಲಿ ಆಶೆ, ಬಯಕೆ, ಸಿಟ್ಟು–ಸೆಡವು, ಆವೇಶ, ಸುಖ, ಸಂವೇದನೆ, ನೋವು ಎಲ್ಲವೂ ಇರುತ್ತವೆ. ಅವನು ಎಲ್ಲವನ್ನೂ ಲಾಭ–ನಷ್ಟಗಳ ತಕ್ಕಡಿಯಲ್ಲಿಯೇ ಅಳೆಯುತ್ತಾನೆ. ದಿವ್ಯ ಪುರುಷನ ಆತ್ಮವನ್ನು ಇವು ಯಾವುವೂ ಬಾಧಿಸಲಾರವು. ಅದು ಸದಾ ಸಂತೃಪ್ತವಾಗಿರುವದು, 'ನಿತ್ಯ ತೃಪತೋ ನಿರಾಶ್ರಯಃ'. ಅದರ ಆನಂದ, ದೈವೀ ಸರಳತೆ, ಅದರ ಸುಖ, ಅದರ ಜ್ಞಾನ ಎಲ್ಲವೂ ಆಂತರಿಕವಾಗಿ ಶಾಶ್ವತವಾಗಿರುತ್ತವೆ. 'ಆತ್ಮರತಿಃ ಅಂತಃ ಸುಖೋಂತಾರಾರಾಮಃ। ತಥಾಂತರ್ಜ್ಯೋತಿಃ ಏಯೆ॥' (ಗೀ 24). ಅದು ಬಾಹ್ಯ ವಸ್ತುಗಳಲ್ಲಿ ಪಡೆಯುವ ಆನಂದವು ಆ ವಸ್ತುಗಳಲ್ಲಿರುವ ಆನಂದವನ್ನಲ್ಲ, ಅವಿಲ್ಲದೇ ಹೋದರೆ ಅದು ದುಃಖ ಪಡುವದೂ ಇಲ್ಲ. ಆ ವಸ್ತುಗಳಲ್ಲಿ ಅಂತರ್ಯಾಮಿಯಾಗಿರುವ ಆತ್ಮನಿಗಾಗಿ, ಅವುಗಳಲ್ಲಿ ಭಗವಂತನ ಪ್ರಕಟನೆಗಾಗಿ, ಅವುಗಳಲ್ಲಿರುವ ಶಾಶ್ವತತೆಗಾಗಿ, ಬಾಹ್ಯ ವಸ್ತುಗಳ ಸ್ಪರ್ಶದಾಚೆಗಿರುವದರಿಂದ ಅವುಗಳಿಗೆ ಸಂಗ, ಮೋಹ ಇರುವದಿಲ್ಲ; ತನ್ನಂತರಂಗದಲ್ಲಿ ಯಾವ ಆನಂದವಿದೆಯೋ ಅದೇ ಆನಂದವನ್ನೇ ಇರುವ ಎಲ್ಲ ವಸ್ತುಗಳಲ್ಲೂ ಪಡೆಯುತ್ತದೆ. ಏಕೆಂದರೆ ಅವೆಲ್ಲವುಗಳ ಆತ್ಮ ಅದೇ ಆಗಿರುತ್ತದೆ. ಅದು ಎಲ್ಲ ವಸ್ತುಗಳ ಆತ್ಮದ ಜೊತೆ ಬೆರೆತು ಒಂದಾಗಿರುತ್ತದೆ. ಎಲ್ಲದರಲ್ಲಿ, ಎಲ್ಲ ವ್ಯತ್ಯಾಸಗಳಲ್ಲಿ ವೈವಿಧ್ಯಗಳಲ್ಲಿರುವ ಬ್ರಹ್ಮನ ಜೊತೆಗೆ ಒಂದಾಗಿರುತ್ತದೆ. ಬ್ರಹ್ಮ ಯೋಗ ಯುಕ್ತಾತ್ಮಾ (5–21). ಸರ್ವಭೂತಾತ್ಮ ಭೂತಾತ್ಮಾ. ಅದು ಇಷ್ಟ ಸಂಸ್ಪರ್ಶದಿಂದ ಸುಖ ಹೊಂದುವದಿಲ್ಲ. ಅನಿಷ್ಟ ಸಂಸ್ಪರ್ಶದಿಂದ ದುಃಖ ಹೊಂದುವದಿಲ್ಲ. ವಸ್ತುಗಳ ಕ್ಷತಿ, ಮಿತ್ರರ ಗಾಯಗಳಾಗಲಿ, ವೈರಿಗಳ ಗಾಯಗಳಾಗಲಿ ಅದರ ಶಾಂತಿಯನ್ನು ಭಂಗಗೊಳಿಸುವದಿಲ್ಲ. ಅಲ್ಲಿ ಹೆದರಿಕೆ ಇಲ್ಲ. ಆಶ್ಚರ್ಯವಿಲ್ಲ. ಯಾವ ಭಾವವೂ ಇಲ್ಲ. ಉಪನಿಷತ್ತು ಹೇಳಿರುವಂತೆ ಅದು ಅವ್ರಣ(ಗಾಯರಹಿತವಾದುದು, ಅಕ್ಷತವಾದುದು)ವಾಗಿರುವದು. ಎಲ್ಲದರಲ್ಲೂ ಎಲ್ಲ ಅವಸ್ಥೆಗಳಲ್ಲೀ ಅದು ಅವಿನಾಶಿಯಾದ ಆನಂದವಾಗಿರುವದು – ಸುಖಮಕ್ಷಯಮಶ್ನುತೇ (5–21).

ಈ ಸಮತೆಯು, ನಿರ್ವ್ಯೆಯಕ್ತಿಕತೆ, ಶಾಂತಿ, ಆನಂದ, ಸ್ವಾತಂತ್ರ್ಯಗಳು ಯಾವ ಬಾಹ್ಯ ಸಂಗತಿಗಳ ಮೇಲೂ ಅವಲಂಬಿಸಿರುವದಿಲ್ಲ. ಕರ್ಮ ಮಾಡಲಿ, ಮಾಡದಿರಲಿ, ಯಾವ ಸಂಬಂಧವೂ ಇಲ್ಲ. ಗೀತೆಯು ಪದೇ ಪದೇ ಆಂತರಿಕ ಹಾಗೂ ಬಾಹ್ಯ ತ್ಯಾಗಗಳನ್ನು ಕುರಿತು ಹೇಳುತ್ತಿದೆ. ಆಂತರಂಗಿಕವಾದುದು ತ್ಯಾಗವಾಗಿದ್ದರೆ, ಬಾಹ್ಯವಾಗಿರುವುದು ಸನ್ನ್ಯಾಸವೆನಿಸುತ್ತದೆ. ಸನ್ನ್ಯಾಸವು ತ್ಯಾಗವಿಲ್ಲದೇ ಹೋದಲ್ಲಿ ಅರ್ಥವಿಲ್ಲದಂತಾಗುತ್ತದೆ, ಅಷ್ಟೇ ಏಕೆ ತ್ಯಾಗವಿಲ್ಲದೇ ಸನ್ನ್ಯಾಸವನ್ನು ಸಿದ್ಧಿಸಿಕೊಳ್ಳಲು ಸಾಧ್ಯವೇ ಇಲ್ಲ. ಆಂತರಿಕ ತ್ಯಾಗವಿದ್ದರೆ ಬಾಹ್ಯ ಸನ್ನ್ಯಾಸ ಅವಶ್ಯಕತೆಯೇ ಇರುದಿಲ್ಲ. ಹಾಗೆ ನೋಡಿದರೆ ತ್ಯಾಗವೇ ನಿಜವಾದ ಸನ್ನ್ಯಾಸವಾಗಿದೆ. "ಯಾರು ರಾಗದ್ವೇಷಗಳಿಂದ ವಿಮುಕ್ತನಾಗಿರುವುನೋ ಅವನನ್ನು ನಿತ್ಯ ಸನ್ನ್ಯಾಸಿ ಎಂದು ತಿಳಿಯಬೇಕು. ಏಕೆಂದರೆ ಅವನು ಬಂಧನದಿಂದ ಸುಲಭವಾಗಿ ಮುಕ್ತಿಯನ್ನು ಪಡೆಯುತ್ತಾನೆ." (5.3) ಬಾಹ್ಯ ಸನ್ನ್ಯಾಸವು ನಿಜವಾಗಿ ಕಷ್ಟಕರವೂ, ದುಃಖದಾಯಕವೂ ಆಗಿದ್ದು ಅನವಶ್ಯಕವಾಗಿದೆ. ಎಲ್ಲ ವಿಧ ಕರ್ಮಗಳನ್ನು, ಕರ್ಮ ಫಲವನ್ನು ತ್ಯಾಗ ಮಾಡಬೇಕೆಂಬುದು ನಿಜವೇ, ಆದರೆ ಆಂತರಿಕವಾಗಿ, ಬಾಹ್ಯತಃ ಅಲ್ಲ. ಪ್ರಕೃತಿಯ ಜಡತೆಯಲ್ಲಿ ಅಲ್ಲ, ಯಜ್ಞ ಪ್ರಭುವಿಗೆ ಅರ್ಪಣೆ, ಅವನ ನಿರ್ವ್ಯೆಯಕ್ತಿಕತೆಯ ಶಾಂತಿ ಮತ್ತು ಆನಂದದಲ್ಲಿ ತ್ಯಾಗ ಮಾಡಬೇಕು. ನಿಜವಾಗಿ ಎಲ್ಲ ಕಾರ್ಯಗಳು ಹುಟ್ಟುವುದೇ ಈ ತೆರನಾದ ಶಾಂತಿಯಲ್ಲಿ, ಶಾಂತಿ ಭಂಗವಾಗದೇ ಕ್ರಿಯಾಶೀಲತೆ ಪ್ರಕಟವಾಗುವುದು. ನಿಜವಾದ ಸನ್ನ್ಯಾಸವೆಂದರೆ ಎಲ್ಲ ಕರ್ಮಗಳನ್ನು ಬ್ರಹ್ಮನಿಗೆ ಸಮರ್ಪಿಸಿಬಿಡುವುದು. "ಬ್ರಹ್ಮಾರ್ಪಣೆ ಭಾವದಿಂದ ಅಸಂಗವಾಗಿ ಕರ್ಮ ಮಾಡುವವನು ತಾವರೆಯ ಎಲೆಯು ನೀರಿನಿಂದ ಒದ್ದೆಯಾಗದೇ ಹೇಗೆ ಇರುವುದೋ ಹಾಗೆ, ಪಾಪದ ಅಂಟಿಲ್ಲದೇ ಶುದ್ಧವಾಗಿರುವುನು". (5.10) ಆದ್ದರಿಂದ ಯೋಗಿಯು 'ಕಾಯಾ ಮನಸ ಬುದ್ಧ್ಯಾ ಸಂಗವನ್ನು ತೊರೆದು ಕೇವಲ ಚಿತ್ತಶುದ್ಧಿಗಾಗಿ ಕರ್ಮ ಮಾಡುವುರು. ಕರ್ಮ ಫಲವನ್ನು ತ್ಯಾಗ ಮಾಡುವುದರಿಂದ, ಬ್ರಹ್ಮನ ಜೊತೆ ಒಂದಾಗಿ ಬೆಸೆದ ಜೀವ(ಜೀವಾತ್ಮ) ಬ್ರಹ್ಮನಲ್ಲಿನ ಶಾಂತಿಯನ್ನೇ ಪಡೆಯುತ್ತದೆ. ಆದರೆ ಹೀಗೆ ಬ್ರಹ್ಮನ ಜೊತೆ ಒಂದಾಗಿದ ಜೀವ(ಜೀವಾತ್ಮ) ಕಾಮ್ಯ ಕರ್ಮಗಳನ್ನು ಮಾಡಿ, ಕರ್ಮ ಫಲಾಸಕ್ತನಾಗಿ, ಬಂಧನದಲ್ಲಿ ಸಿಕ್ಕಿ ಬೀಳುತ್ತಾನೆ.' (5.12). ಪರಿಶುದ್ಧತೆ, ಶಾಂತಿ ಇವುಗಳ ಅದಿಷ್ಠಾನ ಒಮ್ಮೆ ದೊರೆತರೆ ಸಾಕು ಜೀವ ತಾಳಿದ ಆತ್ಮವು ತನ್ನ ಪ್ರಕೃತಿಯನ್ನು ಸಂಪೂರ್ಣವಾಗಿ ವಶದಲ್ಲಿರಿಸಿಕೊಳ್ಳುತ್ತದೆ. ಆಂತರಿಕವಾಗಿ

ಮನಸ್ಸಿನಿಂದ ಎಲ್ಲ ಕರ್ಮಗಳನ್ನೂ ಪರಿತ್ಯಾಗ ಮಾಡುತ್ತದೆ. ಬಾಹ್ಯದಲ್ಲಿ ಕರ್ಮ ಮಾಡುತ್ತಿದ್ದರೂ, ಆಂತರಂಗಿಕವಾಗಿ ಮನಸ್ಸಿನಿಂದ ಎಲ್ಲ ಕರ್ಮಗಳನ್ನೂ ಪರಿತ್ಯಾಗ ಮಾಡುತ್ತದೆ, ಬಾಹ್ಯದಲ್ಲಿ ಕರ್ಮ ಮಾಡುತ್ತಿದ್ದರೂ ಆಂತರಂಗಿಕವಾಗಿ ಅವುಗಳ ಜೊತೆ ಯಾವ ಸಂಬಂಧವೂ ಇರುವದಿಲ್ಲ. ಅದು ನವ ದ್ವಾರಗಳ ಪುರದಲ್ಲಿ (ದೇಹದಲ್ಲಿ) ವಾಸಿಸುವ ಅದು, ಯಾವ ಕರ್ಮವನ್ನೂ ಮಾಡದೇ ಸ್ವಸ್ಥವಾಗಿರುವದು. (5.12) ಏಕೆಂದರೆ ಈ ಆತ್ಮವೇ ಎಲ್ಲದರಲ್ಲೂ ಇರುವ ಏಕೈಕ, ನಿರಾಕಾರವಾದ ಆತ್ಮವಾಗಿದೆ; ಅದಕ್ಕೆ ಯಾವ ಕರ್ಮ ಫಲ, ಕಾರ್ಯ–ಕಾರಣ ಸಂಬಂಧ ಏನೂ ಅಂಟುವದಿಲ್ಲ. ಏನೆಲ್ಲ ಕರ್ಮಗಳು ಜರುಗುವವೋ ಅವೆಲ್ಲವೂ ಸವಭಾವದಿಂದಲೇ ತಾನಾಗಿಯೇ ನಡೆದುಕೊಂಡು ಹೋಗುವವು. ಪುರುಷನ ಸಂಭೂತಿಯ ತತ್ತ್ವದ ಪ್ರಕಾರ ಬದಲಾಗುತ್ತ ಹೋಗುತ್ತವೆ. – 'ಸ್ವಭಾವಸ್ತು ಪ್ರವರ್ತತೇ – ಸರ್ವವ್ಯಾಪಿಯಾದ ನಿರಾಕಾರ ಪರಮಾತ್ಮನು ಪಾಪವನ್ನಾಗಲೀ ಪುಣ್ಯವನ್ನಾಗಲೀ ಸ್ವೀಕರಿಸುವದಿಲ್ಲ; ಜೀವಿಯು ತನ್ನ ಅಜ್ಞಾನ ವಶವರ್ತಿಯಾಗಿ ಮಾಡಿದ ಕರ್ಮಗಳು ಇವು. ಜೀವಿಯ ಅಹಂ ಮಾಡಿಸಿದ ಕರ್ಮಗಳು ಇವು. ಜೀವಿಯು ಪ್ರಕೃತಿಯ ಆಧೀನದಲ್ಲಿದ್ದು ಮಾಡಿದ ಕಾರ್ಯಗಳಾಗಿವೆ. ಒಮ್ಮೆ ಜೀವಿಯಲ್ಲಿ ಆತ್ಮಜ್ಞಾನವು ಜಾಗೃತವಾದರೆ, ಅಜ್ಞಾನದ ಕತ್ತಲೆಯ ಚಿಪ್ಪು ಒಡೆದು ಹೊರ ಬಂದರೆ, ಮುಗಿಯಿತು, ಸೂರ್ಯನ ಬೆಳಕಿನಂತೆ ಎಲ್ಲವೂ ಸ್ಪಷ್ಟವಾಗಿ ಬಿಡುವದು. ಆಗ ತನ್ನಲ್ಲಿರುವ ಆತ್ಮವು ಎಲ್ಲ ಉಪಕರಣಗಳನ್ನು ಮೀರಿದ ಉನ್ನತವಾದ ಪುರುಷನೇ ಎಂಬ ಸ್ಪಷ್ಟ ಅರಿವು ಮೂಡುವದು. ಸಂಪೂರ್ಣ ಶುದ್ಧ, ಪವಿತ್ರ, ಅನಂತ, ಅವಿಕಾರಿ, ಅವಿನಾಶಿಯಾದ ಅವನಿಗೆ ಯಾವ ಬಾಧೆಯೂ ಆಗುವದಿಲ್ಲ. ಪ್ರಕೃತಿಯ ಯವ ವಿಕೃತಿಗಳೂ ಅವನ ಮೇಲೆ ಪ್ರಭಾವ ಬೀರುವದಿಲ್ಲ. ಅವನೂ ಅಬಾಧಿತನಾಗಿ ಉಳಿದುಬಿಡುವನು. ನಿರಾಕರನಾದ ಪರಮಾತ್ಮನ ಜೊತೆ ಸಂಪೂರ್ಣವಾಗಿ ತಾದಾತ್ಮ್ಯ ಹೊಂದಿದ ಅವನು ಪುನಃ ಪುನಃ ಜನ್ಮ ತಾಳಿ ಪ್ರಕೃತಿಯ ಚಲನೆಯಲ್ಲಿ ಭಾಗವಹಿಸಬೇಕಾದ ಅಗತ್ಯ ಉಳಿಯುವದಿಲ್ಲ.

ಹಾಗೆಂದು ಈ ತರನಾದ ಮುಕ್ತಿಯು ಅವನನ್ನು ನಿಷ್ಕ್ರಿಯನನ್ನಾಗಿ ಮಾಡಿಬಿಡುವದಿಲ್ಲ. ಅವನನ್ನು ಕಾರ್ಯ ಮಾಡದಂತೆ ತಡೆಯುದಿಲ್ಲ. ಇಷ್ಟೇ ಅವನಿಗೆ ತಾನೇನೂ ಮಾಡುತ್ತಿಲ್ಲ, ಪ್ರಕೃತಿಯ ಗುಣಗಳು (ಶತ್ವ–ರಜ–ತಮಸ್ಸು) ಕಾರ್ಯ ಮಾಡುತ್ತವೆ ಎನ್ನುವ ಸ್ಪಷ್ಟ ಜ್ಞಾನ ಇರುತ್ತದೆ. ಯಾರಿಗೆ ಈ ರೀತಿ ತ್ರಿಗುಣಗಳ ಕಾರ್ಯದ, ತತ್ವದ ಅರಿವಿರುವುದೋ ಅಂಥ ವ್ಯಕ್ತಿಯು ಯೋಗ

ಯುಕ್ತವಾಗಿ (ನಿಷ್ಕ್ರಿಯ, ನಿರಾಕಾರ ಬ್ರಹ್ಮನ ಜೊತೆ ಒಂದಾಗಿ) ನಾವೇನೂ ಮಾಡುವುದಿಲ್ಲ, ಎಂದೇ ಭಾವಿಸುತ್ತಾನೆ. ಕೇಳುವಾಗ, ನೋಡುವಾಗ, ಸ್ಪರ್ಶಿಸುವಾಗ, ಆಘ್ರಾಣಿಸುವಾಗ, ತಿನ್ನುವಾಗ, ಉಣ್ಣುವಾಗ, ನಡೆಯುವಾಗ, ನಿದ್ರಿಸುವಾಗ, ಉಸಿರಾಡಿಸುವಾಗ, ಮಾತನಾಡುವಾಗ, ವಿಸರ್ಜನೆ ಮಾಡುವಾಗ, ವಿಷಯಗಳನ್ನು ಗ್ರಹಿಸುವಾಗ, ಕಣ್ಣುಗಳನ್ನು ಮುಚ್ಚುವಾಗ, ತೆರೆಯುವಾಗ, ಎಲ್ಲ ಸಮಯದಲ್ಲೂ ಕೇವಲ ಇಂದ್ರಿಯಗಳು ಇಂದ್ರಿಯಾರ್ಥದಲ್ಲಿ ವಿಷಯಗಳಲ್ಲಿ ವ್ಯವಹರಿಸುತ್ತವೆ. ತಾನು ಮಾತ್ರ ಸ್ವಯಂ ಏನೂ ಮಾಡುವುದಿಲ್ಲ ಎಂದೇ ತಿಳಿದಿರುತ್ತಾನೆ (5.8 ಮತ್ತು 9). ಅವನು ಮಾತ್ರ ನಿರ್ವಿಕಾರನಾದ ಆತ್ಮಭಾವದಲ್ಲಿ ಸ್ಥಿರವಾಗಿರುತ್ತಾನೆ. ಅವನು ತ್ರಿಗುಣಗಳಿಂದ ದೂರವಾಗಿರುತ್ತಾನೆ. ತ್ರಿಗುಣಾತೀತನಾಗಿರುತ್ತಾನೆ. ಅವನು ಸಾತ್ವಿಕನೂ ಅಲ್ಲ, ರಾಜಸಿಕನೂ ಅಲ್ಲ, ತಾಮಸಿಕನೂ ಅಲ್ಲ. ತನ್ನ ಎಲ್ಲ ಕಾರ್ಯಗಳಲ್ಲಿ ಪ್ರಕೃತಿಯ ಗುಣಗಳೇ ಪ್ರವೃತ್ತವಾಗಿರುತ್ತವೆ. ಅವುಗಳ ಲಯಬದ್ಧ ಆಟವೇ ಸುಖದುಃಖಗಳನ್ನುಂಟು ಮಾಡುತ್ತದೆ. ಅವುಗಳ ಕ್ರಿಯೆ, ನಿಷ್ಕ್ರಿಯತೆ, ಚಲನೆ, ಸ್ಥಿರತೆ, ಇವೇ ಪ್ರದರ್ಶಿತವಾಗುತ್ತವೆಯೇ ಹೊರತು ತನಗೂ ಅವುಗಳಿಗೂ ಯಾವ ಸಂಬಂಧವೂ ಇಲ್ಲ ಎಂದು ತಿಳಿದಿರುತ್ತಾನೆ. ಈ ರೀತಿ ತ್ರಿಗುಣಾತೀತವಾಗಿ, ಪ್ರಕೃತಿಯ ಯಾವ ಚಟುವಟಿಕಯಲ್ಲೂ ಭಾಗವಹಿಸದೇ, ಪ್ರಕೃತಿಯ ಕಾರ್ಯಗಳನ್ನು ಸಾಕ್ಷೀಭಾವದಿಂದ ನೋಡುತ್ತಿರುವುದು ನಿಜವಾಗಿ ದೈವೀ ಕಾರ್ಯಕರ್ತೃವಿನ ಉನ್ನತ ಲಕ್ಷಣವಾಗಿದೆ. ಈ ರೀತಿ ಹೇಳುವುದರಿಂದ ಎಲ್ಲವೂ ಪ್ರಕೃತಿಯ ಯಾಂತ್ರಿಕ ಚಲನೆಯಿಂದ ನಿರ್ಧಾರಿತವಾಗುತ್ತದೆ. ಆತ್ಮಕ್ಕೂ ಇವುಗಳಿಗೂ ಯಾವ ಹೊಣೆಗಾರಿಕೆಯೂ ಇಲ್ಲ ಎಂಬ ತಪ್ಪು ತತ್ವಾವಬೋಧವಾಗುವ ಸಂಭವ ಇರುತ್ತದೆ. ಆದರೆ ಗೀತೆಯು ಈ ಅಪೂರ್ಣ ವಿಚಾರಧಾರೆಯನ್ನು ತನ್ನ ಪುರುಷೋತ್ತಮನ ಪರಿಕಲ್ಪನೆಯ ಬೆಳಕಿನಲ್ಲಿ ಹೊಡೆದು ಹಾಕುತ್ತದೆ. ಅದು ಕೊನೆಗೆ ಸ್ಪಷ್ಟಪಡಿಸುವುದೇನೆಂದರೆ, ಪ್ರಕೃತಿಯೇ ಎಲ್ಲ ಕಾರ್ಯಗಳನ್ನು ಯಾಂತ್ರಿಕವಾಗಿ ತಾನೇ ನಿರ್ಧರಿಸುತ್ತದೆ ಮತ್ತು ಮಾಡುತ್ತದೆ ಎಂಬ ಅವಧಾನ ತಪ್ಪು, ಅದು ಹಾಗೆ ಮಾಡುವುದಿಲ್ಲ. ಪುರುಷೋತ್ತಮನ ಸಂಕಲ್ಪವೇ ಪ್ರಕೃತಿಯನ್ನು ಪ್ರಭಾವಿಸುತ್ತದೆ ಎಂದು ಸಾರುತ್ತದೆ.

ಪುರುಷೋತ್ತಮನಾದ ಕೃಷ್ಣನೇ ಎಲ್ಲ ಧಾರ್ತರಾಷ್ಟ್ರರನ್ನು ವಧಿಸಿದ್ದಾನೆ, ಆರ್ಜುನನು ಕೇವಲ ಉಪಕರಣ ಮಾತ್ರವಾಗಿ ಕೆಲಸ ಮಾಡಲು ಆದೇಶಿಸುತ್ತಾನೆ. ವಿಶ್ವಾತ್ಮಕನಾದ ಈಶ್ವರನೇ ಪ್ರಕೃತಿಯ ಸಕಲ ಕಾರ್ಯಗಳ ಒಡೆಯನಾಗಿದ್ದಾನೆ. ಎಲ್ಲ

ಕರ್ಮಗಳನ್ನು ಈಶ್ವರನಲ್ಲಿ ನೆಲೆಗೊಳಿಸುವುದೆಂದರೆ ವೈಯಕ್ತಿಕ ಕರ್ತೃತ್ವದ ಅಹಂಭಾವವನ್ನು ತೊಡೆದು ಹಾಕುವುದು ಎಂದರ್ಥ. ಎಲ್ಲ ಕರ್ಮಗಳನ್ನು ಸರ್ವ ಲೋಕ ಮಹೇಶ್ವರನಾದ ಈಶ್ವರನಿಗೆ ಸಮರ್ಪಿಸುವುದೇ ಆತ್ಯಂತಿಕ ಕರ್ತವ್ಯವಾಗಿದೆ. "ಆತ್ಮಭಾವದೊಂದಿಗೆ ಪೂರ್ಣ ತಾದಾತ್ಮ್ಯ ಹೊಂದಿ, ನನ್ನಲ್ಲಿಯೇ ಎಲ್ಲ ಕರ್ಮಗಳನ್ನು ಸಮರ್ಪಿಸಿ, ಮಯಿ ಸರ್ವಾಣಿ ಕರ್ಮಾಣಿ ಸನ್ಯಸಾಧ್ಯಾತ್ಮ ಚೇತನಾ, ವೈಯಕ್ತಿಕ ಆಶೆಗಳನ್ನು ಪೂರ್ಣತಃ ತ್ಯಾಗ ಮಾಡಿ, ನಾನು–ನನ್ನದು ಎಂಬ ವಿಚಾರವನ್ನೇ ತೊರೆದು, ಯುದ್ಧ ಮಾಡು" ಎಂದು ಕೃಷ್ಣನು ಅರ್ಜುನನಿಗೆ ಆದೇಶ ನೀಡುತ್ತಾನೆ. ನೀನು ಕರ್ಮ ಮಾಡು, ನನ್ನ ಸಂಕಲ್ಪವನ್ನು ಪ್ರಪಂಚದಲ್ಲಿ ನೆರವೇರಿಸಲು ಕರ್ಮ ಮಾಡು. ಪರಮಾತ್ಮನೇ ಎಲ್ಲ ಕರ್ಮಗಳನ್ನು ಮಾಡಲು ಪ್ರಚೋದನೆ ನೀಡುತ್ತಾನೆ, ಪ್ರೇರಿಸುತ್ತಾನೆ, ಇಡೀ ಕರ್ಮವನ್ನು ಅವನೇ ನಿರ್ಧರಿಸುತ್ತಾನೆ. ಮಾನವನ ಆತ್ಮವೆಂಬುದು ಬ್ರಹ್ಮನಲ್ಲಿ ನಿರಾಕಾರವೇ ಆಗಿದೆ. ಅಲ್ಲಿ ಭೇದವಿಲ್ಲ, ಪ್ರತ್ಯೇಕತೆ ಇಲ್ಲ; ಅದು ಬ್ರಹ್ಮನ ಮೌನ ಮಾಧ್ಯಮವಾಗಿದೆ. ಪ್ರಕೃತಿಯ ಶಕ್ತಿಯೇ ದೈವೀ ಚಲನೆಯನ್ನು ಸಂಪನ್ನಗೊಳಿಸುತ್ತದೆ. ಮುಕ್ತಾತ್ಮನ ಕರ್ಮ ಹೀಗಿರುತ್ತವೆ, ಅವನು ಯಾವ ಕರ್ಮವನ್ನು ವೈಯಕ್ತಿಕ ಇಚ್ಛೆಯಿಂದ, ಬಯಕೆಯಿಂದ ಮಾಡುವುದಿಲ್ಲ. ಕರ್ಮಯೋಗಿಯ ಕರ್ಮಗಳು ಹೀಗೆ ಬ್ರಹ್ಮಾರ್ಪಿತವಾಗಿರುತ್ತವೆ. ಅವು ಮುಕ್ತ ಆತ್ಮದಿಂದ ಇದ್ದು, ಯಾವ ವಿಕಾರವನ್ನೂ ಉಂಟು ಮಾಡದೇ ಮಾಯವಾಗುತ್ತವೆ. ಸಮುದ್ರದ ಮೇಲಿನ ತೆರೆಗಳು ಹೀಗೆ ಬಂದು ಹಾಗೆ ಹೋಗುವಂತೆ ಯಾವ ಘಟನೆಗಳೂ ಪ್ರಜ್ಞಾ ಸಾಗರದ ಮೇಲೆ ಯಾವ ಪ್ರಭಾವವನ್ನೂ, ಪರಿಣಾಮವನ್ನೂ ಬೀರದೇ ಇಳಿದು ಹೋಗಿಬಿಡುತ್ತವೆ. ಗತಸಂಗಸ್ಯ ಮುಕ್ತಸ್ಯ ಜ್ಞಾನಾವಸ್ಥಿತ ಚೇತಸಃ। ಯಜ್ಞಾಯಾಚರತಃ ಕರ್ಮ ಸಮಗ್ರಂ ಪ್ರವಿಲೀಯತೇ ॥ (4.23)

(ಸಶೇಷ)

## ಶ್ರೀ ಅರವಿಂದರ
# ‘ಪ್ರೇಮ ಮತ್ತು ಮೃತ್ಯು’

**– ಅನು: ಸಮಷ್ಠಿ**

ಶ್ರೀ ಅರವಿಂದರ ‘ಪ್ರೇಮ ಮತ್ತು ಮೃತ್ಯು’ವನ್ನು ಒಂದು ಖಂಡಕಾವ್ಯ ಅಥವಾ ಒಂದು ನೀಳ್ಗವನ ಎನ್ನಬಹುದು. ಮಹಾಭಾರತದ ಆದಿಪರ್ವದಲ್ಲಿ ಬರುವ ರುರು ಮತ್ತು ಪ್ರಮದ್ವರೆಯರ ಪ್ರೇಮಕಥೆಯು ಎಲ್ಲರಿಗೂ ತಿಳಿದಿದೆ. ಆದರೆ ಇಲ್ಲಿ ಅವೇ ಪಾತ್ರಗಳು ಪೌರಾಣಿಕರ ದೃಷ್ಟಿಕೋನದಿಂದ ಹೊರಬಂದು ಶ್ರೀ ಅರವಿಂದರ ದರ್ಶನದಲ್ಲಿ ತಮ್ಮ ವ್ಯಕ್ತಿತ್ವವನ್ನು ಸ್ವಯಂಪೂರ್ಣಗೊಳಿಸಿಕೊಳ್ಳುತ್ತವೆ.

ಭೃಗು ಋಷಿಯ ಮಗ ಚ್ಯವನನು ಸುಕನ್ಯೆಯನ್ನು ವರಿಸುತ್ತಾನೆ. ಇವರಿಬ್ಬರಿಗೆ ಜನಿಸಿದ ಪ್ರಮತಿಯು ಘೃತಾಚಿ ಎಂಬ ಅಪ್ಸರೆಯನ್ನು ವಿವಾಹವಾಗುತ್ತಾನೆ. ಇವರಿಬ್ಬರ ಮಗನೇ ರುರು; ಇನ್ನೊಂದೆಡೆ ಗಂಧರ್ವರಾಜ ವಿಶ್ವಾವಸು ಮತ್ತು ಅಪ್ಸರೆಯಾದ ಮೇನಕೆಯರಿಗೆ ಪ್ರಮದ್ವರೆ ಎಂಬ ಕನ್ಯೆಯು ಜನಿಸಿರಲು, ಮೇನಕೆ ಆ ಮಗುವನ್ನು ಸ್ಥೂಲಕೇಶ ಎಂಬ ಋಷಿವರ ಆಶ್ರಮದಲ್ಲಿ ಬಿಟ್ಟು ತಾನು ಸ್ವರ್ಗಕ್ಕೇರುತ್ತಾಳೆ. ಮುಂದೆ ರುರು–ಪ್ರಮದ್ವರೆಯರಿಬ್ಬರೂ ಯೌವನಕ್ಕೆ ಬಂದಾಗ ಒಬ್ಬರನ್ನೊಬ್ಬರು ಕಂಡು ಮೆಚ್ಚಿರಲು, ಈ ವಿಷಯವನ್ನು ತಿಳಿದ ರುರುವಿನ ತಂದೆ ಪ್ರಮತಿಯು ಪ್ರಮದ್ವರೆಯ ಸಾಕುತಂದೆ ಸ್ಥೂಲಕೇಶರಲ್ಲಿ ಬಂದು ಕನ್ಯಾದಾನಕ್ಕಾಗಿ ಕೋರುತ್ತಾರೆ. ಅದಕ್ಕೊಪ್ಪಿ ಇಬ್ಬರ ಮದುವೆಯು ನಿಶ್ಚಯವಾಗಿರಲು ಒಂದು ದಿನ ಗೆಳತಿಯರೊಂದಿಗೆ ಆಟವಾಡುತ್ತಿದ್ದ ಪ್ರಮದ್ವರೆಯು ಕಾಣದೆ ಹಾವನ್ನು ತುಳಿಯುತ್ತಾಳೆ. ರೋಷಗೊಂಡ ಹಾವು ಕಚ್ಚಲು ಆ ಕ್ಷಣವೇ ಪ್ರಮದ್ವರೆಯ ಸಾವಾಗುತ್ತದೆ. ಇದರಿಂದ ಹುಚ್ಚನಂತಾದ ರುರುವು ಕಾಡೆಲ್ಲ ಅಲೆಯುತ್ತ ತಿರುಗುತ್ತಾನೆ. ಕೊನೆಗೆ ಯಮ ಲೋಕವನ್ನು ಹೊಕ್ಕು ಅವನಿಂದ ಪ್ರಮದ್ವರೆಯ ಆತ್ಮವನ್ನು ಮರಳಿ ಪಡೆಯುತ್ತಾನೆ.

ಈ ಪುರಾಣ ಕಥೆಯ ಅರಿವಿದ್ದ ಶ್ರೀ ಅರವಿಂದರು ಗ್ರೀಕ್ ಮಿಥಕ್‌ಗಳಲ್ಲಿಯೂ ಇದೇ ತೆರನಾದ ಇನ್ನೊಂದು ಕಥೆಯಿರುವದನ್ನು ಕಂಡುಕೊಳ್ಳುತ್ತಾರೆ. ಅದುವೇ **‘ಆರ್ಫಿಯಸ್ ಮತ್ತು ಯೂರಿಡೈಸ್‌ಳ ಕಥೆ’**. ಅದರಲ್ಲಿ ಕ್ಯಾಲಿಯೊಪಿ ಕಲಾಭಿಮಾನಿ ದೇವತೆಯ ಸೌಂದರ್ಯಕ್ಕೆ ಮರುಳಾದ ಸಂಗೀತದ ಅಧಿದೇವನಾದ ಅಪಾಲೋನು ಅವಳೊಡನೆ ಕೂಡಿರಲು ಆರ್ಫಿಯಸ್‌ನ ಜನನವಾಗುತ್ತದೆ. ಬಾಲ್ಯದಿಂದಲೇ

ಸಂಗೀತದಲ್ಲಿ ಅಪಾರ ಶ್ರದ್ಧೆಯಿದ್ದ ಆರ್ಫಿಯಸ್‌ನಿಗೆ ಅವನ ತಂದೆ ಅಪಾಲೋನು ಲೈರ್ ವಾದ್ಯವೊಂದನ್ನು ಕೊಡುಗೆಯಾಗಿ ನೀಡಿರುತ್ತಾನೆ. ತಾಯಿ ಕ್ಯಾಲಿಯೋಪಿಯು ಅದನ್ನು ನುಡಿಸುವ ಬಗೆಯನ್ನು ತಿಳಿಸಿಕೊಟ್ಟಿರುತ್ತಾಳೆ. ಹೀಗೆ ಲೈರ್ ವಾದ್ಯಕನಾದ ಆರ್ಫಿಯಸ್‌ನು ಪ್ರಸಿದ್ಧ ವಾದ್ಯಗಾರನಾಗುತ್ತಾನೆ. ಅವನ ಸಂಗೀತಕ್ಕೆ ಮರುಳಾಗಿ ಕ್ರೂರಮೃಗಗಳೂ ಸಹ ಕೆಡುಕನ್ನು ತೊರೆದು ಅವನ ಸುತ್ತ ಸಹಬಾಳ್ವೆ ನಡೆಸುತ್ತಿರುತ್ತವೆ. ಹೀಗಿರಲೊಮ್ಮೆ ಅಪ್ಸರೆಯಾದ ಯುರಿಡೈಸ್‌ಳನ್ನು ಕಂಡು ಮೆಚ್ಚಿದ ಆರ್ಫಿಯಸ್‌ನು ತನ್ನ ಸಂಗೀತದಿಂದ ಅವಳನ್ನು ಮೆಚ್ಚಿಸಿ ಮದುವೆಯಾಗುತ್ತಾನೆ. ಮುಂದೊಮ್ಮೆ ಅರಿಸ್ಟಿಯಸ್ ಎಂಬ ದೇವಪುತ್ರನು ಯುರಿಡೈಸ್‌ಳನ್ನು ಕಂಡು ಮೋಹಗೊಂಡು ಅವಳನ್ನು ಹಿಡಿಯಲೆಂದು ಅಟ್ಟಿಸಿಕೊಂಡು ಬರುತ್ತಿರಲು ಹೆದರಿ ಓಟಕಿತ್ತ ಅವಳು ಕಾಣದೆ ಹಾವೊಂದರ ಮೇಲೆ ಕಾಲಿಟ್ಟು, ಅದರ ವಿಷದಿಂದ ಸಾವನ್ನಪ್ಪುತ್ತಾಳೆ. ಇದರಿಂದ ಹುಚ್ಚನಂತಾದ ಆರ್ಫಿಯಸ್‌ನು ತನ್ನ ಪತ್ನಿಯನ್ನು ಮರಳಿ ಪಡೆದುಕೊಳ್ಳಲೇಬೇಕೆಂದು ಮೃತ್ಯುಲೋಕದ ಒಡೆಯ ಹೇಡಿಸ್‌ನಲ್ಲಿಗೆ ತೆರಳಿ ತನ್ನ ಸಂಗೀತದಿಂದ ಅವನನ್ನು ಮೆಚ್ಚಿಸಿ ಯುರಿಡೈಸ್‌ಳ ಆತ್ಮವನ್ನು ಪಡೆದು ಮೇಲೆ ಬರುತ್ತಾನೆ.

ಆದರೆ ಆರ್ಫಿಯಸ್‌ನು ಯುರಿಡೈಸ್‌ಳ ಆತ್ಮವನ್ನು ಭೂಮಿಗೆ ತರುವ ಅಂತಿಮ ಹಂತದಲ್ಲಿ ಎಡವಿ ಅವಳನ್ನು ಶಾಶ್ವತವಾಗಿ ಕಳೆದುಕೊಳ್ಳುತ್ತಾನೆ. ಆದರೆ ಭಾರತೀಯ ದರ್ಶನದ ರುರು ಮಾತ್ರ ತನ್ನ ಆಯುಷ್ಯದ ಅರ್ಧ ಭಾಗವನ್ನು ಪ್ರಮದ್ವರೆಗೆ ಕೊಟ್ಟು ಮರ್ತ್ಯಕ್ಕೆ ಕರೆತರುತ್ತಾನೆ. ಇಲ್ಲಿ ಶ್ರೀ ಅರವಿಂದರು ಗ್ರೀಕ್ ಕಾಣ್ಕೆಗಿಂತಲೂ ಭಾರತೀಯ ದರ್ಶನವೇ ಅತ್ಯುತ್ತಮವೆಂದು ಮನಗಾಣುತ್ತಾರೆ. ಹಾಗಾಗಿ ಈ ವಿಷಯದ ಮೇಲೆಯೆ ಅವರು ಕವನವೊಂದನ್ನು ರಚಿಸಲೆಂದು ನೋಂತರು. ಅವರು ಸುಮಾರು ಏಳೆಂಟು ವರ್ಷ ಬಡೋದೆಯಲ್ಲಿದ್ದರು. ಆಗಲೇ 1899 ರಲ್ಲಿ ಈ ಕವನವನ್ನು ಸರಳ ರಗಳೆಯಲ್ಲಿ ಬರೆದು ಮುಗಿಸಿದರು. ಪ್ರಮದ್ವರೆ ನಾಮಕ್ಕೆ ಬದಲಾಗಿ ಪ್ರಿಯಂವದೆಯೆಂದು ಕರೆದರು. ಶ್ರೀ ಅರವಿಂದರ ದರ್ಶನದಲ್ಲಿ ರುರುವು ಶೋಧ ಮಾರ್ಗದಲಿ ಮೊದಲು ಕಾಮನನ್ನು ಕಾಣುತ್ತಾನೆ. ಮತ್ತು ತನ್ನ ಈ ಆಕ್ರಂದನಕ್ಕೆ, ಪತ್ನಿಯನ್ನು ಮರಳಿ ಪಡೆವ ಧಾವಂತಕ್ಕೆ ಕಾಮವಲ್ಲದೇ ಪ್ರೇಮವೇ ಮೂಲಕಾರಣವೆಂದು ಮನದಟ್ಟು ಮಾಡಿಕೊಡುತ್ತಾನೆ. ಕೊನೆಗೆ ಯಮನನ್ನು ಕಂಡು ಅವಳನ್ನು ಜೀವಂತವಾಗಿಯೇ ಕರೆದುಕೊಂಡು ಭೂಲೋಕಕ್ಕೆ ಬರುತ್ತಾನೆ. ಪ್ರಿಯಂವದೆಯನ್ನು ಕಳೆದುಕೊಂಡು ಕಾಡಿನಲ್ಲಿ ಅಲೆಯುತ್ತಿದ್ದಾಗ ಅಶ್ವತ್ಥ

ವೃಕ್ಷವೊಂದನ್ನು ಕಂಡು ತನ್ನ ಸತಿಗಾಗಿ ಆಕ್ರಂದಿಸುತ್ತಾನೆ. ಅವನ ದುಃಖಕ್ಕೆ ವೃಕ್ಷವೂ ಮರುಗುತ್ತದೆ. ಆ ಹಂತದಲ್ಲಿ ಶ್ರೀ ಅರವಿಂದರು ತೋರಿದ ನುಡಿಗಡಣವು ಅಮೋಘವಾದದ್ದು.

ಈ ನೀಳ್ಗವನವನ್ನು ಅನುಸ್ಪಂದಿಸಲು ಕೈಲಾದ ಮಟ್ಟಿಗೆ ಪ್ರಯತ್ನಿಸಲಾಗಿದೆ. ಮೂಲಕ ವನದಲ್ಲಿ ಶ್ರೀ ಅರವಿಂದರು ಸೂಚಿಸಿದ ಸಂಕೇತ ಮತ್ತು ಪ್ರತಿಮೆಗಳ ರೂಪಕವನ್ನು ಕನ್ನಡದಲ್ಲಿ ಯಥಾನುಚಿತವಾಗಿ ಬಳಸಿಕೊಳ್ಳಲಾಗಿದೆ. ಮತ್ತು ಮೂಲವನ್ನು ಕನ್ನಡಕ್ಕೆ ಅವತರಿಸುವ ಹಂತದಲ್ಲಿ, ಕಾವ್ಯಕ್ಕೆ ಮೀಸಲಾಗಿರುವ ಛಂದಸ್ಸಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡದೆ ಕಾವ್ಯದ ಭಾವನೆಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಲಾಗಿದೆ. ಆಂಗ್ಲ ಭಾಷೆಯಿಂದ ಈ ರೀತಿಯಾಗಿ ಕನ್ನಡೀಕರಣಗೊಳಿಸುವಾಗ ಕನ್ನಡದ ಜಾಯಮಾನಕ್ಕೆ ತಕ್ಕಂತೆ ಅನುಸ್ಪಂದಿಸಲಾಗಿದೆಯಾದರೂ, ಕಾವ್ಯದ ಭಾವ ಮತ್ತು ಓಘವು ಮೂಲ ಕವನವನ್ನೇ ಪ್ರತಿನಿಧಿಸುವಂತೆ ಪ್ರಯತ್ನಿಸಲಾಗಿದೆ.

ಕಾವ್ಯದಲ್ಲಿ ಸೂಚಿಸಲಾದ ಸಂಕೇತಗಳ ಮತ್ತು ಪ್ರತಿಮಾ ಸೂಚಕಗಳ ಅರ್ಥವನ್ನು ಅಲ್ಲಲ್ಲೇ ನೀಡುತ್ತ ಮೂಲದ ಅರ್ಥವನ್ನು ಕನ್ನಡದಲ್ಲಿ ತಿಳಿಸಲು ಪ್ರಯತ್ನಿಸಲಾಗಿದೆ. ಶ್ರೀ ಅರವಿಂದರೇ ಹೇಳುವಂತೆ ಪ್ರೇಮ ಮತ್ತು ಮೃತ್ಯು, ಭಾಜಿಪ್ರಭು, ಊರ್ವಶಿ, ಚಿತ್ರಾಂಗದಾ, ಉಲೂಪಿ, ಋಷಿ, ಮುಖ್ಯವಾಗಿ ಅಹಾನಾ ಇವೆಲ್ಲವೂ ಅವರ ಮಹಾಕಾವ್ಯಕ್ಕಿರುವ ಕಿರುತೊರೆಗಳು. ಇವೆಲ್ಲವುಗಳನ್ನು ಕೂಡಿದ ಮಹಾಸಾಗರವೇ ಅವರ 'ಸಾವಿತ್ರಿ'. ಇವೆಲ್ಲವುಗಳಲ್ಲಿ 'ಪ್ರೇಮ ಮತ್ತು ಮೃತ್ಯು' ಹಾಗೂ ಸಾವಿತ್ರಿಯಲ್ಲಿ ಕಾಣಬರುವ ಏಕರೂಪವೆಂದರೆ. ಅಲ್ಲಿ ಪತಿಗಾಗಿ ಸತಿಯು ಊರ್ಧ್ವ ಲೋಕದೆಡೆಗೇರಿದರೆ, ಇಲ್ಲಿ ಸತಿಗಾಗಿ ಪತಿಯು ಪಾತಾಳದೆಡೆ ಇಳಿಯುತ್ತಾನೆ. ಪ್ರೇಮ ಮತ್ತು ಮೃತ್ಯು ಬರೆದಾದ ನಂತರ ಶ್ರೀ ಅರವಿಂದರಲ್ಲಿ ದರ್ಶನಾ ಸಾಮರ್ಥ್ಯಗಳು ಹೆಚ್ಚಿದಂತೆ ಅವರಿಗೆ ಮರ್ತ್ಯಕ್ಕೂ ಮೇಲಿರುವ ಸಪ್ತ ಪಾತಳಿಗಳ ಕಾಣ್ಕೆ ಆರಂಭವಾಯಿತು. ಅನ್ನಮಯದಿಂದ ಆರಂಭವಾದ ಅವರ ದರ್ಶನವು ಆನಂದಮಯವನ್ನು ಮುಟ್ಟಿತ್ತು. ಆದರೆ ಅದರಲ್ಲಿ ಸುಪ್ರಮಾನಸದ ಬೆಳಕನ್ನು ಮಾತ್ರ ಭುವಿಗೆ ತರಲು ಸಾಧ್ಯವಾಯಿತು. ಅದರ ಅವರೋಹಣಕ್ಕೆ ಧಾರಕ ಶಕ್ತಿಯಾಗಿ ಅವರ ಚೈತನ್ಯವೇ ಮಹಾಸಮಾಧಿಯಲಿ ಚಿರಂತನವಾಯಿತು. ಆ ಸಪ್ತ ಸ್ತರಗಳ ಸಮಗ್ರ ದರ್ಶನವೇ 'ಸಾವಿತ್ರಿ'. ಆದರೆ ಬಡೋದೆಯಲ್ಲಿದ್ದಾಗ ಅವರ ಕಾಣ್ಕೆಯಿನ್ನೂ ವಿಸ್ತರಿಸಿರಲಿಲ್ಲ. ಹಾಗಾಗಿ ಈ ಕವನದಲ್ಲಿ ಅದರ ಪರಿಜುಗಳು ಅಲ್ಲಲ್ಲಿ ಬಂದುಹೋದರೂ ಕಾವ್ಯದುದ್ದಕ್ಕೂ ಹಾಸುಹೊಕ್ಕಾಗಿಲ್ಲ. ಅಲ್ಲದೇ ಗ್ರೀಕ್ ನೆಲೆಯ

ಸಾರವನ್ನೂ ಇದರಲ್ಲಿ ಭಟ್ಟಿ ಇಳಿಸಿರುವದರಿಂದ ಇದೊಂದು ಸಮ್ಮಿಶ್ರ ಕವನವಾಗಿ ಮೈದಳೆದಿದೆ. ಅದು ಶ್ರೀ ಅರವಿಂದರ ವಾದವೂ ಹೌದು. ಅವರ ಪ್ರಕಾರ ಆ ಹಂತಕ್ಕೆ ಅದು ಪ್ರದೀಪ್ತಮಾನವೇ ಆಗಿತ್ತು. ಇದನ್ನು ಕನ್ನಡಕ್ಕೆ ಅನುಸ್ಪಂದಿಸಲು ಪ್ರಯತ್ನಿಸಿಲಾಗಿದೆ. ಪದ–ಪಟ್ಟಕದ ಷಟ್ಕೋನದಲಿ ಸೆರೆಹಿಡಿಯದೇ, ಸ್ವಚ್ಛಂದವಾಗಿ ಹರಿವ ಭಾವಾತಿರೇಕವನ್ನು ಭವಿಸಿ ಈ ಕವನವನ್ನು ಅನುಭವಿಸಿ.

ಪ್ರಸ್ತುತ ಕವನದಲ್ಲಿ ಶ್ರೀ ಅರವಿಂದರು ಕವನವನ್ನು ಬಿಡಿಬಿಡಿಯಾದ ಅಧ್ಯಾಯಗಳಾಗಿ ಹೆಸರಿಸಿ ಪ್ರತ್ಯೇಕಿಸದಿದ್ದರೂ, ಅವರೇ ಒಂದೊಂದು ದೃಶ್ಯವನ್ನು ಇನ್ನೊಂದು ದೃಶ್ಯದಿಂದ ಬೇರೆ ಬೇರೆಯಾಗಿ ಪ್ರತ್ಯೇಕಿಸಿದ್ದಾರೆ. ಆದರೆ ಇಲ್ಲಿ ಆ ಪ್ರತ್ಯೇಕ ಭಾಗಗಳಿಗೆ 'ದೃಷ್ಟಿ' ಎಂಬ ಹೆಸರಿನಿಂದ ಸೂಚಿಸಲು ಪ್ರಯತ್ನಿಸಲಾಗಿದೆ.

## ದೃಷ್ಟಿ 1

ಲಕ್ಷನಕ್ಷತ್ರ ಖಚಿತವಕ್ಷಾಂತರಿಕ್ಷದಾ ಕಾಡುಮೇಡಿನಡಿಯ
ನಿತ್ಯಬನಶಂಕರಿಯ ಮನಬೃಂದಾವನದಿ ಸುಳಿದನು ರುರು.
ಶ್ವೇತಾವರೆ ಮುದ್ದುಮೊಗದಾವರೆರತ್ನಾಧರೆಯಿಹ
ಅರಿಷಿಣನೀರ ಹಸಿಮೈಯ ಋತಾವರೆ ಪ್ರಿಯಂವದೆಯೊಡನಾಗಿ.
ಮೊಗ್ಗೆಯಾಗಿಹ ಪ್ರೇಮವಿನ್ನೂ ಪಲ್ಲವಿಸದ ಪಕಳೆಯೊಳಗೆ
ಬೆಚ್ಚಗಾಗುತ ಆತುಕೂತು ಕವಿತು ಅವಿತಿರುವ ಯುಗದಲ್ಲಿ,
ಅರುಣನ ಸಪ್ತಾಶ್ವಸೂರ್ಯರಥವೇರಿ ಉಷೆಯನು ಬೆಂಬತ್ತಿ
ಅಂಧಕಾರವ ಸುರುಳೆ ಸುತ್ತುತ ಬರುವ ಸವಿತೃಸಮಯದಲ್ಲಿ,
ರುರುವಿಗೆ ರಕ್ತರುಧಿರವಿಹ ಹೃತ್ಕಮಲವ ತೆರೆದು ತೋರಿದಳು ವಧು.
ಕಮಲದ ವಿಮಲದಲಿ ಭ್ರಮಿಸಿ ನರ್ತಿಸಿ ನಾಟ್ಯವಾಡುತಿಹ
ರುರುವಿನ ರೋಮಾಂಚನಭರಿತದಾತ್ಮದಲೆಗಳಿಂದಾದ
ಪ್ರೇಮಾಂಧದಲಿ ಬಂಧಿತಳಾಗುತ ನಲಿದಳು ಪ್ರಿಯಂವದಾ.
ತಾ ಪಡೆದ ಪ್ರೇಮಪುಷ್ಪಕೆ ಪೃಥ್ವಿಮಂಡಲವೇ ಪಾತಿಕುಂಡಲವಾಯಿತವನಿಗೆ,
ಅವನದೊಂದು ಅಪ್ಪುಗೆಯ ಬಂಧದಲಿ ಜಗದ ಅಂದಗಳೆಲ್ಲ ಮಂದವಾಗಿತ್ತವಳಿಗೆ;
ಶತಸಹಸ್ರಮಾನಗಳಿಂದ ಸುಡುತಿಹ ಚಂಡಭಾಸ್ಕರನ ಕೆಂಡಕಿರಣಗಳ
ಅನಲವನಾರಿಸಿ ಧರಾಗ್ನಿಯನೇ ತಣಿಸಿತ್ತದು ವರ್ಷಾಕಾಲದ ಪರ್ಜನ್ಯಧಾರೆ,
ಭೂದೇವಿಯ ಬತ್ತಲಾದ ದೇಹಕೆ ಹಸಿರುಸೀರೆಯನುಡಿಸಿ,

ಮುಕುಟದಮುಡಿಗೆ ಕೆಂಗುಲಾಬಿ ಹೊಂಗುಲಾಬಿಗಳಮುಡಿಸಿ,
ಇಳೆಯ ಇಳಿಬಿದ್ದ ಸ್ತನವನು ತುಂಬುಮೊಲೆಯ ಮಲೆಯನ್ನಾಗಿಸಿ,
ಮಧುಕ್ಷೀರಮಯದ ಹೊಳೆಯನು ಹರಿಸಿ, ಜಲಪಾತವನೇ ಧುಮ್ಮಿಕ್ಕಿಸಿತ್ತು;
ಮಹೀವತಿಯಿವಳು ತೋಳನ್ನೆ ತೊಟ್ಟಿಲನ್ನಾಗಿಸಿ ಮನುಕುಲವ ತೂಗಿದಳು.
ಆದಿಮ ಪಥಿಕರಾದ ಪಿಥಿಕಸರಾದಿಯಾಗಿ ಆಧುನಿಕ ಸುಖಿಗಳಾದ ಸೆಪಿಯನ್ನರನ್ನೆಲ್ಲ
ಸಲುಹಿದಳು.
ಯುದ್ಧ–ಶಾಂತಿಯೆನ್ನದೆ ಕೋಪ–ವಿಕೋಪವೆನ್ನದೆ ಪ್ರಭೃತಿಯಿವಳ
ದಣಿವರಿಯದ ಪ್ರದೀಪ್ತವು ಸಂತತವಾಗಿ ಸಂತೆಯನೇ ಸಂತೈಸಿತ್ತು.
ತೃಷಿತಜಗದ ಜಿಹ್ವೆಯನು ಜಿನುಗಿಸಲೆಂದು, ಭುವಿಯನ್ನೇ ಭುವನವನ್ನಾಗಿಸಲೆಂದು
ವರ್ಣ–ಸುವರ್ಣವನು ಬಿತ್ತಿ, ಅನಿಲ–ಆನಂದವನುಕೆತ್ತಿ
ಪವನದಲಿ–ಪರಿಮಳವನೇ ಸುತ್ತಿ, ಕುಸುಮದಲಿ–ಕಿರಣಕಾಂತಿಯನೇ ಮೆತ್ತಿ
ಸುತ್ತುಹಾಕುವ ಸಪ್ತಲೋಕಗಳೇ ಸದ್ದಿರದೆ ಸ್ತಬ್ಧವಾಗುವಂತದನು ಕಟ್ಟಲೆಂದು
ಗರ್ಭವತಿಯಾದಳಿವಳು ಪೃಥಿವಿಪತಿಯ ಸತಿಯು.
ಪ್ರತೀಕ್ಷೆಯು ಮುಗಿದಿರಲು, ಅಭೀಪ್ಸೆಯು ಫಲಿಸಿರಲು
ಹೆತ್ತಳಾಗ ಹೆಡೆಯಿರದ ಏಳುನಾಗರ ಪಡೆಯನ್ನು.
ಲಂಗಿಲ್ಲದ, ಲಗಾಮಿನ ಹಿಡಿಯಿಲ್ಲದ ಜಗದೊಡೆಯರನ್ನು.
ಸೀಮೆಯಿರದ ಜನಾಂಗವದು ಅವಳ ಸೀಮಾಂತವನ್ನೇ ಸೂರೇಗೈದಿತ್ತು.
ಎಲ್ಲೆಯಿರದವರು ಬಂದು ಎಲ್ಲೆಂದರಲ್ಲಿ ಗುಲ್ಲೆಬ್ಬಿಸುತ್ತ ನಡೆತಂದರು.
ಕಾಡೆಂಬ ಕಾಡನ್ನೇ ಕಡಿಕಡಿದು ಕಾಡಿದರು. ಹೊಲಬನಗಳನು ಹಾಳ್ಗೆಡವಿದರು.
ಬೆಳಕಿಗೆದುರಾಗಿ ಬದುಕನು ಕಟ್ಟಲೆಂದು ಬದುವನೇ ಬರಿದಾಗಿಸಿದರು.
ಜಲಾಧಿನಿವಾಸಿನಿಗಳಾದ ಯುವತರಂಗಿಣಿಯರು ಭೋಗ ರ್ರೆಯುತ ಹರಿದು
ಸಮುದ್ರದೇವನ ತೋಳ್ತೆಕ್ಕೆಯಲ್ಲಿ ಕನ್ಯತ್ವವನ್ನು ಕಳೆದು ವರುಣಸೌಧನಿವಾಸಿನಿಯಾದರು.
ನೆಟ್ಟನೆಯ ದಿಟ್ಟಿಗೆ ಗೋಚರವಿರದ ಪರ್ವತಾವಳಿಗಳ ಶಿಖರಾಗ್ರವನು ಕಾಣಲೆಂದು
ಪಂಖಯುತಗರುತ್ಮವಾಗಿ ಗಗನಕೇರಬಯಸಿತ್ತದು ನರನರರ ನಾರಕದೃಷ್ಟಿ.
ಇದೆಲ್ಲ ವ್ಯತಿರಿಕ್ತಕ್ಕೂ ವ್ಯತ್ಯಯವೆಂಬಂತೆ ನಿತ್ಯದಲೆದಾಟದಲಿ ನಡೆದಿದ್ದ ರುರುವು
ಅದಿಮಪ್ರಕೃತಿಯ ಆದಿಮಾಧುರ್ಯವೇ ರಸಮಯಸಮಯವೆಂದಾರಾಧಿಸಿದ್ದನು.
ಅನಂತನೆಂಬ ಕಾಲಕಾಲೇಶ್ವರನು ಕಾಲಿಟ್ಟಲೆಲ್ಲ ಅಲ್ಪಾಯುಷಿ ಮರ್ತ್ಯವನು ಸೃಜಿಸಿಹನು,
ಆ ಅಲ್ಪದಲೇ ಕಲ್ಪಾಂತದೊರೆಗಿನ ಪ್ರೇಮದೊರತೆಯನು ಉದ್ಭುದಿಸಿಹನು.

ಸುಪರ್ಣವೊಂದು ಬೀಸುಗಾಳಿಯ ಹಾಸಿನಲೇ ಅಲೆದು ಕಸುವಿಲ್ಲದೆ ಗೂಡನು ಸೇರಿ
ತನ್ನೊಡತಿಯನು ತಬ್ಬಿ ತನಗಾಗಿರುವ ಗುರಿಯೇ ಈ ಗೌರಿಯೆನ್ನುತ ನಲಿಯುವಂತೆ,
ಸೂರ್ಯಕಿರಣದಿ ಕಾದ ನೆಲದ ಬೆಚ್ಚಗಿನ ಹವೆಯೂ, ಮೈಕೊರೆವಕುಳಿರುಗಾಳಿಯ
ಮಂದಾನಿಲವೂ
ಬನಾಂತರ್ಗತ ಪದ್ಮಪುಷ್ಕರಣಿಯಿಂ ಬಯಲು ಭೂಮಿಯೊರೆಗೆ ಸಾಮರಸ್ಯವ
ತರುವಂತೆ,
ಗಿರಿಗಹ್ವರದಿ ಬೀಡುಬಿಟ್ಟಿಹ, ನಭೋಮಂಡಲದಿ ರೆಕ್ಕೆಬಿಚ್ಚಿಹ ನವವಿಧದ
ಮೃಗವಿಹಗಗಳಾದಿಯಾದ
ಸರ್ವಾನ್ನಮಯದ ಸಂಕುಲಗಳನೆಲ್ಲ ಪಚ್ಚೆಪಯರಾಗಿಹ ಹುಲ್ಲುಗಾವಲು ಕೈ ನೀಡಿ
ಕರೆವಂತೆ,
ಪ್ರಿಯಂವದೆಯಲ್ಲಿ ಪ್ರಿಯಕರನು ತಾನಾಗುತ ಒಲಿಯುತ ಉಲಿದನು ರುರು.
ಪ್ರೇಮನಿವೇದನೆಯ ಗೀತಿಸಿ, ಪ್ರೇಮಪಕ್ಷದಿ ಲಂಘಿಸಿ, ಪ್ರೇಮದಾರ್ಣವದ
ನಡುಗಡ್ಡೆಯನೇ ಸೇರಿದನು.
ಮಾಧುರ್ಯದ ಮಧುವಿದ್ಯೆಯನು ಬಲ್ಲಂತೆ, ಪುಷ್ಪೆಯಾಗುತ ನಸುಗಂಪನು
ಚಲ್ಲುವಂತೆ
ಪತಿಯೊಡನಾಗಿ ನಲಿದಾಕೆಯ ಮೋಡಿಯೊಳಗಾಗಿ ಓಡಿಯಾಡಿದನವ ದುಂಬಿಯೊಲು
ಅಲೆವಂತೆ
ಮರ್ತ್ಯಭದ್ಮದಲಿಹ ದೇವಸದ್ಮ ನಿವಾಸಿನಿಯೀಕೆಯ ದೇಹಪದ್ಮವದು ಜಿನುಮಿನುಗು
ಜೇನಿನ ಝರಿಯಾಗಿತ್ತವಗೆ,
ಜಲಶೀತಲಧಾರೆಯ ವಾಪಿಕೂಪಗಳೊಲು ಪ್ರಿಯದೃಷ್ಟಿಯ ವೃಷ್ಟಿಯ ಹರಿಸುತಿಹ
ಶಶಿಪೌರ್ಣಿಮೆಯ ಹಾಲುಬೆಳದಿಂಗಳ ಕಂಗಳ ಕೂರ್ಮೆಯಲಿ
ಕೂರ್ಮವಾಗಿತ್ತವನಕಾರ್ಮಣ
ಅಧರದ ಮೃದುಮಧುರಮಾಧುರ್ಯದ ಸಂಗಮವು ಸೆಳೆದಪ್ಪಿದವರಲ್ಲಿ
ಸೆಳೆಮಿಂಚಾಡಿಸಿತ್ತು.
ನಭದಂಗಳದಿ ತಿಂಗಳನಿಲ್ಲದ ತಂಗಳರಾತ್ರಿಯ ರಜನಿಕೇಶವು
ಶಿರದಿಂದಿಳಿದು ಹಂಸದಂತಿಹ ಅವಳ ಅಂಸವನು ನಾಗರಬಂಧದಿ ಸುತ್ತಿ ಬಳಸಿತ್ತು.
ಮಧುಸಾಗರದ ಮೃದುಬಿಂದುವೊಂದು ಮಸ್ತಿಷ್ಕಮಧುಕೋಶದಲಿ ತೊಟಕಿಕ್ಕಿರಲು
ಅವನ ಹೃನ್ಮಂಡಲದಿ ಹಾಲ್ಗಡಲದು ಪ್ರಕ್ಷುಬ್ಧತೆಯನೇ ಪ್ರಕೋಪಿಸಿತ್ತು.

ಇಂದ್ರಪ್ರಜ್ಞೆಯಿಹ ಮನೋಲೋಕದ ಮನಸಿಜಾತರಿಗಾಗಿಯೇ ಮೀಸಲಾಗಿರುವ
ಕಾರಣ ದೇಹವದು ಕಾರಣಾಂತರದಿ ಇಳೆಗಿಳಿದು ರುರುವಿನ ತೋಳ್ತೆಕ್ಕೆಯಲಿ ಬಳಲಿತ್ತು.
ಅವಳದೊಂದು ಚುಂಬನದಿ ಕಣ್ಗೆಕತ್ತಲೆಕವಿದು,ಧೀಮಂಡಲದಿ ಧುಮ್ಮೆಂದು
ಧುಮುಗುಟ್ಟಿತ್ತು.

ಕಾಮನಿರ್ಮಿತ–ಶ್ವೇತಸ್ವರೂಪಿತ–ಭವ್ಯಸಾಮ್ರಾಜ್ಯದೂಷಿತ ದೇಹದೈಸಿರಿಯು
ರುರುವಿನಾಳ್ವಿಕೆಯಲಿ ಫಲಿತಿತ್ತು, ಒಲಿಯುತ ಕಲಿತಿತ್ತು, ಮುಲಿಯುತ ನಲಿದಿತ್ತು.
ತ್ವರಿತದಲಿ ಅವನೆಂದೂ ಅರಿತಿಲ್ಲ ತಾನವಳಲ್ಲಿ ಮೋಹಿಸಿ ಮುದ್ದಿಸಿತಾವ ಗುಣ?
ಅಸ್ಮಿತೆಯಲ್ಲದ ಸ್ಮಿತವೊ? ಅಂಕೆಯಲಿಹ ಬಿಂಕವೋ? ಪುಷ್ಪನೇತ್ರಿಯ ಬಾಷ್ಪವೋ?
ಕೋಮಲೆಯ ಕಮಲಕಪೋಲದಿ ಅಧರವನಿಟ್ಟು ಮರ್ದಿಸುತ ಅಮರ್ದುವನೇ
ಹೀರಿದನು.

ಕುಚೋನ್ನತೆಯ ಯುಗಲಸ್ತನವದು ಅವನ ಪುರುಷಸ್ತವನೇ ಪ್ರೇರಿಸಿತ್ತು
ಗಂಡೆದೆಯ ಗುಂಡಿಗೆಯಲಿ ಘಣಘಣಘಂಟಾನಾದವನೇ ಮೊಳಗಿಸಿತ್ತು.
ಮಧುಚಂದ್ರರಾತ್ರಿಗಳಲಿ ಗುಡಿಚಾಪೆಗಟ್ಟೇಳದೆ ವಿರಹದಿ ವಿರಾಜಮಾನನಾಗುತ
ಗುಟುರ್‌ಗುಂಯ್‌ಗುಡುತಿಹ ಕಪೋತಪಾರಿವಾಳಗಳವು ಹಾಲುಬೆಳದಿಂಗಳಿನ
ಶೀತಲಪದ್ಮಪುಷ್ಕರಣಿಗಳ ಬಳಿಸಾರಿ ಪುಷ್ಪಮಂಜರಿಗಳಲಿ ದೂರವಾಗುತಿಹ
ದೂರನಿತ್ತಿರಲು,

ಪಾರಿಜಾತದಿ ಪಲ್ಲವಿಸಿದ ಹೃತ್ಕವಾಟವು ಆನಂದದ ಪರಿಮಳವನು ಪಸರಿಸುತ
ಮಧುವಂತಿಯೊಲು ಮಧುಕಾಂತಿಯನೇ ಚೆಲ್ಲುವುದು.

ಸತಿ ಶಂಕರನಲಿ ಕಲೆವಂತೆ, ಹರಿ ಲಕುಮಿಯಲಿ ನಿಲುವಂತೆ, ಸ್ವರ ಬ್ರಹ್ಮದಲಿ
ಉಲಿವಂತೆ

ಅಂದಾಗಿ ಮುಂದಾಗಿ ಪ್ರೀತಿಯೊಳಗೊಂದಾಗಿ ನಟಿಸಿದರೆ ನಾಟ್ಯವದು ಪ್ರೇಮ
ಇಲ್ಲದಿರೆ ದ್ವೇಷದಿ ಭುಸುಗುಟ್ಟುತಿಹ ಏಳುಹೆಡೆನಾಗರದಿ ಜ್ವಲಿಸೀತು ಹೋಮ
ಅದಕಂತೆ ತನ್ನರಸಿಯಲಿ ರಸವನ್ನರಸಿ ಸರಸಮಯ ಸಾರಂಗವಾದನವ ರುರು
ಯುಗಳಪ್ರೇಮದಿ ಯುಗದಾದಿಯ ಯುಗ್ಮದೋಪಾದಿಯಲಿ ನಲಿದರವರು.
ಮುಳ್ಳಿಲ್ಲದ ಕೆಂಗುಲಾಬಿ ಹೊಂಗುಲಾಬಿಯಂತಾಗಿ ಪ್ರೇಮಗಂಧವ ಸೂಸಿತ್ತವರ ನರು.
ಮುಂದೊಂದು ದಿನ ನಸುಕಿನಲೆದ್ದ ರುರು. ಬ್ರಾಹ್ಮೀಮುಹೂರ್ತವು ಮರೆಯಾಗಿತ್ತು,
ನಭೋಂಗಣದಿ ವರುಣರಚಿತವಿಹ–ಸ್ವರ್ಣಾಶ್ಮಖಚಿತವಿಹ ಮಾರ್ಗವೇರಿ,
ನೂಕುತಲೆವ ಹರ್ಯಶ್ವಸಪ್ತಧರ ಏಕಚಕ್ರ ರಥವೇರಿ, ಒಡಮೂಡುವ
ಸವಿತೃಸೂರ್ಯನು

ಸೂಜಿತೇಜಗಳ ಮೊನೆಯಿಂದ ರಜನಿಯ ಚುಚ್ಚಿ ಬೆಳಕನೀಯುವ ಉದಯಕೂ
ಮುನ್ನ,
ಚಿತ್ರಾಮಘೆಯ ಕೈದೀವಿಗೆಯದು ಸೂರ್ಯರಥಕೆ ದಾರಿಬೆಳಕನೀಯುವ
ಉಷಾಃಕಾಲಕೂ ಭಿನ್ನ,
ನಿಶೆ ಜಾರುತಿಹ–ಉಷೆಯೇರುತಿಹ ಅಶ್ವಿನೀ ಮುಹೂರ್ತವದು.
ಅರ್ಧಬೆಳಕರ್ಧಕತ್ತಲೆಯ ಎಚ್ಚರವಲ್ಲವೆಚ್ಚರದ ಚುಮುಚುಮು ಚಳಿಯಲಿ
ಪ್ರಿಯಂವದೆಯ ತೋಳತೆಕ್ಕೆಯಿಂದೆದ್ದು ನಡೆದಿದ್ದನವ ಸಜ್ಜನದಿ ಮಜ್ಜನಕೆ.
ತೆರೆತೆರೆಯಾಗಿ ತರಂಗಿಸುತಿಹ ತರಂಗಿಣಿಯಲಿ ತರಹೇವಾರಿಯಾಗೀಜುತ
ತೀರನೇರಿ ಬರುವ ತರಣಿಯನೆದುರುಗೊಂಡು ಮೇಲೆದ್ದು ನಡೆದವನ ದಡಕೆ.
ಉಚ್ಚಲೋಕದ ಉಚ್ಚೈಶ್ರವದಂತೆ, ಧೀಃಲೋಕದದಧಿಕ್ರಾವನದಂತೆ,
ಬವರವಿರದೇರುವ ಬುರಾಕಿನಂತೆ, ಭೃಂಗದೋಪಾದಿಯಲ್ಲಲೆವ ಏಕಶೃಂಗದಂತೆ
ಹುಲುಸಾಗಿಹ ಹುಲ್ಲುಗಾವಲದಿ ನಡೆದವನ ಕೇಸರವ ಮಂದದಿ ನಲಿಸಿತ್ತದು
ಮಂದಾನಿಲವು.
ಬರ್ದಿಲದೊಲಿರುವ ಬನದಿ ಬಂಧನದೊಳಿರುವ ಬಣ್ಣಬಣ್ಣದ ಎಲೆಫಲಪುಷ್ಪಗಳಿಂ
ತೂಗಿತೊನೆದಿರುವ ರೆಂಬೆಕೊಂಬೆಗಳಲಿ ಜೀಕುತಾಡಿದನು. ನೂಕುತೆಡವಿದನು.
ಶಮೀಪ್ಲಕ್ಷಶಿಂಶಪಾ ಖದಿರಶಾಲ್ಮಲೀ ಆಲ ತಾಲ ತಮಾಲ ನ್ಯಗ್ರೋದಾದಿ
ಬಿಳಿಲುಬಿಟ್ಟ ಬೀಡುಗಳಲಿ ಓಡಿಯಾಡಿದನು
ನವನವೀನ ವೃಕ್ಷಗಳಲಿ ತನ್ನಾಕೆಯ ತನಯವನ್ನರಸಿದನು.
ಭ್ರಮಣಗೈಯುವ ಭ್ರಮರದೋಪಾದಿಯಲಿ 'ಭ್ರೂ'ರಮೆಯನ್ನೇ ಭ್ರಮಿಸಿದನು.
ವರ್ಣವಿವರ್ಣವಿಹ ಪರ್ಣವದು ಕರ್ಣಾಕರನ ಕಾರಣದಿ
ಬೆಚ್ಚಗಾಗಿತ್ತು, ಪಚ್ಚೆಯಾಗುತ ಸಾಗಿ ಹಚ್ಚಹಸುರಾಗಿತ್ತು.
ರವಿರಶ್ಮಿಯ ವರ್ಗವದು ತನಗಾಗಿರುವ ಸರ್ಗವಿದೆನ್ನುತ ನಿಸರ್ಗವನ್ನೇ
ಸ್ವರ್ಗಮಯವನ್ನಾಗಿಸಿತ್ತು.
ಚಿಲಿಪಿಲಿಗುಡುತ, ಕಣ್ ಪಿಳಿಪಿಳಿ ಬಿಡುತ ವಲಯದಲಿ ಸಂವೇದನಾಲಯವನ್ನೇ
ಹರಿಸುತ್ತ ಹಾರಾಡುತ್ತಿತ್ತದು ವಿಹಗಸಂಕುಲ.
ಗೂಢದಿಂದಿದ್ದು, ಗೂಡಿನಿಂದೆದ್ದು, ದಿಙ್ಮೂಢತೆಯಿಂ ಕೊಡವಿಕೊಂಡೆದ್ದು
ಗುಡಿಗೋಪುರದೆತ್ತರದ ಕರ್ಮವಿಕರ್ಮದಲಿ ತೊಡಗಿದ್ದವವು ಮೃಗಾದಿಮೂಲ.
ಭೂಮಂಡಲದಿಂ ಭಾಮಂಡಲದೆಡೆಗೋಡುವ ಭರದಿ ಬಾಂದಳವನ್ನೇರಿ
ನಡೆದಿದ್ದನವ ಭಾನು.

ಹಗಲುಗನಸಿನಂತಳಿದು ಮುಂತುಳಿದು ನಡೆದಿತ್ತದು ಹಗಲು.
ಭೋರೆಂದು ಬೀಸುವ ಸೂಸುಗಾಳಿಯಲಿ ಬಿಸಿಲುಗುದುರೆಯ–
–ನೋಡಿಸುವ ಮಧ್ಯಾಹ್ನವಾಗಿತ್ತು. ಪ್ರಿಯಂವದೆಯೆಡೆಗೋಡುವ ಮನವಾಗಿತ್ತು.
ಕಾದಿರುವ ನೆಲದಲಿ ಕಾಲಿಡದಂತಾದ ಕಾದಲನವ
ಕಾದಿರುವ ಕಳತ್ರೆಯನು ಕಾಣದೆ ಕಳವಳನಾಗಿದ್ದ.
ಕಾಡುತಿರುವ ಕಾಡುದಾರಿಯಲ್ಲಲೆದು, ಕಡಹುತಿಹ ಕಡವೆಯಂದದಿ ನಡೆದು
ಗುಡಿಯೊಳಿರುವ ಗುಡಿಯಳನು ಕೂಡಲೆಂದು ನಡೆತಂದನವಗಂಡು.
ವರ್ಣವಿವರ್ಣವಿಹ ಪರ್ಣಕುಟಿಯೆಡೆಗೆ, ಹಚ್ಚಹಸುರಾಗಿಹ ಪಚ್ಚೆಯೆಲೆವನೆ ಗುಡಿಗೆ.
ತಲೆಯೆತ್ತಿ ನೋಡುತಿರೆ, ಖಗದೋಪಾದಿಯಲರೇತಿಹ ಭಗನನು ಕಾಣುತೊರೆದನು
ರುರು,
"ಓ ಸರ್ವಾನ್ನಮಯದ ಸರ್ವಪ್ರೇರಕ ಸೂರ್ಯದೇವನೇ,
ತಾನು ತನಗೆಂದು ತನಿಸುತಿಹ ಕೂರ್ಮವಲ್ಲವಿದು ಜೀವ.
ತನುವಿಗಾಗಿ ತಮದಿ ತಪಿಸುತಿಹ ಕೂರ್ಮೆಯಲ್ಲವೇ ದೇವ?
ಪ್ರಿಯದ ಮಾಯದಲಿ ಏರದಿದು ಪ್ರಾಯ, ಅಳಿಯದಿದು ಕಾಯ.
ಸಾಂತವಿರದೀ ಸಂತೆಯಲಿ ಸಂತಸವಿಹುದು ಸಂತತದಲಿ.
ಸಲಿಲ ಶುಭ್ರಸ್ಫಟಿಕದಂತಲೆಯಬಹುದು, ಹೊಳೆಹೊಳೆವ ಹೊಳೆಯಂತಿಳೆಗೆ
ಇಳಿಯಬಹುದು,
ಅಹಿವೃತ್ರನನೇ ಅಭಿಮುಖಗೊಳಿಸಿದಹಿರ್ಬುಧನ್ಯನ ಅಧಿಕಾರವಿಹ,
ಏಕತಾನದಿ ಏಕೀಭವಿಸುವ ಏಕಾದಶರುದ್ರರ ಏಕ ನೆಲೆಯಾದ,
ನಿಲಯ ಆಲಯಗಳೆಲ್ಲವನು ಲಯದೆಡೆಗೆ ತೂರಿಬಿಡುವ
ಪ್ರಾಣಮಯದ ಪ್ರಭೃತಿಯಾದ ಪವನಪ್ರಭಂಜನಾದಿ ಪ್ರಲಯಮಾರುತರಿಗೆ
ಪ್ರತಿಗಾಮಿಯಂತೆ,
ಮಲಯಮಾತರಿಶ್ವನ ವಲಯದಲಿ ಅಂದವಾಗಲೆವ ಮಂದಾನಿಲದಂತೆ,
ಉಳಿಯಬಹುದು.ಇಲ್ಲದಿರೆ, ಶತಸಹಸ್ರಾವಧಿಯ ಲೆಕ್ಕವಿಡದಿಹ ಚುಕ್ಕೆಯಂತೆ,
ಕಡೆಗೆ ಕಾಡಿನಲಿ ಕಡಿದು ಕಟ್ಟಿಗೆಯಾಗುವನಕ ಲಕ್ಷರಿಗೆ ಸುಭಿಕ್ಷವನೊದಗಿಸುವ
ವೃಕ್ಷದಂತೆ, ಬದುಕಿದರೆ ಬದುಕಿದು ಭಾಗ್ಯಮಯ,
ಇಲ್ಲದಿರೆ ತ್ಯಾಜ್ಯದಲೇ ಭೋಜ್ಯವನ್ನರಸುವ ವ್ಯಾಜ್ಯವಿದು ಸಾಯುಜ್ಯ
ಎನ್ನುತ ಮಾರ್ಗವ ಕ್ರಮಿಸಿದನು. ಪ್ರೇಮದ ವಿರಹದಿ ಭ್ರಮಿಸಿದನು,

“ಕಾಲಕ್ಷೇಪದಿ ಕ್ಷಯಿಸಿ ಆಕ್ಷೇಪಿಪಳು, ಪ್ರತಿಪದದಿ ಪ್ರತೀಕ್ಷಿಸಿ ಪ್ರಕ್ಷುಬ್ಧಳಾಪಳು.
ಕಾನನವಲೆದು ಕಾದವಗೆ ಆನನವ ತೋರದೆ ತಿರುಗುವಳು, ಕಂಬನಿಗರೆದು ಮರುಗುವಳು
ಅಂಬರಾಂಬರವನೆಲ್ಲ ಅಂಬುದಗಳ ದಂಡಿನಲಿ ದಂಡಿಸುವ
ಚಂಡಮಾರುತದೊಲವಲು ಖಂಡಿಸುವಳು
ಇಲ್ಲದಿರೆ ಮೃದುಮಧುರವಿಹ ಮಧುಚಂದ್ರರಾತ್ರಿಯಲಿ ಸುಂಯ್ಯೆಂದು ಸುರಿವ ಸೋನೆಯಂತಳುವಳು.
ಬಿಡದೆ ಬೆನ್ನಟ್ಟುವೆನು, ಹಿಮ್ಮೇಳದಿ ಹಿಂಬಾಲಿಸುವೆನು.
ಯಾಜ್ಞಿಕರು ಯಜ್ಞದೇವತೆಯನು ಯಜಿಸುವಂತವಳನು ಭಜಿಸುವೆನು.
ಸೂಕ್ತವಿಹ ಸೂಕ್ತವನ್ನೊರೆದವಳ ಹೃತ್ಕಮಲವ ದ್ವೇಷಮುಕ್ತವಾಗಿಸುವೆನು,
ಪ್ರಳಯದಿ ಪ್ರಣಯವು ಲುಪ್ತವಾಗದಂತದನುಪ್ರೇಮಯುಕ್ತವಾಗಿಸುವೆನು.
ಅಭಿಸಾರಿಕೆಯ ಮುಖಮಲ್ಲಿಗೆಯದು ಶುಕಸಾರಿಕೆಯಕೊಕ್ಕೆಯೊಂದಿಕ್ಕಿದ ಸಿಹಿಫಲವು.
ಬಣ್ಣಬಣ್ಣದ ಬಟ್ಟೆಯನುತೊಟ್ಟ ಚಿಟ್ಟೆಯಂತವಳನು ಪುಷ್ಪದಲಿ ಸಿಂಗರಿಪೆನು
ಕೊನೆಗೆ ಕಾಲಡಿಯ ಕಾಷ್ಠದಂತವಳ ಪಾದದಿ ಪವಡಿಪೆನು. ಪ್ರಿಯಳಲಿ ಪ್ರೇಮವ ಪಸರಿಪೆನು.”
ಎನುತಲಿ ದಾರಿಯ ಸವೆಸಿದನು. ಧೇನುವಾಗುತವ ಧೇನಿಸಿದನು.
ಕಾದಲನಿಗೆಂದು ಕಾದು ಕವಿದಿದ್ದ ಕತ್ತಲೆಯೊಳಗೆ ಕೂತು ಮೆತ್ತಗಾಗಿದ್ದಳವಳು ಕಾಂತೆ,
ಪಕಳೆಯೊಳಗೆ ಪವಡಿಸಿ ಪಲ್ಲವಿಸಲೆಂದು ಪ್ರತೀಕ್ಷಿಸುತಿಹ ಮೊಗ್ಗೆಯಾಗಿಹ ಮಲ್ಲಿಗೆಯಂದದಿ
ಪ್ರೇಮದನಿಯನು ಹನಿಸಲಿಹ ಇನಿಯನನು ಇದಿರುಗೊಳಲೆಂದು ಎದುರು ನೋಡಿದ್ದಳಾಕೆ.
ಪತಿಯ ಪದಹತಿಯನಾಲಿಸಿದೊಡೆ ಆಲಾಪಿಸಲೆಂದೋಡಿಬಂದು ಆಲಯದೆದುರಲೇ ನಿಂದಳಾಕೆ.
ಹರ್ಷದಲಿ ಪ್ರೇಮವರ್ಷವದು ಸುರಿದಿತ್ತು.ಜಂಗಮವಾಗಿ ಜರಿದು ಜಗವನ್ನೇ ಝುಗಮುಗವಾಗಿಸಿತ್ತು
ಶೀತಲಮಧುಚಂದ್ರಕಾಂತಿಯೊಲಿರುವ ಸ್ಮಿತವದು ಅವನೆದೆಯಲಿ ಸಹಸ್ರಸೂರ್ಯರಶ್ಮಿಯನೇ ಬೆಳಗಿಸಿತ್ತು.
ಪತಿಯನು ಕಾಣದೆ ಕಣ್ಣೀರಾಗಿ ಕಪ್ಪಿಡಿದ ಕಪೋಲವದು ನಸುನಗುತ
ನಾಚಿನಸುಗೆಂಪೇರಿ ನಲಿದಿತ್ತು.

ಅನಿತರೊಳು ಘಟಿಸಿತ್ತದು ಘಟಸರ್ಪದಾಳಿಯು, ಪತಿವ್ರತೆಯ ಪಾದಪದ್ಮದಡಿ
ಭುಸ್ಸೆಂದು ಭುಸುಗುಟ್ಟಿದ್ದ ಕರಿನಾಗರವೊಂದು ಜರ್ರೆಂದು ಜರಿದಿತ್ತು,
ಸರಸರನೆ ಸರಿದಿತ್ತು. ನೋಡನೋಡುವನಿತರೊಳು ಕಾಡುಪೊದೆಯೊಂದರಲಿ
ಹರಿದಿತ್ತು.
ಸುಳಿವು ಕೊಡದಂತೋಡಿ ನುಸುಳಿ ಮರೆಯಾಗಿತ್ತು. ಅಟಮಟವೆಂಬಂತೆ
ಮಟಮಟ ಮಧ್ಯಾಹ್ನದಲಿ ಬಟಾಬಯಲಿನೊಳಗೋಡಿ ಮಟಾಮಾಯವಾಗಿತ್ತು.
ಕಾಲಮಿಂಚಿಹೋಗಿತ್ತು. ಹೊಂಚುಹಾಕುತ ಬಂದು ಸಂಚಕಾರವನೇ ತಂದಿಕ್ಕಿತ್ತು.
ಕಾಲಡಿಯ ನೆಲವು ನಲುಗಿದಂತಾಗಿರವಳ ಧೃಡನಿಲುವೇ ಧಡಧಡಿಸಿತ್ತು.
ಆಯತಪ್ಪಿದ ಕಾಯವು ಕನಲಿರಲು ಕೊನೆಗೆ ದೇಹವೇ ಧರೆಗೊರಗಿತ್ತು.
ಪ್ರಿಯಂವದೆಯ ಪ್ರೇಮವಲಯದ ನಿಲಯನಿವಾಸಿನಿಯಾದ ರುರುವವನು
ನಡೆದುದ ನೋಡುತ ನಿಂದವನು ಓಡೋಡಿ ಬಂದನು,ಮಡಿದವಳ–ಕೈಹಿಡಿದವಳ
ಹಿಡಿದೆತ್ತಿದನು, ಸುಳಿದುಸೆಳೆದಪ್ಪಿದನು. ಆಕ್ರಮಿಸುತವಳನು ಆಕ್ರಂದಿಸಿದನು,
ಕೈಯಿಂದವಳ ಕಮಲಕಪೋಲವ ಕನಲಿಸುತ ಕೇಳಿದನು.
ಎದುರಿಹಳ ಎದೆಬಡಿದು ಎದ್ದೇಳಿಸಲೆಂದವನು ನೋಂತನು. ಹೃದಯನಿವಾಸಿನಿಯ
ಹೃದಯಬಡಿತವದು ಮತ್ತೆ ಮಿಡಿಯುವಂತವಳನು ಮಿಡುಕಿದನು.
ಮಿತ್ರನೆಡೆಗೋಡುತಿಹವಳ ನೇತ್ರಗಳು ನೀಲದಲಿ ಲೀನವಾಗುತ ನೀಲವಾದವು.
ತೊಡೆಯ ಮೇಲೆ ತನ್ನಾಕೆಯ ತಲೆಯನ್ನಿಟ್ಟು ತಡವಿದನು. ತೆಗೆದಪ್ಪಿ ತಕ್ಕೈಸಿದನು.
ಆ ಕ್ಷಣದಲಿ ಲಕ್ಷಣವಾದ ಅವಳಕ್ಷಿ ಪಟಲವು ತೆರೆದುಕೊಂಡಿತ್ತು, ತುಟಿಯು
ತಡವರಿಸಿತ್ತು,
ಮೊಗವು ಮಾತನಾಡಲೆಂದು ಮುನ್ನೋಡಿತ್ತು. ಕಣ್ಣೀರಾಗುತಿಹಕಾಂತನನು
ಕಡೆಯದಾಗೆಂಬಂತೆ ನೋಡುತ ನುಡಿದಳವಳು, "ಓಹ್ ಪ್ರಿಯಮಿತ್ರನೇ!
ಹರಿಯೊಡನಾದ ಲಕ್ಷ್ಮಿಯೊಲಾಗಿ ಹರಿದ್ವರ್ಣದಿ ಲಕ್ಷಕನಸುಗಳ ಕಂಡು ಕನವರಿಸಿದ್ದೆ,
ಮೃದುಮಧುರವಿಹ ನಿನ್ನಧರದ ಮಧುವಿನಲಿ ಮುಗ್ಧಳಾಗುತ ಮನವನೇ ಮರೆತಿದ್ದೆ.
ನಿನ್ನಪ್ಪುಗೆಯ ಬಂಧವನು ಶತಮಾನವು ಬಂದರೂ ಬಿಡಿಸದಿರದೆಂದು ಭಾವಿಸಿದ್ದೆ.
ನೀನಿಲ್ಲದ ದಿನಗಳನು ದೀನಳಂತೆ ದೂಡುತಿದ್ದೆ, ನಿನ್ನಳವಿನಲಿ ಕಾಳಕರಾಳವಿಹ
ರಾತ್ರಿಗಳನೂ ಆಳನಿರಾಳವಾಗಿ ಕಳೆದಿದ್ದೆ,
ಸರಸ–ವಿರಸವೆನ್ನದೆ ಸಮರಸದ ಸಾರದಂತಿದ್ದ ನಿನ್ನಾಸರೆಯ ಹಸಿರೊಳಗೆ
ಸುರಿಯುತಿಹ ಸುರಲೋಕದಸಿಹಿರಸವನ್ನೇ ಸವಿದಿದ್ದೆ,

ಸವಿಗನಸಿನ ಸುಪ್ವಿಗೆಯಲಿ ಸುಳಿಯುತಿಹ ಸೂರ್ಯೋದಯ ಸೂರ್ಯಾಸ್ತಗಳನೆಂದೂ
ಸೂಚ್ಯಂಕಗೊಳಿಸಿಲ್ಲ, ಬಾನಂಗಳದಿ ಭವಿಸುತಿಹ ಬಾನಾಡಿಗಳನೂ ಬೆರಳಂಕಿಯಲಿ
ಬೈತಿಡಲಿಲ್ಲ,
ತಿಂಗಳನ ಕಂಗಳಲಿ ಕಂಡು ಬೆಳದಿಂಗಳನೇ ಕುಡಿವೆನೆಂದೇರುವ ಚಕೋರಿಯನುಕಂಡಿಲ್ಲ
ಸೌರಮಂಡಲದೆಡೆಗೇರಿ ಸುಟ್ಟುರಿದು ಸುಮ್ಮನಾಗುವ ಸುಪರ್ಣಗರುತ್ಮವನು ಗಮನಿಸಿಲ್ಲ
ಮೇಘದೋಘದಲಿ ನಡೆದು ಪರ್ಜನ್ಯನ ಪ್ರಥಮಬಿಂದುವನು ಪಡೆವ ಚಾತಕವನು
ಚರಿಸಿಲ್ಲ
ವರ್ಷಾಕಾಲದ ಕುಕಿಲಕ್ಕಿ ಪಿಕಿಲಕ್ಕಿಗಳು ಬಂದು ಕೊಕ್ಕಿನಲಿ
ಕೂಗುತ್ತ ಕರೆದರೂ ಕೇಳದೆಂಬಂತೆ ಕಾಲವ ಕಳೆದಿದ್ದೆ.
ಕುಬ್ಜವಾಗಿ ಕೃಶವಾಗಿಹ, ಭೂರ್ಜವಾಗುತ ಬೃಹದೆತ್ತರಕೇರಿದ ವೃಕ್ಷರಾಜಿಗಳನೂ
ಅಕ್ಷರದಲಿ ಸಂರಕ್ಷಿಸಿ ಸ್ಫುರಿಸಿಲ್ಲ. 'ಪ್ರಿಯಂವದೆ'ಯೆಂದು ಪರ್ಣದಲಿ ಪರಪರಿಸುತ್ತ
ಎನ್ನ ಪೆಸರಿಡಿದು ಪ್ರೇರಿಸಿದರೂ ಪ್ರತಿಯಾಗಿ ಪುನರುಚ್ಚರಿಸಲಿಲ್ಲ.
ಕೋಟಿಕವಡೆಗಳ ಕುಲುಕಿ ಕರಿಗಂಬಳಿಯ ಮೇಲೆಸೆದ ಅಕ್ಷದ್ಯೂತನು
ಲಕ್ಷ್ಯವಿಟ್ಟು ಕಕ್ಷೆಯನು ರಚಿಸುವಂದದಿ ಬಾನಬಿತ್ತರವನೇರಿ ಭ್ರಮಿಸುತಿಹ
ಬಿಳಿಚುಕ್ಕೆಯೊಂದು
ಲಕ್ಷನಕ್ಷತ್ರಗಳ ಪಕ್ಷವ ತೊರೆದು ತಾರಕೆಯಂತಿಳಿದು ತೋರುವ
ತಂತ್ರಗಾರಿಕೆಯನೆಂದೂ ಗಮನಿಸಿಲ್ಲ.
ಪದುಮದಲಿ ಪಕಳೆಯುಚ್ಚಿ ಪಲ್ಲವಿಸಿದ ಪಾರಿಜಾತಾದಿ ಪುಷ್ಪಗಳನು ಪೆಸರಿಸಿಲ್ಲ
ಓ ನನ್ನ ಪ್ರಿಯನೇ! ಅದಾವುದೋಅದೃಶ್ಯ ಹಸ್ತಗಳು ನಿನ್ನಂಕೆಯಲಿ
ಅಂದವಾಗಿಹ ಅಂಗದೈಸಿರಿಯನು ಮಂದ್ರಯುತ ಮಂಜಿನೊಳಗೆ
ಮುಳುಗಿಸುತಿರುವಂತಿದೆ
ಎತ್ತಲೆತ್ತಲೂ ಬರಿಯ ಕತ್ತಲಿರುವ ಬತ್ತಲ ಲೋಕದಲಿ ಭ್ರಮಿಸುತಿರುವಂತಿದೆ
ದಿಶೆಯಿರದ ನಿಶೆಯೊಳಗೆ ಅನಿಮೇಷಳಾಗಿ ಅಂಡಲೆಯುತಿರುವಂತಿದೆ
ತರಣಿಯೊಂದನೇರಿ ವೈತರಣಿಯಲಿ ವಿಹರಿಸುತಿರುವಂತಿದೆ
ಆಳಕರಾಳದಲಿ ಆಳುತಿರುವ ವಿಕರಾಳರನು ವೀಕ್ಷಿಸುತಿರುವಂತಿದೆ
ಅಪ್ರಜ್ಞೆಯ ಲೋಕದ ಅಪ್ರಕೇತದ ಸಲೀಲದೊಳಗೆ ಅಪ್ರಯೋಜಕಳಾಗುತಿರುವಂತಿದೆ
ಓ ಮಿತ್ರನೇ! ನಿನ್ನಿಂದ ಬೇರಾಗಿ ಬೇರೊಂದು ಲೋಕದಲಿ ಬೆರೆಯಲಾರೆನು.
ನನ್ನಿಂದಗಲುವ ನಿನ್ನಂಗವು ಬೇರೊಂದು ಸಂಗದಲಿ ಭಂಗವಾಗಿ ಭವಿಸುವದ
ಸಹಿಸಲಾರೆನು

ಶೈತ್ಯವಿಹ ದೈತ್ಯಲೋಕದಲಿ ಏಕಾಂಗಿಯಾಗಿಅಲೆಯಲಾರೆನು
ಮೃತ್ಯುವಿನ ಮಹಾವಾಪಿಕೂಪಿಯೊಳು ಪಾಪಿಯೆಂದು ಪರಿಗಣಿತಳಾಗಿರಲಾರೆನು.
ಸೂರ್ಯನಿಂದ ದೂರಾಗಿ ಪ್ರೇಮಿಯಿಂದ ಬೇರಾಗಿ ಬದುಕಿರಲಾರೆನು."
ಮೆಲ್ಲನಾಡಿದ ಉಸಿರು ನಿಲ್ಲುತ ಇಲ್ಲವಾಗಿತ್ತು. ಶಿವವು ಮುಗಿಲಿಗೆ ನೆಗೆದಿರಲು
ದೇಹವು ಶವವಾಗಿತ್ತು.
ಅನ್ನಮಯದಲಿ ಪ್ರಾಣವನಾಡಿಸಿದ ಆತ್ಮವು ಮನೋಮಯವನು ಮೀರಿ ಮಿನುಗಿತ್ತು.
ಅಪ್ರಜ್ಞೆಯ ಅಧಿವಾಸಿಗಳ ಅಂಕೆಗೊಳಪಟ್ಟು ಅಂಧಕಾರ ದೇಶದೆಡೆ ದೂಡಲ್ಪಟ್ಟಿತ್ತು.
ಪ್ರಿಯಳ ಪ್ರಿಯಂವದೆಯ ಪುನರಾಗಮನಕಾಗಿ ಪ್ರಲಾಪಿಸಿದನವ
ಅಮರ್ದಿಸಿದ ಅಧರವನು ಅದುರಿಸುತ ಅಂಗಲಾಚಿದನವ
ನುಡಿಯು ನಿಷ್ಫಲವಾಗಿತ್ತು, ನಿಂದೆಯು ನಿಷ್ಪ್ರಯೋಜಕವಾಗಿತ್ತು, ನಿಲುವು ನಿಶ್ಚಲವಾಗಿತ್ತು
ಅಂತ್ಯದಲಿ ಅಂತರ್ಜ್ಞಾನವೊಂದು ಜಾಗೃತವಾಗಿತ್ತು, ಅಂತಃಚಕ್ಷುವೊಂದು
ತೆರೆದುಕೊಂಡಿತ್ತು.
ಅಂತಃಪ್ರೇರಿತ ಅಂತರ್ದೃಷ್ಟಿಗೆ ದರ್ಶನವೊಂದು ದೃಗ್ಗೋಚರವಾಗಿತ್ತು,
ಮುಕುಟದ ಮುಡಿಗೆ ಕೆಂಗುಲಾಬಿ ಹೊಂಗುಲಾಬಿಗಳ ಮುಡಿದು
ಇಳಿಬಿದ್ದ ನೀಳಕೇಶವನು ಮಾಲಿಂಗನ ಬಳ್ಳಿಯಲಿ ಬಂಧಿಸಿ
ನಿತ್ಯಹರಿದ್ವರ್ಣದ ಹಸಿರುಸೀರೆಯನುಟ್ಟು, ಮಲಯದ ಮೊಲೆಯಲಿ
ಧುಮ್ಮಿಕ್ಕುವ ಹಾಲಜಲಪಾತವನೇ ಹರಿಸುವ ಬನಶಂಕರಿಯರು ಬಂದು
ತೂಗುತಿಹ ತೊಟ್ಟಿಲೊಳು ತೂಕಡಿಸುತಿಹ ತುಂಟನನು ತಕ್ಕೈಸುವಂತವಳ
ಪವಡಿಸಿದ ಪಾರ್ಥಿವವನು ಪುಣ್ಯಜಲದಲಿ ಪ್ರೋಕ್ಷಿಸಿ ಪವಿತ್ರಮಯವಾಗಿಸಿದರು.
'ಇನ್ನವಳು ನಿನ್ನ ಸತಿಯಲ್ಲ ನಮ್ಮ ಸುತೆ'ಯೆನ್ನುತವಳನು ಸುತ್ತಿಬಳಸಿದರು.
ಅಳುತಳುತ ಅಪ್ಪಿಕೊಳಲಿಲ್ಲ, ಮುನ್ನುಗ್ಗಿ ಮುದ್ದಿಸಲಿಲ್ಲ,
ಅಂತಿಮ ದರ್ಶನದಿ ಅಲವತ್ತುಕೊಂಡವನು ಆರ್ತನಾದವ ಗೈಯಲಿಲ್ಲ.
ನಿಶ್ಚಲ ನಿತಾಂತದಿ ನಿಂತು ನಿರೀಕ್ಷಿಸಿರಲು, ವನಶ್ರೀಯನಾಳುವ ವನದೇವಿಯರೆಲ್ಲರೂ
ಒಂದಾಗಿ ಮುಂದಾಗಿ ಬಂದು ಅಂದವಾಗಿಹ ಪ್ರಿಯಂವದಳ ಪಾರ್ಥಿವವನು
ಭೂದೇವಿಯ ಭವನದೊಳಗೆ ಭರಿಸಿ, ಬೃಂದಾವನವನಿಟ್ಟು ಬಣ್ಣಬಣ್ಣದ ಬಳ್ಳಿಗಳನು
ಬೆಳೆಸಿ ಹಬ್ಬಿಸುವಂದದಿ, ಹಸಿರುಹಾಸಿಗೆಯಲವಳನು ಹಸನಾಗಿರಿಸಿದರು.

(ಸಶೇಷ)

# ತ್ರಾಟಕ ಸೂರ್ಯ

## 5

**– ಪುಟ್ಟು ಕುಲಕರ್ಣಿ**

ಈ ಪಂಚ ಭೂತಗಳು ಬ್ರಹ್ಮಾಂಡದ ವ್ಯಾಕರಣದ ಸೂತ್ರ, ಇದರಲ್ಲೇನೂ ಸಂಶಯವಿಲ್ಲ. ಅವು ವೈಶ್ವಿಕ ಅಕ್ಷರಗಳೂ ಹೌದು. ಇದನ್ನೆಲ್ಲ ಅರಿತುಕೊಳ್ಳಬೇಕೆಂದರೆ, ಊರ್ಧ್ವಾತಿಊರ್ಧ್ವದ ಯಾನ ಅವಶ್ಯವಾಗಿದೆ. ಈ ಪಂಚ ಭೂತಗಳು ವಿಶ್ವಾತ್ಮಕವಾಗಿದ್ದರೂ, ಭೂಮಿಗೆ ಅವತರಣಗೊಂಡು ಆಗಮಿಸುತ್ತವೆ, ಏಕೆ? ಆದರೆ ಇಲ್ಲಿಗೆ ಬಂದ ಮೇಲೆ ಆಕಾರ ತಳೆದುಕೊಳ್ಳುತ್ತವೆ ಎಂದರೆ, ಅವಕಾಶದಲ್ಲಿ ಅವುಗಳ ಸ್ವರೂಪ ಯಾವ ರೀತಿ ಇರಬಹುದು? ಅಲ್ಲಿ 'ಏಕ'ವಾಗಿವೆಯೇ? ಅಲ್ಲಿಂದ ವಿಘಟನೆಗೊಳ್ಳುತ್ತಾ ವಿಘಟನೆಗೊಳ್ಳುತ್ತಾ ನಿಯತಿಯ ಗತಿಯಲ್ಲಿ ಸಾಗುತ್ತಿವೆ. ಆಯಾ ಸ್ಥಾನದಲ್ಲಿ, ತಮಗೆ ಒದಗುವ ಆಕಾರವನ್ನು ಪಡೆದುಕೊಂಡು ಜೀವ–ವಿಕಾಸಕ್ಕೆ ಕಾರಣವಾಗಿವೆ. ವಿಶ್ವದಲ್ಲಿ ಏಕವಾಗಿದ್ದ ವಾಯು, ದೇಹಕ್ಕೆ ಪ್ರವೇಶಿಸುತ್ತಲೇ ಪ್ರಾಣಾಪಾನ–ವ್ಯಾನೋದಾನ–ಸಮಾನ ಎಂದು ರೂಪಾಂತರಣಗೊಳ್ಳುತ್ತಿದೆ. ಅಂದರೆ ಹೃದಯಲ್ಲಿ ಚೇತನ ಸ್ವರೂಪದಲ್ಲಿ ಸ್ಥಿತಗೊಂಡ ಅಗ್ನಿ ತತ್ತ್ವವು, ಉಳಿದಂತೆ ಭೂಮಿ, ಜಲ ಮತ್ತು ತನ್ನ ಮೂಲ ನೆಲೆಯಾಗಿರುವ ಆಕಾಶದಲ್ಲಿಯೂ ನಿಯತಿಗೊಂಡಿದೆ. ಇದೆಲ್ಲವನ್ನು ಈ ಗುರುತ್ವದ ಬಲೆಯಲ್ಲಿ ಸಿಲುಕಿಕೊಂಡು ಇರುವ ಬದುಕು ಕಾಣಲು ಸಾಧ್ಯವಿಲ್ಲವಾಗಿದೆಯೇ? ಊರ್ಧ್ವಮುಖೀ ಗಮನದಲ್ಲಿ, ಈ ಗುರುತ್ವವನ್ನು ಮೀರುವದು ಹೇಗೆ ಎಂದೇ ಯೋಗದ ಪ್ರಾರಂಭದ ಪಥವಿದೆ. ಸಶರೀರವಾಗಿಯೇ ಆ ರಹಸ್ಯವನ್ನು ಕರಗತ ಮಾಡಿಕೊಳ್ಳಲು ಸಾಧ್ಯವಿಲ್ಲವೇ ಎಂದು ಆಧುನಿಕ ವಿಜ್ಞಾನ ಪ್ರಶ್ನೆ ಕೇಳುತ್ತಿದೆ. ಯೋಗ ಶಾಸ್ತ್ರದಲ್ಲೇನೋ ಅಣಿಮಾದಿ ಅಷ್ಟ ಸಿದ್ಧಿಗಳನ್ನು ರೂಪಿಸಿದೆ. ವೈಜ್ಞಾನಿಕ ಆವಿಷ್ಕಾರಗಳ ಮೂಲಕ ಈ ಗುರುತ್ವವನ್ನು ಮೀರಿ ಸಾಗಬಹುದಾದ ದಿನಗಳು ಸಮೀಪಿಸುತ್ತಿವೆ.

ನಮ್ಮ ಭೌತಿಕದ ಅಕ್ಷಿಗಳು ಕಾಣಲು ಸಾಧ್ಯವಿಲ್ಲದ ದೂರದ ಸಂಗತಿಗಳನ್ನು, ಇದೀಗ ಇಲ್ಲಿಯೇ ಲಭ್ಯವಿರುವ ಪೀನ ಮತ್ತು ನಿಮ್ನ ಗಾಜಿನ ಸೂಕ್ತ ಹೊಂದಾಣಿಕೆಯ ದೂರದರ್ಶಕದ ಮೂಲಕ ಈಗಾಗಲೇ ಸಾಧ್ಯವಾಗಿದೆ. ಅಂದರೆ ನಮ್ಮ ಮೃಣ್ಮಯದ ಚಕ್ಷು ಅಥವಾ ನಮ್ಮ ಮನಸ್ಸು ಆರೋಹಣಕ್ಕೆ ಇನ್ನೂ ಸಮರ್ಥವಾಗಿಲ್ಲ ಎಂದಾಯಿತು. ಆದರೆ, ಈಗಾಗಲೇ ಇಲ್ಲಿಗೆ ವ್ಯಾಹೃತಿಗಳ ಮೂಲಕ

ತೇಜತ್ವವನ್ನು ಅಥವಾ ಪುರುಷ ತತ್ತ್ವವನ್ನು ಹಾಗೂ ಬೀಜಮಂತ್ರಗಳ ಮೂಲಕ ಶಕ್ತಿ ತತ್ತ್ವದ ಅವತರಣಗಳ ಮೂಲಕ ವಿಕಾಸಗೊಂಡು ಸಾಗುತ್ತಿರುವ ಜಗತ್ತು–ಜ್ಞಾನ–ಸಾಹಿತ್ಯ–ಪರಂಪರೆಯನ್ನು ಗುರುತಿಸುವಲ್ಲಿ ನಾವೀಗಾಗಲೇ ಸಮರ್ಥ–ರಾಗಿದ್ದೇವೆ. ಮುಖ್ಯವಾಗಿ ಇವೆಲ್ಲವೂ "ಆ ಊರ್ಧ್ವದಿಂದ ಅವತರಣಗೊಂಡು" ಆಗಮಿಸಿವೆ. ಇದೀಗ ಆರೋಹಣದ ಹೆಜ್ಜೆ ಪ್ರಾರಂಭವಾಗಬೇಕಿದೆ.

ನಾನೀಗ ಸಾಧನೆಗೆ ಆಯ್ಕೆ ಮಾಡಿಕೊಂಡಿರುವದು 'ಮಹಾಕಾಳೀ' ಸ್ವರೂಪವನ್ನು. ಅದನ್ನು ಈ ವ್ಯಾಹೃತಿಗಳ ಮೂಲಕವೇ ಅನುಭಾವಿಸಬೇಕಿದೆ. ಆಗಮೋಕ್ತವೂ ಸಹಿತ ಇದರ ಬಗೆಗೆ ವಿಧಾಯಕ ವಿಷಯಗಳಲ್ಲಿಯೇ ಅಧ್ಯಯನ ಪಥ ರೂಪಿಸಿದೆ. ಇಲ್ಲಿಯವರೆಗೂ ವಿಕಾಸದ ಹಂತದಲ್ಲಿ ಲಭ್ಯಗೊಳಿಸಿಕೊಂಡಿರುವ ಶಕ್ತಿ ಎಲ್ಲವೂ ಅವರೋಹಣದಲ್ಲಿ ಬಂದ ಪುರುಷ ಸ್ವರೂಪದಲ್ಲಿಯೇ ಇದೆ. ಆದರೆ ಇದೀಗ ಅಧಿರೋಹಣದ ಅವಧಿಯ ಉಷಾ ಕಾಲ. ಈ ಅಧಿರೋಹಣದಲ್ಲಿ ಶಕ್ತಿಯು ಮತ್ತೆ ತನ್ನ ಮೂಲ ಸ್ವರೂಪದ ಸ್ತ್ರೀತ್ವವನ್ನೇ ಪಡೆದುಕೊಳ್ಳುತ್ತಾಳೆ. ಎಲ್ಲಿವರೆಗೂ ಸೃಷ್ಟಿ ಮತ್ತು ಪ್ರಳಯಗಳ ಆವರ್ತನ ಇರುತ್ತದೆಯೋ ಅಲ್ಲಿಯವರೆಗೂ 'ಮಹಾಕಾಳೀ' ಸ್ವರೂಪವು ಇರುತ್ತದೆ. ವ್ಯಾಹೃತಿಗಳಾಗಲೀ ಅಥವಾ ಬೀಜಮಂತ್ರಗಳಾಗಲೀ ಇವು ಮೂಲ ವಿಷಯದ ಸೂತ್ರವಾಗಿ ಆದಿಮ ಸ್ವರೂಪದ ಸಂಕೇತವಾಗುತ್ತವೆ.

'ಬಾಲಾ ತ್ರಿಪುರ ಸುಂದರೀ' ಎನ್ನುವ ಮೂರು ಅಕ್ಷರಗಳ ಮಂತ್ರವೂ ಇದೆ. ಇದನ್ನು ಶ್ರೀವಿದ್ಯಾ ಎಂದೂ ಕರೆಯುತ್ತಾರೆ. ಪೂರ್ವ ಭಾರತದಲ್ಲಿ ಒಂಬತ್ತು ಅಕ್ಷರಗಳ 'ನವಾಕ್ಷರೀ' ವಿಧಾನವಿದೆ. ಕಳಿಂಗ ದೇಶವೂ ಇದನ್ನು ಆರಾಧಿಸುತ್ತಿದೆ. ಬಂಗಾಲ, (ಪ್ರಾಗ್ಜ್ಯೋತಿಷ್ಯ ಪುರ) ಆಸಾಮದಲ್ಲಿ ಇದೇ ಪ್ರಚಲಿತವಿದೆ. ಆಯಾ ಭಾಗದ ವಾತಾವರಣವನ್ನು ಆಧಾರಿಸಿಕೊಂಡು ಹದಿಮೂರು ಅಕ್ಷರಗಳನ್ನು ಆಧಾರಿಸಿದ 'ಪರಾಷೋಡಶೀ', ಹದಿನೈದು ಅಕ್ಷರದ 'ಶ್ರೀವಿದ್ಯಾ', ಹದಿನಾರು ಅಕ್ಷರದ 'ಷೋಡಶಾಕ್ಷರೀ' ಮತ್ತೆ ಇಪ್ಪತ್ತೆಂಟು ಅಕ್ಷರಗಳ 'ಮಹಾಷೋಡಶೀ' ಎಲ್ಲ ಅನುಷ್ಠಾನದಲ್ಲಿವೆ. ಆದರೆ ನಾನು ಇದೀಗ ನವಾಕ್ಷರೀ ವಿಧಾನದಲ್ಲಿಯೇ ಪ್ರಥಮ ಹೆಜ್ಜೆ ಇಡುತ್ತಿದ್ದೇನೆ.

ಪ್ರಾಕೃತಿಕವಾಗಿರುವ ಧಾತುವೊಂದು ಆಧಾರವಾಗಿ ಶಬ್ದವಾಗುವ ವಿಧಾನವು ಹೇಗೆ ಮನುಷ್ಯನ ಮಾನಸಿಕ ಹಂತದಲ್ಲಿ ಆಯಾಮಗಳನ್ನು ರೂಪಿಸುತ್ತಿದೆ, ತನ್ನ

ಅಸ್ತಿತ್ವಕ್ಕೆ ಕೊಂಚವೂ ವಿಚಲನೆ ಆಗದ ಹಾಗೆ, ಮನಸ್ಸನ್ನು ಪ್ರಜ್ಞಾ ಹಂತಕ್ಕೆ ಏರಿಸಿ, ಚಿತ್–ಸ್ವರೂಪವನ್ನು ದರ್ಶಿಸಲು ಮಾರ್ಗದರ್ಶನ ಮಾಡುತ್ತಿದೆ, ಎಲ್ಲವೂ ಪ್ರಶ್ನೆಗಳೇ. ಆದರೆ ಈ 'ತ್ರಾಟಕ ಸೂರ್ಯ'ದ ದರ್ಶನ ಮಾತ್ರ ಈ ರಹಸ್ಯದ ಹೆಬ್ಬಾಗಿಲು ತೆರೆಯುತ್ತದೆ. ಬೀಜಮಂತ್ರಗಳಾಗಲೀ ಅಥವಾ ವ್ಯಾಹೃತಿಗಳೇ ಆಗಲಿ ಅಸ್ತಿತ್ವ ಪಡೆದಿರುವ ಹಂತದಲ್ಲಿ ಭಾಷಾ ಸ್ವರೂಪದಲ್ಲಿ ಧ್ವನಿಯಾಗಿದ್ದರೂ, ನಾದದೊಡನೇ ಸ್ಪಂದನವನ್ನು ಹೇಗೆ ಇರಿಸಿಕೊಂಡೇ ಇರುತ್ತದೆ. ಇವೆಲ್ಲಕ್ಕೂ ಪರಿಹಾರವನ್ನು ಕಾಣಬೇಕೆಂದರೆ, ಒಂದು ನವನವೀನ ಮಾರ್ಗವನ್ನು ಅರಸಲೇಬೇಕಾಗಿದೆ. ಈಗ ಪ್ರಚಲಿತದಲ್ಲಿರುವ ಸಂಸ್ಕೃತಕ್ಕೂ ಮೂಲದಲ್ಲಿ 'ದೇವಭಾಷೆ' ಎನ್ನುವದು ಒಂದು ಇತ್ತೇ? ಅದು ಈ ಎಲ್ಲ ಪೂರ್ಣತೆಯ ಆಯಾಮಗಳನ್ನು ಹೊಂದಿತ್ತೇ? ಇಲ್ಲಿ ಏನನ್ನೇ ಅನುಭವಿಸಿಕೊಂಡು ಅಭಿವ್ಯಕ್ತಿಸಿದರೂ, ಅಲ್ಲಿ ವಾದಗಳ ಉದ್ಭವವಂತೂ ಇದ್ದೇ ಇರುತ್ತದೆ. ತಕರಾರುಗಳ ಸಂಭಾವ್ಯತೆಗಳೇ ಅಧಿಕವಾಗುತ್ತವೆ. ಇವೆಲ್ಲವನ್ನೂ ತಾತ್ಕಾಲಿಕವಾಗಿ ದೂರವಿಟ್ಟುಕೊಂಡು, ಸಂಪೂರ್ಣ ಏಕಾಂತದ ಮೌನದಲ್ಲಿಯೇ ಅನುಸಂಧಾನಿಸಬೇಕಿದೆ. ಇದನ್ನೇ ವಾಸುದೇವ ನನಗೆ ಅಲೀಪುರದ ಉಳಿಯ ಪೆಟ್ಟಿನ ಮೂಲಕ ಶಿಲ್ಪಗೊಳಿಸಿದನೇ?

ದೇವರೆಂದರೆ ಯಾರು? ಏನು? ದೇವರಾದರೂ ಸಹಿತ, ಇಲ್ಲಿ ಕೇವಲ ಚಿಂತನವನ್ನು ಮಾತ್ರವೇ ಮಾಡಿಕೊಂಡಿರಲು, ಎಲ್ಲವನ್ನೂ ತತ್ತ್ವ ಜ್ಞಾನದಲ್ಲಿ ಹುದುಗಿಸಿ ಇಡಲು, ಪೌರಾಣಿಕ ಕಲ್ಪನೆಗಳ ಮೂಲಕ ವ್ಯವಸ್ಥೆಯನ್ನು ರೂಪಿಸಲು, ಕೇವಲ ಶಾಬ್ದಿಕ ಜಾಲದಲ್ಲಿ, ತರ್ಕ–ಜಿಜ್ಞಾಸೆಯಲ್ಲಿ ಆಟವಾಡಲೆಂದು ನನ್ನನ್ನು ಸೃಷ್ಟಿಸಿಲ್ಲ. ಆದರೆ ನೇರವಾಗಿ ಪ್ರೇಮ, ಜ್ಞಾನದೊಡನೆ ಕ್ರಿಯಾ ಪ್ರವೃತ್ತನಾಗಲೆಂದು ಸೃಷ್ಟಿಸಿದ್ದಾನೆ. ಹೀಗಾಗಿ ಈ ದಿವ್ಯತ್ವದ ಹಿನ್ನೆಲೆಯಲ್ಲಿಯೇ ನಾನು ಕ್ರಿಯಾ ಪ್ರವೃತ್ತನಾಗಬೇಕಿದೆ. ಇದರಿಂದ ನಾನೂ ಸಹಿತ ಆ ದಿವ್ಯ ಸತ್ತೆ ಹಾಗೂ ಅದರ ಆತ್ಮಾಭಿವ್ಯಕ್ತಿಯಲ್ಲಿಯೇ ದಿವ್ಯವಾಗಿ ಬಿಡುವೆ; ನಾನು ಖಂಡಿತವಾಗಿಯೂ ದೇವರನ್ನು ಕೇವಲ ದೇವರೆಂದು ಮಾತ್ರವೇ ಪ್ರೀತಿಸುವದಕ್ಕಿಂತ, ಇಡೀ ವಿಶ್ವದ ಜೀವಿಗಳಲ್ಲಿ, ದೃಶ್ಯಗಳಲ್ಲಿ, ಅಧಿಕರಣಗಳಲ್ಲಿ, ಸುಭೋಗಗಳಲ್ಲಿ, ಘಟನಾವಳಿಗಳಲ್ಲಿ – ಇವುಗಳನ್ನು ಇತರರು ಒಳ್ಳೆಯವೆಂದೋ ಅಥವಾ ಕೆಟ್ಟ ಸಂಗತಿಗಳೆಂದು ಪರಿಗಣಿಸಿದರೂ ಸಹಿತ ಮತ್ತು ಅವು ನೈಜವಾಗಿಯೂ ಅಸ್ತಿತ್ವದಲ್ಲಿವೆಯೇ ಅಥವಾ ಕಾಲ್ಪನಿಕವಾಗಿವೆಯೇ, ಅದೃಷ್ಟ ರೂಪದಲ್ಲಿವೆಯೇ ಅಥವಾ ವಿಪತ್ಕಾರಕವಾಗಿವೆಯೋ ಎಂದೆಲ್ಲಾ ಏನೇ ಅಭಿಪ್ರಾಯವಿದ್ದರೂ ಸಹಿತ – ಇವೆಲ್ಲವುಗಳ ಜೊತೆಗೇ ನಾನು

ಕಡ್ಡಾಯವಾಗಿ ದೇವರನ್ನು ಅರ್ಥೈಸಿಕೊಳ್ಳಬೇಕಾಗಿದೆ. ಆ ಸಂದರ್ಭದಲ್ಲಿ ಈ ದೇವರು ಸರ್ವ ಸಮತಾ ಭಾವದ ದಿವ್ಯತ್ವದ ಮತ್ತು ಸುವ್ಯವಸ್ಥೆಯ ಪರಿಪಕ್ವತೆಯ ಹಿನ್ನೆಲೆಯಲ್ಲಿಯೇ ಇದ್ದು, ಆಗ ಪರಿಪೂರ್ಣ, ಪರಿಶುದ್ಧ ಮತ್ತು ಅಗಾಧ ಅನಂತತೆಯಲ್ಲಿಯೇ ನಾನೂ ಸಹಿತ ದೇವನೂ ಮೆಚ್ಚುವಂತಹ ಮತ್ತು ಒಂದಿಲ್ಲೊಂದು ದಿನ ಈ ಎಲ್ಲ ಮನುಕುಲವೂ ದೇವರೇ ಆಗಿಬಿಡುವಂತೆಯೇ ಪ್ರೇಮಿಸುತ್ತ ಕಾರ್ಯಪ್ರವೃತ್ತನಾಗಬೇಕಿದೆ.

ಆರೋಹಣದ ಪ್ರಪ್ರಥಮ ಹೆಜ್ಜೆಯಲ್ಲಿದ್ದೇನೆ. ಇಲ್ಲಿ ಸ್ವರೂಪಗೊಳ್ಳುವ ಲೋಕಗಳು, ಆಯಾ ಹಂತದಲ್ಲಿ ಇರಬಹುದಾದ ತಮದ ಪ್ರಭಾವವನ್ನು ಮತ್ತು ಅಡೆತಡೆಗಳನ್ನು ಮೀರಿ ಚಲಿಸಬೇಕಿದೆ. ಆ ಭೂಮಾತಿಭೂಮವಾಗಿರುವ ಅವಕಾಶದಲ್ಲಿ, ಬೇರೆ ಯಾರೂ ಇರುವದಿಲ್ಲ, ಏಕಾಕಿಯಾಗಿಯೇ ಸಾಗಬೇಕಿದೆ, ಇವೆಲ್ಲ ಸವಾಲುಗಳನ್ನು ಎದುರಿಸಲು ಅವಶ್ಯವಿರುವ ಮನೋಸಾಮರ್ಥ್ಯ, ಆತ್ಮವಿಶ್ವಾಸ ಹಾಗೂ ಇದೆಲ್ಲವೂ ಹೃದಯಪೂರ್ವಕವಾಗಿಯೇ ಸ್ಪಂದಗೊಳ್ಳಬೇಕಿದೆ. ಇದಕ್ಕೆ ಬೇಕಾದದ್ದು ಜ್ಞಾನ ಯೋಗ. ಈ ಜ್ಞಾನ ಯೋಗವನ್ನು ಬದುಕಿನಲ್ಲಿ ಸಹಜವಾಗಿಯೇ ಅನುಷ್ಠಾನಗೊಳಿಸಲೇಬೇಕಾದ ಕರ್ಮ ಯೋಗದ ಮೂಲಕವೇ ಪಡೆದುಕೊಳ್ಳಬೇಕಿದೆ. ವಿಶ್ವಾಸಪೂರ್ಣವಾದ ಕರ್ಮ ಯೋಗದ ಹೆಜ್ಜೆಗಳು ಇಲ್ಲಿ ಮಾರ್ಗದರ್ಶಿಯಾಗುತ್ತವೆ. ಇದಕ್ಕೆ ಭಕ್ತಿ ಯೋಗದ ತನ್ಮಯತೆಯೂ ರಕ್ಷಾ ಕವಚವನ್ನು ಒದಗಿಸುತ್ತದೆ.

ಆದರೆ ಇವೆಲ್ಲವನ್ನೂ ಸದ್ಯ ನಮಗಿರುವ ಮೃಣ್ಮಯದ ಶರೀರದ ಸೀಮಿತ ವ್ಯವಸ್ಥೆಯಲ್ಲಿ ಪಡೆಯುವದು – ಅದೂ ಈಗಿರುವ ದೈಹಿಕ ವ್ಯವಸ್ಥೆಯಲ್ಲಿಯೇ ಪಡೆಯುವದು ಅಸಾಧ್ಯದ ಮಾತಾಗಿದೆ. ಈ ವ್ಯವಸ್ಥೆಯಲ್ಲಿ ಊಹಾತೀತ ಸಾಮರ್ಥ್ಯ ಹೊಂದಿರುವ **ಮನಸ್ಸು** ಒಂದಿದೆ. ಅದರ ಮೂಲಕವೇ ನಾವು ಆರೋಹಣದಲ್ಲಿ ಯಾನವನ್ನು ಕೈಕೊಳ್ಳಬೇಕಿದೆ. ಎಲ್ಲ ಆಯಾಮಗಳನ್ನೂ ದರ್ಶನಗೊಳ್ಳಲು ಸಾಧ್ಯವಿದೆ. ಇಲ್ಲಿರುವ ಅನ್ನ–ಪ್ರಾಣ–ಮನೋಮಯ ಹಂತದಲ್ಲಿ ಈ ಅನುಭವವು 'ವೈಖರೀ ಮತ್ತು ಮಧ್ಯಮಾ' ಹಂತದಲ್ಲಿ ಸ್ಪಂದಗೊಳ್ಳುತ್ತ ಇರುತ್ತದೆ. ಅನ್ನ–ಪ್ರಾಣ–ಮನ–ವಿಜ್ಞಾನ–ಆನಂದ–ಚಿತ್ ಮತ್ತು ಸತ್ ಈ ಏಳೂ ಹಂತಗಳಲ್ಲಿ, ಮಂತ್ರವೂ ಸಹಿತ ವೈಖರೀ–ಮಧ್ಯಮಾ–ಪಶ್ಯಂತೀ–ಪರಾ–ಸಂವಿತ್–ಸೂಕ್ಷ್ಮ–ಶೂನ್ಯ ಎನ್ನುವ ಏಳು ಹಂತದಲ್ಲಿಯೇ ಇದೆ. ಇದು ನಿಯತಿಯೂ ಆಗಿದೆ. ಇದನ್ನೇ ಮಾನವ ಕುಲವು

ಶಬ್ದ–ಧ್ವನಿ–ನಿನಾದ–ಸುನಾದ–ನಾದ–ವಾಕ್–ವಾಣಿ ಎಂದು ಏಳು ಹಂತಗಳಲ್ಲಿ ಅನುಷ್ಠಾನಗೊಳಿಸಿಕೊಂಡಿದೆ.

ಲೌಕಿಕ ಬದುಕಿನ ಮೂಲ ಏಕೆ ಈ ರೀತಿಯ ವ್ಯವಸ್ಥೆಯಿಂದ ದೂರ ಉಳಿಯಿತು ಎನ್ನುವ ಪ್ರಶ್ನೆ ಉದ್ಭವಸಿತು. ಅಧ್ಯಾತ್ಮದ ಅಥವಾ ಈ ರೀತಿಯ ಜ್ಞಾನ ಮಾರ್ಗದ ಅನ್ವೇಷಣೆಗೆ ಸದ್ಯದ ಮಾನವನ ಸ್ವರೂಪ ಸೂಕ್ತವಾಗಿಲ್ಲವೇ? ಅಥವಾ ಆ ಅನುಭವಗಳನ್ನು ಸ್ವೀಕರಿಸಿ ಅನುಷ್ಠಾನಿಸಲು ಬೇಕಾದ ವ್ಯವಸ್ಥೆಯು ದೈವದತ್ತವಾಗಿ ಕೊಡಲ್ಪಟ್ಟಿದ್ದರೂ, ಅದರ ಸಂವೇದನೆ ಇಲ್ಲದೇ ಬದುಕು ನಡೆದಿದೆಯೇ? ಏನೆಲ್ಲಾ ಪ್ರಶ್ನೆಗಳು... ಅಲೀಪುರ ಸೆರೆಮನೆಯಲ್ಲಿ ಆದ ವಾಸುದೇವನ ದರ್ಶನವನ್ನು ನಾನಿನ್ನೂ ಸಂಪೂರ್ಣವಾಗಿ ಕಾರ್ಯಗತಗೊಳಿಸಲು ಸಾಧನೆ ಮಾಡಬೇಕಾಗಿದೆ. ಅದರ ಮೂಲ ಪಾಠವನ್ನು ಆಶೀರ್ವದಿಸುವ ಸಲುವಾಗಿ ಕಾಳಿಮಾತೆಯೇ ನನ್ನನ್ನು ಇಲ್ಲಿಗೆ ಬರುವಂತೆ ಮಾಡಿದಳೇ..? ದೈವೀ ಸಾಕ್ಷಾತ್ಕಾರ ಎಂದರೆ, ನಮ್ಮ ಅಂತರಂಗ ಪ್ರಕೃತಿದತ್ತವಾಗಿಯೇ ಹೊಂದಿರುವ ಅಪಾರ ಪ್ರಮಾಣದ ಸಾಮರ್ಥ್ಯವನ್ನು ದೃಷ್ಟಿಸುವ ಹಂತವಾಗಿದೆ ಎಂದು ಈ ಮೂರ್‍ನಾಲ್ಕು ದಿನ ಯೋಗ ಸಾಧನೆ ತೋರಿಸಿದೆ. ಅಪರಾರ್ಧದ ಹಂತದವರೆಗಿನ ಸದ್ಯದ ಮಾನವನ ಶರೀರ ವ್ಯವಸ್ಥೆಯಲ್ಲಿ ಈ ರೀತಿಯ ಅಲೌಕಿಕ ಸಾಧ್ಯತೆಗಳು ಕಡಿಮೆ ಎನ್ನುವದನ್ನು ಒಪ್ಪಿಕೊಂಡೇ ಎಲ್ಲರೂ ಸಾಧನಾ ಪಥದಲ್ಲಿ ಮುಂದೆ ಸಾಗಿದ್ದಾರೆ. ಈಗಿರುವ ಪ್ರಜ್ಞಾವಂತ ಮನದ ವಿಕಸನವು ಪರಿಶುದ್ಧತೆಯ ಪಾರಮ್ಯವನ್ನೂ ಹೊಂದಿದೆ. ಈ ಹಂತದಲ್ಲಿಯೇ ಅಲ್ಲವೇ ವೇದದ ಋಕ್ಕುಗಳು ಗೋಚರಿಸಿವೆ.

ಸ್ಟೀಮರ್ ಪ್ರಯಾಣದಲ್ಲಿಯೇ ಮತ್ತೆ ಬರಿಸಾಲ ಕಡೆಗೆ ಹೋಗಬೇಕಾಗಿದೆ. ಯಾವ ಉದ್ದೇಶಕ್ಕಾಗಿ ಈ ರೀತಿಯ ಪರ್ಯಟನೆ, ನನ್ನೊಳಗಿನ ನನ್ನನ್ನು ಅರಿತುಕೊಳ್ಳಲೋ ಅಥವಾ ಭವಾನೀ ಭಾರತಿಯ ಹೃದಯಾಭಿಲಾಶೆಯ ಸ್ವಾತಂತ್ರ್ಯದ ಮತ್ತು ಸ್ವರಾಜ್ಯದ ಸ್ಥಾಪನೆಯ ಸಲುವಾಗಿ ಈ ಯಾನವೋ ಎಂದು ದಾರಿಯುದ್ದಕ್ಕೂ ಯೋಚನೆ ತುಂಬಿಕೊಂಡಿತ್ತು.

(ಸಶೇಷ)

## ಸುಪ್ರಭೆಯ ಪಥದಿ ಸುಮನಸದ ಯಾತ್ರೆ ಸರಣಿಯೊಳು ಮೇಳವಾಗಿ

**– ಅನು: ಪುಟ್ಟು ಕುಲಕರ್ಣಿ**

ಸುಪ್ರಭೆಯ ಪಥದಿ ಸುಮನಸದ ಯಾತ್ರೆ ಸರಣಿಯೊಳು ಮೇಳವಾಗಿ
ಬೆಳ್ದಿನದ ಮಾಲೆ ಮಹಾಬೆಳಕಾಗಿ ಹೊಳೆಹೊಳೆದು ಕಾಂತಿಯಾಗಿ,
ಶಾಶ್ವತದ ಸತ್ವ ಬಲವಾಗಿ ಈಗ ನಮ್ಮೊಡನೆ ಸ್ಪಂದಗೊಂಡು
ಅದರ ಶಕ್ತಿಯದು ನಮ್ಮ ಕೃತುವಾಗಿ ನೆಲೆಯಾಗಿ ಹರಸಿತಿಂತು,

ಋತದ ಮೂಲದಲಿ ಚಿನ್ಮಯದ ಜ್ಯೋತಿಪುಂಜವದು ತೇಜವಾಗಿ
ವಿಶ್ವರೂಪವದು ಶಾಶ್ವತದ ನೆಲೆಯ ದರ್ಶನಕೆ ಸಿದ್ಧವಾಗಿ
ಹೊಳೆದು ಬೆಳಗುತಿಹ ಕಿರಣ–ಮಾಲೆಗಳು ನಿತ್ಯತ್ವ ಭಾವವಾಗಿ
ಬುದ್ಧಿಯದು ನಿತ್ಯ ಪ್ರಜ್ವಲಿತ–ಸೂರ್ಯನಂತೆಯೇ ಬಿಂಬವಾಗಿ

ಅನ್ಯರೆಲ್ಲ ಆಂತರ್ಯವರಿಯಲೆನೆ ತಾವಾಗಿ ಸತತ ವಿಫಲ
ಹಲಕೆಲರು ಮಾತ್ರ ದ್ರಷ್ಟಾರರಾಗಿ ದರ್ಶಿಸಲು ಸರ್ವವೆಲ್ಲ;
ಚಿನ್ಮಯದ ದೇವ ಸರ್ವತೋಮುಖನು ವಿಕಸನದ ವ್ಯಾಪ್ತಿಯೊಳಗೆ
ತರ್ಕದಲಿ ಉಳಿದ ಜಾಣ್ಮೆಯಾ ಗುಂಪು ಬರಿ–ಹರಟೆ–ನಿದ್ರೆಯೊಳಗೆ;

ಬರಲಿರುವ ಸರ್ವ ಘಳಿಗೆಯದು ಬರಿದೆ ಒಡಲಾಳ ಅರಿಯದಿರುವ
ಈ ಬುವಿಯ ಮನುಜ ತಾನರಿಯದಿರುವ ಭವಿತವ್ಯ ಗೂಢ–ಭಾವ
ಕಾರ್ಯವದು ಸಿದ್ಧಿಯಾಗದೊಲು ಫಲಿತ–ಜ್ಞಾನವದು ದೊರೆಯದಂತೆ
ವಿಶ್ವಾಸ ಘನದಿ, ಸ್ಪಂದನಕೆ ಸಿಗದು ಜೊತೆಜೊತೆಗೆ ಕಾಣದಂತೆ.

**(ಸಾವಿತ್ರಿ; ದಳ 1 ರೇಣು 4 ಪುಟ 55)**

## ಅಂಕುರಿಸಿಕೊಂಡು ತಾನಭೀಪ್ಸೆಯದು ಸಂಚಲನ ಬಯಸಿತಲ್ಲಿ,

**– ಅನು: ಪುಟ್ಟು ಕುಲಕರ್ಣಿ**

ದಟ್ಟೈಸಿಕೊಂಡು ಆವರಿಸಿ ನಿಂತ ನಿಶೆಯೊಡಲ ಗಾಢದಲ್ಲಿ
ಅಂಕುರಿಸಿಕೊಂಡು ತಾನಭೀಪ್ಸೆಯದು ಸಂಚಲನ ಬಯಸಿತಲ್ಲಿ,
ನಶಿಸಿ ಕರಗಲಿಹ ಪಿಂಡದೇಹದಾ ಜೊತೆಯಲ್ಲಿ ಉದಿತಗೊಂಡು
ಅರೆಬರೆಯ ಪ್ರಜ್ಞೆ ಪಾತಳಿಯ ಹೊಂದಿ ನಿಂತಿರುವ ಮನವು ಇಂದು,

ಅವಿನಾಶಿಯಾದ ಅಮೃತತ್ವ ಬೆಳಕ ಶಾಶ್ವತದ ಪ್ರಭೆಯ ನಡಿಗೆ
ಚಿಜ್ಜ್ಯೋತಿ ಸರ್ವ ಪ್ರಕಟಣದ ಶಿಖೆಯು ಚಿದ್–ಪ್ರಭಾಸದೊಲು ಎಡೆಗೆ
ಚಿತ್–ಅಗ್ನಿಗಿರುವ ಏಕೈಕ ಜಿಹ್ವೆ ಔನ್ನತ್ಯದೆಡೆಗೆ ಎತ್ತಿ
ಪ್ರತಿಭಾಸವೀಗ ಪ್ರಜ್ಯೋತಿಯೊಡನೆ ಸಾಕಾರ ರೂಪವೆತ್ತಿ.

ಇದು ಮಾತ್ರ ತಾನು ಆಲಿಸುತಲಿಹುದು ಈಗದುವು ಶ್ರಾವ್ಯವಾಗೆ,
ತನ್ನದೇ ಕರೆಯ ತದೇಕೈಕ–ಪ್ರತಿಧ್ವನಿಯನೀಗಿಲ್ಲಿ ಜೊತೆಗೆ,
ಸೂಕ್ಷ್ಮಾತಿ ಸೂಕ್ಷ್ಮ ಮರುಸ್ಪಂದ ಬೆಳಕು ಕಂಪನದಿ, ಭೇಟಿ ನಡೆಸಿ,
ಮಾನವನ ಮುಗ್ಧ ಅಜ್ಞಾತ ಹೃದಯದವಕಾಶದೊಳಗೆ ಉದಿಸಿ

ಇದು ಬಂದುದೇಕೆ? ಇದು ಬಂದಿತೇಕೆ? ಎಂದೆಂದು ತಲುಪದಿಂತು
ಇಲ್ಲದಿರೆ ಯಾವ ಯುಕ್ತತ್ವಕಿದುವು ತೊಂದರೆಗೆ ಸಿಲುಕಿತಿಂತು,
ಜೀವನದ ದ್ವಂದ್ವ–ವೈರುಧ್ಯ ರೂಪಕಿದು ದೇವ ವರದ–ರೂಪ
ಅಮೃತತ್ವ ನೆಲೆಯ ಕಾಲದಲಿ ಜನ್ಮ ಬೆಡಗಿನಾ ವಾಣಿ–ದೀಪ

ಕಲ್ಪನಾತೀತ ಕಲ್ಪಗಳ ಕುಂಡ–ಕುಂಡಲದ ರಾಶಿ–ರಾಶಿ
ಕಾಲಸರ್ಪವದು ಮಂಡಲದ ಮಾಲೆ ಅನಂತಾನಂತ ವೇಷಿ
ಒಳಗೊಳಗೆ ಸುತ್ತಿ ನಿರ್ಜ್ಞಾನದವಧಿಯಲ್ಲವಳ ಕೃಷ್ಣ–ಛಾಯೆ
ಭೂ–ದೇವಿಯಂದು ಕಾಲಕಣಗಳಲಿ ಅವಿರತದಿ ಶ್ರಮಿಸಿ ಕಾಯೆ.

**(ಸಾವಿತ್ರಿ; ದಳ 1 ರೇಣು 2 ಪುಟ 50)**

---

**ಟಿಪ್ಪಣಿ:** ಚಿತ್–ಪ್ರಭಾಸ ಎಂದರೆ ಚಿಜ್ಜ್ಯೋತಿಯ ಸರ್ವ ಪ್ರಕಾಶಕ ಶಿಖೆ. ಈ ಪ್ರಭಾಸದ ಬೆಳಕು ಪ್ರತಿಭಾಸವಾಗಿ ಪ್ರಕಟವಾಗುವದು. ಇದನ್ನು ದೀಪ ಉರಿಯುವ ದೃಷ್ಟಾಂತದಲ್ಲಿ ಉರಿಯುತ್ತಿರುವ ಬತ್ತಿಗೆ ಹೋಲಿಸಬಹುದು. ಈ ಉರಿಯುವ ದೀಪದ ಬೆಳಕು 'ಪ್ರತಿಭಾಸ'.

## ಉದಿತಗೊಳ್ಳುತಲಿ ಉಕ್ಕುಕ್ಕಿ ಬರುವ ದೃಶ್ಯಗಳು ದೃಷ್ಟವಿಲ್ಲಿ

**– ಅನು: ಪುಟ್ಟು ಕುಲಕರ್ಣಿ**

ಸುಸ್ಥಿರದ ನೆಲೆಯ ಆ ಧ್ವನಿಯ ತಾಣದಿಂದದುವು ಹೊಮ್ಮಿ ಬಂದು
ಘನಶಾಂತ ನೆಲೆಯ ತಲ್ಲೀನದಲ್ಲಿ ಲೀಲೆಯಲಿ ದೃಶ್ಯಗೊಂಡು
ನಿರ್ವಿಕಾರದಾ ನಿರಾಮಯದ ಆದ್ಯಂತದಚಲದೊಳಗೆ
ನಾಮರಾಹಿತ್ಯ ಆದ್ಯಂತರಹಿತ ಉದ್ಗಮದ ಒಡಲಿನೊಳಗೆ

ತಳವಿರದ ಆಳ ಘನನಿಬಿಡದಾಳದಾ ಅರ್ಣವದ ಸರಣಿಗಳಲಿ
ಉದಿತಗೊಳ್ಳುತಲಿ ಉಕ್ಕುಕ್ಕಿ ಬರುವ ದೃಶ್ಯಗಳು ದೃಷ್ಟವಿಲ್ಲಿ
ಭಾವ–ಲೋಕಗಳ ಭಾವಾನುಭೂತಿ ಹಿಂಜೋಲು ರೂಪವಾಗಿ
ಸೃಷ್ಟಿಗೊಂಡಿರುವ ಲೋಕವಿದು ತಾನು ಸರ್ವ–ಮೂಲವಾಗಿ,

ತನ್ಮಗ್ನದೈಕ್ಯ ತಲ್ಲೀಯಧ್ಯಾನದಲ್ಲಿರುವ ಪ್ರಕೃತಿಯಲ್ಲಿ
ಕಾವಳದಿ ಉಳಿದ ಮೃಣ್ಮಯದ ಒಳಗೆ ಇದು ಮತ್ತೆ ಬಿತ್ತುತಲ್ಲಿ
ಅಂಧನಿಯತಿಯಲಿ ಮಹದಿಚ್ಛೆಯಲ್ಲಿ ಆತ್ಮದಾ ತೇಜ–ಬೀಜ
ಇದರಂತರಂಗದಲ್ಲಿಗ ಧ್ಯಾನಗರ್ಭದಲಿ ವಿಶ್ವ–ವೃಕ್ಷ

ಈಗಿದೋ ಇಲ್ಲಿ ಅವಕಾಶಕಿರುವ ಸ್ವಪ್ನ–ಕಾಣ್ಕೆಗಳ ಮೂಲದಿಂದ
ಚಾಚಿಹುದು ತನ್ನ ಮಾಯಕದ ಬಾಹು–ಬಾಹುಳ್ಯ ವ್ಯಾಪ್ತಿಯಂದ

**(ಸಾವಿತ್ರಿ; ದಳ 1 ರೇಣು 3 ಪುಟ 40)**

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ವೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |
| 34 | ಭವಾನಿ ಭಾರತಿ |
| 35 | ಶಿಕ್ಷಣ |
| 36 | ಯೋಗಾರಂಭ |

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 01/12/2023 ಶುಕ್ರವಾರ ಮತ್ತು 02/12/2023 ಶನಿವಾರದಂದು ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯ ಸಾಂಸ್ಕೃತಿಕ ವಾರ್ಷಿಕೋತ್ಸವ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಅಧ್ಯಕ್ಷರಾದ ಡಾ|| ಅಜಿತ್ ಸಬ್ನೀಸ್ ವಹಿಸಿದರು. ಕಾರ್ಯಕ್ರಮದ ಅತಿಥಿಗಳಾಗಿ ಶ್ರೀಮಾತಾರವಿಂದರ ಭಕ್ತರು, ಸಾಕ್ಷಿ ಟ್ರಸ್ಟ್‌ನ ಕಾರ್ಯನಿರ್ವಾಹಕ ಧರ್ಮದರ್ಶಿ ಆದ ಡಾ|| ರ.ವಿ. ಜಹಾಗೀರದಾರ ಆಗಮಿಸಿದ್ದರು. "ಭಾರತದ ಋಷಿಗಳು ಮತ್ತು ವಿಜ್ಞಾನಿಗಳು" ಎಂಬ ವಿಷಯದ ಮೇಲೆ ವಿದ್ಯಾರ್ಥಿಗಳು ವಿವಿಧ ವಿನೋದಾವಳಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಶಾರದಾಂಬ ಪ್ರಾಸ್ತವಿಕ ಭಾಷಣ ಮಾಡಿದರು. ವಿದ್ಯಾರ್ಥಿಗಳೇ ಎಲ್ಲಾ ಕಾರ್ಯಕ್ರಮಗಳ ಮುಂದಾಳತ್ವ ವಹಿಸಿದ್ದರು. ವಂದೇ ಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಸಮಾರೋಪಗೊಂಡಿತು.

ದಿನಾಂಕ 5ನೇ ಡಿಸೆಂಬರ್ 2023ರ ಮಂಗಳವಾರ "ಶ್ರೀ ಅರವಿಂದರ ಮಹಾಸಮಾಧಿ"ಯ ದಿನ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 7.30 ಗಂಟೆಯಿಂದ 7.50ರ ವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ಸಂಜೆ 5.00 ರಿಂದ 6.30 ಗಂಟೆಯವರೆಗೆ ಶ್ರೀ ಎಸ್.ಎಸ್. ಲಹರಿ, ಧರ್ಮದರ್ಶಿ, ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್, ಬೆಂಗಳೂರು ಇವರು "Works in The Light of Sri Aurobindo" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಪ್ರಸ್ತುತ ಪಡಿಸಲಾಯಿತು.

ದಿನಾಂಕ 15/12/2023 ಶುಕ್ರವಾರ ಶ್ರೀ ಅರವಿಂದರ ಬೆಳಕಿನಲ್ಲಿ "ಲಿವಿಂಗ್ ವೇದ" ಎಂಬ ಸಮ್ಮೇಳನವನ್ನು ಸಾಕ್ಷಿ ಮತ್ತು ಶ್ರೀ ಅರಬಿಂದೋ ಸೊಸೈಟಿ ಇತರ ಸಂಸ್ಥೆಗಳ ಸಹಯೋಗದೊಂದಿಗೆ ಶ್ರೀ ಅರಬಿಂದೋ ಸಂಕೀರ್ಣದಲ್ಲಿ

ಆಯೋಜಿಸಲಾಗಿತ್ತು. ಉದ್ಘಾಟನಾ ಕಾರ್ಯಕ್ರಮಕ್ಕೆ ಅನೇಕ ಗುರು ಬಂಧುಗಳು, ವಿದ್ವಾಂಸರು ಮತ್ತು ವಿವಿಧ ಸಂಸ್ಥೆಗಳಿಂದ ಪ್ರತಿನಿಧಿಗಳು ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ಡಾ॥ ಅಜಿತ್ ಸಬ್ನೀಸ್, ಡಾ॥ ರ.ವಿ. ಜಹಗೀರದಾರ, ಸ್ವಾಮಿ ವೀರೇಶಾನಂದ ಸರಸ್ವತಿ, ಪ್ರೊ. ಮಕರಂದ ಪರಾಂಜಪೆ, ನಿವೃತ್ತ ಐ.ಎ.ಎಸ್. ಅಧಿಕಾರಿ ಭರತ್ ಲಾಲ್ ಮೀನಾ, ಡಾ॥ ರಾಮಚಂದ್ರ ಜಿ. ಭಟ್ ಕೋಟೆಮನೆ, ವಿಶ್ರಾಂತ ಕುಲಪತಿ ಕೆ.ಆರ್. ವೇಣುಗೋಪಾಲ್ ಮತ್ತು ನಿವೃತ್ತ ಪ್ರಾಧ್ಯಾಪಕ ಡಾ॥ ಆರ್. ನಾರಾಯಣ ಸ್ವಾಮಿ ಇವರುಗಳು ವೇದಗಳ ಕುರಿತು ಮಾತನಾಡಿದರು. ಈ ಕಾರ್ಯಕ್ರಮದ ಮುಂದುವರೆದ ಭಾಗ ದಿನಾಂಕ 16 ಮತ್ತು 17ನೇ ಡಿಸೆಂಬರ್ 2023 ಸುವರ್ಣಮುಖಿ ಆಶ್ರಮ, ವಡೇರಹಳ್ಳಿಯಲ್ಲಿ ನೆರವೇರಿತು.




ಫೋಟೊ: ಇಮೇಜಿಂಗ್ ಸಾವಿತ್ರಿ

ಅಂಕುರಿಸಿಕೊಂಡು ತಾನಭೀಪ್ಸೆಯದು ಸಂಚಲನ ಬಯಸಿತಲ್ಲಿ,

**– ಪುಟ್ಟು ಕುಲಕರ್ಣಿ**
**(ಪುಟ 63)**

**RNI No. 22511/1971**
No. of Pages **68 + 4 (Cov. Page)**
KAR Reg No.: RNP/KA/BGS/368/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

ಉದಿತಗೊಳ್ಳುತಲಿ ಉಕ್ಕುಕ್ಕಿ ಬರುವ ದೃಶ್ಯಗಳು ದೃಷ್ಟವಿಲ್ಲಿ

**– ಪುಟ್ಟು ಕುಲಕರ್ಣಿ**
**(ಪುಟ 64)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.